# ಕೊಡಗು ಸಂಗಾತಿ

ಅಗಸ್ಟ್ 1 ರಿಂದ 31, 2003    ಪಾಕ್ಷಿಕ ಪತ್ರಿಕೆ    ( ಆಟಿ 16-31 ಸೋಣಾ 1-14 )

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ  Registered : 10-01-96 TCI Kar. 09592  ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

RNo. : KA/SK/MYS-88/2003  ಸಂಪುಟ : 7  ಸಂಚಿಕೆ : 9-10  ಪುಟಗಳು : 24  ಬೆಲೆ ರೂ. : 12-00










: ಲೇಖನ ಒಳಪುಟದಲ್ಲಿ

## ರಾಷ್ಟ್ರೀಯ ಕ್ರೀಡೆಯಲ್ಲಿ ಮಿನುಗುತ್ತಿರುವ ತ್ರಿಕನ್ನೆ ಸಹೋದರಿಯರು ಮಾನಸ, ನೀತಾ, ನಿರೂಪ.

*ನಾಡಿನ ಜನತೆಗೆ 56 ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು*

## ಮೈಸೂರು ಗೌಡ ವಿದ್ಯಾರ್ಥಿ ನಿಲಯದಲ್ಲಿ ಧ್ವಜಾರೋಹಣ ಕಾರ್ಯಕ್ರಮ:

ದಿನಾಂಕ 15-8-03 ರ ಶುಕ್ರವಾರ ಬೆಳಿಗ್ಗೆ 8-30 ಗಂಟೆಗೆ ಸರಿಯಾಗಿ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಗೌಡ ವಿದ್ಯಾರ್ಥಿ ನಿಲಯದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಸಂಯುಕ್ತವಾಗಿ ಏರ್ಪಡಿಸಲಾಗಿದೆ. ಗೌಡ ಬಂಧುಗಳು ಒಲೆಗೊಬ್ಬರಂತೆ ತಪ್ಪದೆ ಬಂದು ಸಹಕರಿಸುವುದು.

ಅಧ್ಯಕ್ಷರು
ಕೊಡಗು ಮತ್ತು ದ. ಕ. ಜಿಲ್ಲಾ ಮಹಿಳಾ ಒಕ್ಕೂಟ
ಮೈಸೂರು

ಅಧ್ಯಕ್ಷರು
ಕೊಡಗು ಗೌಡ ಮಾಜಿ ಸೈನಿಕರ ಸಂಘ, ಮೈಸೂರು

ಅಧ್ಯಕ್ಷರು
ಕೊಡಗು ಗೌಡ ಸಂಘ, ಮೈಸೂರು



ಜನನ: 12-10-1936
ಮರಣ: 25-7-2003

## ನಿಧನ: ಪೋರೆಯನ ಬೋಪಣ್ಣ ತಮ್ಮಯ್ಯ

ಕುಯ್ಯಂಗೇರಿ ಗ್ರಾಮ, ನಿವೃತ್ತ ರೇಂಜರ್, ಸುಳ್ಯ.

ಮೂಲತಃ ಕುಯ್ಯಂಗೇರಿ ನಿವಾಸಿ ಹಾಲಿ ಸುಳ್ಯದಲ್ಲಿ ನಿವೃತ್ತ ಜೀವನ ಕಳೆಯುತ್ತಿದ್ದು, ದಿನಾಂಕ 25-7-2003 ರಂದು ಬೆಂಗಳೂರಿನಲ್ಲಿ ಹಠಾತ್ತಾಗಿ ವಿಧಿವಶವಾದ ಸಂದರ್ಭದಲ್ಲಿ ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳು.

ದಿವಂಗತರ ಶುದ್ಧ ಮತ್ತು ತಿಥಿಯನ್ನು ಇದೇ ತಿಂಗಳ 24-8-2003 ರಲ್ಲಿ ಕುಯ್ಯಂಗೇರಿ ಗ್ರಾಮದ ಧವಸ ಭಂಡಾರ ಕಟ್ಟಡದಲ್ಲಿ ನಡೆಯಿಸಲು ತೀರ್ಮಾನಿಸಲಾಗಿದೆ. ಕಾಗದ ತಲಪದವರು ಇದನ್ನೇ ಆಮಂತ್ರಣವೆಂದು ಭಾವಿಸಿ ಮೃತರ ಅಪರ ಕ್ರಿಯೆಯಲ್ಲಿ ಭಾಗವಹಿಸುವುದು.

*ದುಃಖತಪ್ತ : ಪತ್ನಿ: ದೇವಮ್ಮ, ಮಕ್ಕಳು: ಆಶಾ, ಉಷಾ* ***Ph.: 08257/ 600613***
*ತಮ್ಮ : ಪೋರೆಯನ ಆನಂದ, ನಾದಿನಿ: ಯಶೋದ, ಮೈಸೂರು.* ***Ph.: 0821/2415983***



ದಿ || ಪಟ್ಟಡ ಸಂಜುಂಡ
ಹೆರವನಾಡು

ಜನನ: 20-3-1913
ಮರಣ: 4-8-1997

## 6 ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನು ಅಗಲಿ 6 ವರ್ಷಗಳು ಸಂದವು. ನೀವು ನಿಮ್ಮ ಜೀವನದಲ್ಲಿ ನೀಡಿದ ಮಾರ್ಗದರ್ಶನ, ಉತ್ತಮ ಗುಣಗಳು ನಮಗಳಿಗೆ ಆಗಿಂದಾಗ್ಯೆ ಮರುಕಳಿಸುತ್ತಿದ್ದೂ ಕಿರಿಯರಾದ ನಾವುಗಳಿಗೆ ಮಾರ್ಗದರ್ಶನವಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ನಮ್ಮ ಕುಲಗುರು ವೆಂಕಟರಮಣನು ಸದಾ ಚಿರಶಾಂತಿಯನ್ನು ನೀಡಲೆಂದು ನಾವುಗಳು ಅನುದಿನವು ಪ್ರಾರ್ಥಿಸುವೆವು.

*ಪತ್ನಿ : ಪಟ್ಟಡ ಸೀತಮ್ಮ, ಮಕ್ಕಳು, ಮರಿಮಕ್ಕಳು, ಸೊಸೆಯಂದಿರು, ಅಳಿಯಂದಿರು*
*ಪ್ರಕಟಣೆ: ಪಟ್ಟಡ ಜಯರಾಮ್, ಸೊಸೆ : ಪೂವಮ್ಮ*
*ಮಕ್ಕಳು : ದಿವ್ಯ ಶಶಿಕಾಂತ್, ದೀಪಕ್ ಮತ್ತು ಉಷಾ, ಅಳಿಯ : ಶಶಿಕಾಂತ್.*
*ಮೈಸೂರು :* ***0821/2303085***

# 2003, ಅಗಸ್ಟ್ 1 ರಿಂದ 31ರ ತನಕ

## ಒಳನೋಟ




| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ | **ಕೊಡಗು ಸಂಗಾತಿ**, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. **ಫೋನ್:0821/2404290**<br>ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94480-87790** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ ಪುಸ್ತಕ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಇತ್ಯಾದಿಗಳು | **ಕೊಡಗು ಸಂಗಾತಿ** C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 **ಪಾಂಡನ ರತಿ ಚಂದ್ರಶೇಖರ್/ ಫೋನ್ : 228380**<br>ಬೈತಡ್ಕ ಜಾನಕಿ ಬೆಳ್ಳಪ್ಪ **ಫೋನ್ : 228047** |
| ವಿರಾಜಪೇಟೆ | ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ **ಫೋನ್** : 08274/456591 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್** : 08276/673370 |
| ಬೆಂಗಳೂರು ಮಹಾನಗರ | ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **12**ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಶ್ರೇಷ್ಠ ಗೌಡ ಸಂಸ್ಕೃತಿ ಪಲಾಯನ ದತ್ತ

ಭಾರತೀಯ ಸಂಸ್ಕೃತಿಯೂ ಪ್ರಪಂಚದ ಇನ್ನಿತರ ದೇಶಗಳು ಕಾಣುವುದಕ್ಕಿಂತ ಬಹು ಪುರಾತನವಾಗಿ ಕಂಡಿರುವ ಸಂಸ್ಕೃತಿ. ಇದು ಸೂರ್ಯನಷ್ಟೆ ಸತ್ಯವಾದುದು. ಸಿಂಧೂ ನಾಗರಿಕತೆಗೆ ಸರಿಸಮಾನವಾಗಿ ಈಜಿಫ್ಟ್, ಗ್ರೀಕ್, ರೋಮ್ ನಾಗರೀಕತೆಗಳನ್ನು ಬಿಟ್ಟರೆ ಬೇರೆ ಎಲ್ಲೂ ಸಂಸ್ಕೃತಿಗಳು ಬೆಳಕಿಗೆ ಬಂದಿರುವುದು ನಾವಿಂದೂ ಕಾಣುವುದಿಲ್ಲ. ಅನೇಕತೆಗಳಲ್ಲಿ ಏಕತೆಯನ್ನು ಕಾಯ್ದುಕೊಂಡು ಭರತ ದೇಶದ ಸಂಸ್ಕೃತಿಯು ತನ್ನ ಇರುವಿಕೆಯನ್ನು ಕಾಪಾಡಿಕೊಂಡು ಬಂದಿರುವುದು ಗಮನಾರ್ಹ. ಚರಿತ್ರೆ ಪ್ರಕಾರ ಗ್ರೀಕರು, ಹೂಣರು, ಮಂಗೋಲಿಯನ್ನರು, ಮುಸ್ಲಿಮರು ಹಾಗೂ ಯುರೋಪಿಯನ್ನರು ಭಾರತಕ್ಕೆ ಧಾಳಿ ಇಟ್ಟು ತಮ್ಮ ಸಂಸ್ಕೃತಿಯ ಕೆಲವು ಅಂಶಗಳನ್ನು ಬಿಟ್ಟು ಗಾಢವಾದ ಛಾಪು ಒತ್ತಿ ಹೋಗಿದ್ದರೂ ಸಹ, ಭಾರತೀಯ ಸಂಸ್ಕೃತಿಯು ತನ್ನದೆ ಆದ ವಿಶಿಷ್ಠ ರೀತಿಯಲ್ಲಿ ಅದನ್ನು ಉಳಿಸಿ ಬೆಳೆಸಿ ಪೋಷಿಸಿ ಇಂದಿಗೂ ಸಹ ಬಲಿಷ್ಠವಾಗಿರುವುದನ್ನು ನಾವಿಂದು ಕಾಣಬಹುದಾಗಿದೆ.

ಮಹಾ ಭಾರತದ ಕಾಲದಲ್ಲಿ ಭರತ ಖಂಡದಲ್ಲಿ 56 ದೇಶಗಳು ಇದ್ದವೆಂದೂ, ಅವುಗಳಲ್ಲಿ "ಗೌಡ" ದೇಶವು ಒಂದಾಗಿತ್ತೆಂದು, ಅದು ಈಗಿನ ಬಂಗಾಳ ಪ್ರದೇಶವನ್ನು ಆವರಿಸಿತ್ತು ಎಂದು ಚರಿತ್ರೆಯಿಂದ ತಿಳಿದು ಬರುತ್ತದೆ. 56 ದೇಶಗಳ ಛಪ್ಪನ್ನಾರು ದೇಶವೆಂತೆಂತಲೂ ಅದರಲ್ಲಿ ಗೌಡ ದೇಶವು ಒಂದಾಗಿತ್ತೆಂದು ನಮ್ಮ ಪೂರ್ವಿಕರು ಹೇಳುತ್ತಿದ್ದರು. ತೆಲುಗು ಭಾಷೆಯಲ್ಲಿ ಛಪ್ಪನ್ನಾರು ಎಂದರೆ 56 ಎಂದರ್ಥ. ಅಂತೆಯೇ "ಗೌಡ ಸಂಸ್ಕೃತಿಯೂ" ಬಹು ಪುರಾತನವಾದ ಬಲಾಡ್ಯವಾದ ಸಂಸ್ಕೃತಿ ಸಂಪ್ರದಾಯದ ಹಿನ್ನಲೆಯುಳ್ಳ ಸಂಸ್ಕೃತಿಯಾಗಿ ಇಂದಿಗೂ ಮುಂದುವರಿದು ಬರುತ್ತಿರುವುದು ಹೆಮ್ಮೆಯ ಸಂಗತಿ. ಇತ್ತೀಚೆಗೆ ಗೌಡ (Gowda)ಜಾತಿ ಕೇಂದ್ರ ಸರ್ಕಾರದ ಹಿಂದುಳಿದ ಜಾತಿ ಪಟ್ಟಿಯಲ್ಲಿ ಪ್ರಕಟವಾಗಿದ್ದವನ್ನು ಸ್ಮರಿಸಬಹುದು. ಇಂಗ್ಲೀಷ್‌ನ Gouda ಮತ್ತು Gowda ಪದಗಳ ವ್ಯತ್ಯಾಸದಿಂದಾಗಿ ಈ ಗೌಡ ಜನಾಂಗವು ಸರಕಾರದ ಹಲವು ಸವಲತ್ತುಗಳಿಂದ ವಂಚಿತವಾಯಿತು.

ದಕ್ಷಣ ಭಾರತದ ಕರ್ನಾಟಕ ಕರಾವಳಿ ತೀರದಲ್ಲೂ ಪಶ್ಚಿಮ ಘಟ್ಟ ಪ್ರದೇಶ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗಿನಲ್ಲಿ ಹೆಚ್ಚಾಗಿ ಈ ಗೌಡ ಜಾತಿಯವರು ವಾಸಿಸುತ್ತಿರುವುದು ಅಲ್ಲದೆ ಕೇರಳದ ಕಾಸರಗೋಡು ತಾಲೂಕಿನಲ್ಲೂ ಸಹ ಇರುವುದು ಸ್ಪಷ್ಟ. ಇತ್ತೀಚೆಗೆ ದೇಶದ ವಿವಿಧ ಭಾಗಗಳಲ್ಲಿ ನೆಲೆನಿಂತವರೆಲ್ಲರೂ ಸೇರಿ ಸುಮಾರು ಐದು ಲಕ್ಷದಷ್ಟು ಜನರಿರಬಹುದೆಂದು ಅಂದಾಜಿಸಿದ್ದಾರೆ. ಹೀಗೆ ಹರಿದು ಹಂಚಿಹೋಗಿದ್ದ ಈ ಸಮುಧಾಯವನ್ನು ಒಂದೆ ಸೂರಿನಡಿಯಲ್ಲಿ ತಂದು ಇವರ ಸಂಸ್ಕೃತಿ ಮತ್ತು ಭಾಷೆಯನ್ನು ಉಳ್ಸಿ ಬೆಳ್ಸಿ ರಕ್ಷಿಸುವುದು ಪರಮ ಕರ್ತವ್ಯವಾಗಿದೆ. ಇವರ ಮಾತೃಭಾಷೆ ಅರೆಗನ್ನಡ ಅಂದರೆ ನಡುಗನ್ನಡ ಅಥವಾ ಮದ್ಯಗನ್ನಡವಾಗಿರುತ್ತದೆ.

ವಿಜಯನಗರ ರಾಜರ ಕಾಲದಲ್ಲಿ ಗೌಡ ಜನರ ಪ್ರಭಾವವು ಅಲ್ಲಲ್ಲಿ ಕಾಣುತ್ತಿರುವ ಕುರುವುಗಳು ಕಂಡು ಬಂದಿದೆ. ಈ ಜನಾಂಗ ಅನುಸರಿಸುತ್ತಿರುವ ಪದ್ಧತಿಗಳು, ಆಚಾರ ವಿಚಾರಗಳು, ಕಂದಾಚಾರಗಳು, ಲಗ್ನ ಕಾರ್ಯದಲ್ಲಿ ಹೇಳುವ ಸೋಭಾನೆಗಳು, ಪಾಳೆಗಾರರ ಗತ್ತು ಗಮ್ಮತ್ತುಗಳು, ಗೋತ್ರಗಳು, ಅವುಗಳಿಗಿರುವ ಸಂಬಂಧಗಳು, ಹತ್ತು ಕುಟುಂಬ ಹದಿನೆಂಟು ಗೋತ್ರಗಳ ಬಗ್ಗೆ ಅವಲೋಕಿಸಿ ಚಿಂತಿಸಿದಾಗ ಗೌಡ ಜನಾಂಗದವರು ರಾಜಾಶ್ರಿತರಾಗಿಯೂ, ಆಶ್ರಿತರಾಜರಾಗಿಯೂ, ಪಾಳೆಗಾರ ರಾಗಿಯೂ, ಮಾಗಣೆ ಗೌಡರಾಗಿಯೂ, ಊರುಗೌಡರಾಗಿಯೂ, ಬುದ್ಧಿವಂತ ಗೌಡನಾಗಿಯೂ, ರಾಜ ಮಹಾರಾಜರಿಗೆ ಹಳ್ಳಿಯಿಂದ ಗದ್ದುಗೆ ತನಕ ಸೇವೆ ಸಲ್ಲಿಸುತ್ತಿದ್ದರೆಂಬುದು ನಿರ್ವಿವಾದ. ಇವರ ಪೂರ್ವಜರು ಕಪ್ಪ ಕಾಣಿಕೆ ಕಂದಾಯಗಳನ್ನು ವಸೂಲು ಮಾಡಿ ತನ್ನ ನಾಯಕರಿಗೆ ಸಂದಾಯಿಸುತ್ತಿದ್ದರು.

ಬ್ರಿಟಿಷರ ಕಾಲದಲ್ಲಿ ಅದಲು ಬದಲು (Barter System) ಪದ್ಧತಿಯಿಂದ ಹಣದ ರೂಪಕ್ಕೆ ಪರಿವರ್ತಿಸಿದಾಗ ಆದ ನ್ಯೂನತೆಯನ್ನು ಸಹಿಸಿದ ಇವರು 1837 ರಲ್ಲಿ ಪಶ್ಚಿಮ ಘಟ್ಟ ಪ್ರದೇಶದ ಗೌಡ ರೈತರು ದಂಗೆಯೆದ್ದರು. ಅದುವೇ ಕೆನರಾ ಬಂಡಾಯವೆಂದು ಪ್ರಖ್ಯಾತಿ ಆಯಿತು. ಕೆನರಾ ಬಂಡಾಯವು ಗೌಡರ ನಾಯಕತ್ವದಲ್ಲಿ ನಡೆಯಿತ್ತೆನ್ನುವುದು ಚರಿತ್ರಾರ್ಹ. ಮೊದಲನೆ ಸ್ವಾತಂತ್ರ್ಯ ಸಂಗ್ರಾಮ 1827 ರಲ್ಲಿ ಕಿತ್ತೂರಿನಲ್ಲಿ ನಡೆದರೆ, 2 ನೇಯದಾಗಿ 1837ರಲ್ಲಿ ಅಮರ ಸುಳ್ಯದಲ್ಲಿ ನಡೆಯಿತು. ವಸಾಹತ್ ಶಾಹಿ ಬ್ರಿಟಿಷರ ಅಧಿನವಿದ್ದ ಮಂಗಳೂರನ್ನು ವಶಪಡಿಸಿ 13 ದಿನಗಳ ಕಾಲ ಗೌಡ ನಾಯಕರು ಆಡಳಿತ ನಡೆಸಿದರು. ಮೂರನೇ ಮಹಾ ಸಂಗ್ರಾಮವೇ 1857 ರ ರಾಷ್ಟ್ರೀಯ ಸಿಪಾಯಿ ದಂಗೆ.

ವಂಶವಾಹಿನಿಯಾಗಿ ಗೌಡಧಮನಿಗಳಲ್ಲಿ ಹರಿಯುವ ಉತ್ತಮ ಅಂಶಗಳ ಗುಣವನ್ನು ಹೊಂದಿರುವ ಗೌಡ ಜನಾಂಗ ಇತ್ತೀಚೆಗೆ ಸ್ವಾತಂತ್ರ್ಯ ಲಭಿಸಿದ ಈ 55 ವರ್ಷಗಳ ಇತಿಹಾಸದಲ್ಲಿ ತಿಳಿದೋ ತಿಳಿಯದೆಯೋ ಪಾಶ್ಚಾತ್ಯರ "ಅಂಬು ಇಲ್ಲ ಇಂಬು ಇಲ್ಲದ" ತಲೆಬುಡವಿಲ್ಲದ ಅಪಕ್ವ ಸಂಸ್ಕೃತಿಗೆ ಮರುಳಾಗಿ ಅದನ್ನು ಆಚರಿಸುತ್ತಿರುವುದು ನಮ್ಮ ಪೂರ್ವಿಕರಿಗೆ ಮಾಡುತ್ತಿರುವ ಅನ್ಯಾಯ ದ್ರೋಹ ವೆಂದು ತಿಳಿಯಬೇಕಾಗುತ್ತದೆ. ಗೌಡರ ಹುಟ್ಟು, ಬದುಕು, ಸಾವು, ಇಂತಹ ಅಮೂಲ್ಯ ವಿಚಾರದಲ್ಲಿ ನಡೆದು ಬಂದ, ಈಗ ನಡೆಯುತ್ತಿರುವ ಸಂಪ್ರದಾಯಗಳು ಭಾರತದಲ್ಲಿಯೇ ಶ್ರೇಷ್ಠವಾದುವುಗಳೆಂದು ತಿಳಿಯಬಹುದು. ಉದಾ: ಗೌಡರು ಸತ್ತನಂತರ 16 ನೇಯ ದಿವಸ ಕೊಲೆ ಸೇರಿಸುವಿಕೆ ಕಾರ್ಯಕ್ರಮವಿದೆ. 16ಬಾಳೆ ತುದಿಯೆಲೆಯಲ್ಲಿ 16 ಬತ್ತಿಗೆ ಎಣ್ಣೆ

3 ನೇ ಪುಟಕ್ಕೆ

**ಗೌಡ ಸಂಸ್ಕೃತಿಯು ಸಂಶೋಧನೆಗೆ ಯೋಗ್ಯವಲ್ಲವೆ ?- ಸಾಂಸ್ಕೃತಿಕ ಅಕಾಡೆಮಿ ಏನು ಮಾಡುತ್ತಿದೆ?**

# "ರಾಷ್ಟ್ರ ಮಟ್ಟದಲ್ಲಿ ಮಿನುಗುತ್ತಿರುವ ಕ್ರೀಡಾಪಟು ಕು॥ ಕೊಪ್ಪತ್ತಡ್ಕ ಮಾನಸ ಪದ್ಮಯ್ಯಗೌಡ"



ಕಳೆದ ಮೇ 15 ರಿಂದ 29 ರ ತನಕ ಪಶ್ಚಿಮ ಬಂಗಾಳದ ಡಾರ್ಜಲಿಂಗ್ ನಲ್ಲಿ ರಾಷ್ಟ್ರಮಟ್ಟದ ಕ್ಲೈಂಬಿಂಗ್ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಗೆ ಕರ್ನಾಟಕದ N.C.C.ಯ 15 ನೇ ಬೆಟಾಲಿಯನ್‌ನ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಿಂದ ಆಯ್ಕೆಯಾದ ಏಕೈಕ ವಿದ್ಯಾರ್ಥಿನಿ ಮಾನಸ. ಕಠಿಣ ಶ್ರಮದಿಂದ ಕೂಡಿದ ರಾಷ್ಟ್ರ ಮಟ್ಟದ ಇಂಡೋರ್ ರಾಕ್ ಕ್ಲೈಂಬಿಂಗ್ ಸ್ಪರ್ಧೆಯಲ್ಲಿ ಈಕೆಯು ದ್ವಿತೀಯ ಬಹುಮಾನ ಪಡೆದಳು. ಹಾಗೆಯೇ ರಾಷ್ಟ್ರೀಯ ಮಟ್ಟದಲ್ಲಿ ನಡೆದ ಕ್ರಾಸ್‌ಕಂಟ್ರಿ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದು ಪೋಷಕರಿಗೂ, ಮನೆತನಕ್ಕೂ, ಜನಾಂಗಕ್ಕೂ, ನಾಡಿಗೂ ಕೀರ್ತಿಯನ್ನು ತಂದಿರುತ್ತಾಳೆ.

ಈ ಶಿಬಿರದಲ್ಲಿ ಒಟ್ಟು 16 ವಿದ್ಯಾರ್ಥಿನಿಯರಿದ್ದರು. ಅವರಲ್ಲಿ ಕರ್ನಾಟಕದ 3 ಜನ ವಿದ್ಯಾರ್ಥಿಗಳಿದ್ದರು.

ಇವಳು ಹಾಸನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ತನಗಿಷ್ಟವಾದ ಪಿ.ಸಿ.ಎಂ.ಬಿ. ವಿಷಯವನ್ನು ಆಯ್ಕೆ ಮಾಡಿ ಓದುತ್ತಿದ್ದಾಳೆ. ಇವಳು ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಕ್ರೀಡಾ ಕೂಟಗಳಲ್ಲಿ ಚಾಂಪಿಯನ್‌ಶಿಫ್ ಪಟ್ಟವನ್ನು ತನ್ನದಾಗಿಸಿಕೊಂಡಿದ್ದಳು. ಅಥ್ಲೇಟಿಕ್, ಖೋಖೋ, ಜಾವಲನ್ ಥ್ರೋ, ಥ್ರೋಬಾಲ್ ಇನ್ನೂ ಅನೇಕ ಕ್ರೀಡೆಗಳಲ್ಲಿ ಹಲವಾರು ಪ್ರಶಸ್ತಿ ಗಳಿಸಿದ ಕೀರ್ತಿ ಇವಳದು.

ಗುಜರಾತ್ ರಾಜ್ಯದ ಗಾಂಧಿನಗರದಲ್ಲಿ ನಡೆದ ರಾಷ್ಟ್ರೀಯ ಸಬ್.ಜೂನಿಯರ್ ಹಾಕಿ ಸ್ಪರ್ಧೆಗೇ ಎಂಟನೇ ತರಗತಿಯಲ್ಲಿದ್ದಾಲೇ ಆಯ್ಕೆ ಆಗಿದ್ದಳು. ಹಾಗೇ 9 ನೇ ತರಗತಿಯಲ್ಲಿದ್ದಾಗ ಕರ್ನಾಟಕ ರಾಜ್ಯದಿಂದ ಭೂಪಾಲ್‌ನಲ್ಲಿ ನಡೆದ ಹಾಕಿ ಸ್ಪರ್ಧೆಗೆ ಆಯ್ಕೆ ಆಗಿದ್ದಳು. ಕಳೆದ ವರ್ಷ ಅಕ್ಟೋಬರ್ ನಲ್ಲಿ ದೆಹಲಿಯಲ್ಲಿ ರಾಷ್ಟ್ರ ಮಟ್ಟದ "ಜವಹರ್‌ಲಾಲ್ ನೆಹರು ಹಾಕಿ ಟೋರ್ನಮೆಂಟ್ ಫಾರ್ ಗರ್ಲ್ಸ್ ಅಂಡರ್ 17" ಹಾಕಿ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಯಲ್ಲಿ ಮಾನಸಳು ಕರ್ನಾಟಕ I ಬೆಟಾಲಿಯನ್ NCCಯ ಪರವಾಗಿ ಪ್ರತಿನಿಧಿಸಿದ್ದಳು. ಈ ಸ್ಪರ್ಧೆಯಲ್ಲಿ ಮಾನಸ ಇದ್ದ ಕರ್ನಾಟಕ ಟೀಮ್ ಸೆಮಿ ಫೈನಲ್ ತಲುಪಿತ್ತು ಎಂಬುದು ಗಮನಾರ್ಹ.

ಈಕೆಯ ಸಹೋದರಿಯರಾದ ನೀತಾ ಮತ್ತು ನಿರೂಪಾ ಅಕ್ಕನ ಹಾದಿಯಲ್ಲಿಯೇ ಮುಂದುವರೆಯುತ್ತಿರುವರು. ನೀತಾ ಮತ್ತು ನಿರೂಪಾ ಅವಳಿ ಜವಳಿ ಮಕ್ಕಳಾಗಿದ್ದು 1ನೇ ಪಿಯುಸಿಯಲ್ಲಿ ಓದುತ್ತಿರುವರು. ಅಕ್ಕ ತಂಗಿಯರು ಜಾವೆಲಿನ್ ಥ್ರೋ, ಥ್ರೋಬಾಲ್, ಹಾಕಿ, ಖೋಖೋ, 400m, 800m, 1800m ಓಟದಲ್ಲಿಯೂ ಜಿಲ್ಲೆ, ರಾಜ್ಯ ಮಟ್ಟದಲ್ಲಿ ಹಲವಾರು ಬಾರಿ ಪ್ರತಿನಿಧಿಸಿದ್ದಾರೆ. ರಾಷ್ಟ್ರ ಮಟ್ಟದಲ್ಲಿಯೂ ಮಿನುಗುವ ಸಮಯ ದೂರವಿಲ್ಲ. ಮೂವರು ಅಕ್ಕ, ತಂಗಿಯರೆಲ್ಲರೂ ಒಂದೇ ವರಸೆಯಲ್ಲಿ ಮುಂದುವರೆಯುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಚಾರ.

ಮಾನಸಳ ತಂದೆ ಕೊಪ್ಪತ್ತಡ್ಕ ಪದ್ಮಯ್ಯಗೌಡರು ಸುಳ್ಯ ತಾಲ್ಲೂಕು ಪಡ್ನೂರು ಗ್ರಾಮದವರು. ತಾಯಿ ಮಡಿಕೇರಿ ತಾಲ್ಲೂಕು ಬಿಳಿಗೇರಿ ಗ್ರಾಮದ ಬಾಳಾಡಿ ದೇವಯ್ಯನವರ ಪುತ್ರಿ ಭಾಗೀರಥಿಯವರು. ಇವರ ಪ್ರಥಮ ಪುತ್ರಿಯಾದ ಮಾನಸ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶೇ 86 ರಷ್ಟು ಅಂಕಗಳಿಸಿದ್ದಳು. ಹಾಸನದಲ್ಲಿ ಸ್ಟುಡಿಯೋ ಮಾಲೀಕರಾಗಿದ್ದು ತಮ್ಮ ಮಕ್ಕಳ ಭವಿಷ್ಯದಲ್ಲಿ ಅಪಾರ ನಂಬಿಕೆ ಭರವಸೆಯನ್ನಿಟ್ಟಿರುವರ ಕೊಪ್ಪತ್ತಡ್ಕ ಪದ್ಮಯ್ಯಗೌಡರ "ತ್ರಿಕನ್ಯೆ" ಪುತ್ರಿಯರ ಸುಂದರ ಭವಿಷ್ಯವು "ಶ್ರೀ ವೆಂಕಟರಮಣ ಸ್ವಾಮಿ" ಮತ್ತು ಶಂಗೇರಿ ಶಾರದಾಂಬೆಯರ ಕೃಪಾ ಕಟಾಕ್ಷೆಯಿಂದ ಉಜ್ವಲವಾಗಿ ಬೆಳಗಿಲಿ ನಾಡಿಗೆ, ಜನಾಂಗಕ್ಕೆ ಕೀರ್ತಿ ತರಲೆಂದು ಈ ಸಂದರ್ಭದಲ್ಲಿ ಸಂಗಾತಿ ಶುಭ ಹಾರೈಸುತ್ತದೆ.

ಲೇಖನ: ಪಟ್ಟಡ ಪ್ರಭಾಕರ, ಗೌರವ ಸಂಪಾದಕ, ಕೊ. ಸಂ.

---

2 ನೇ ಪುಟದಿಂದ

ಸವರಿ ದೀಪ ಹಚ್ಚಿ, ಸತ್ತವ್ಯಕ್ತಿ ಇಷ್ಟಪಡುತ್ತಿದ್ದ ಆಹಾರ ವಸ್ತುಗಳನ್ನು ಇಟ್ಟು, ಅದೇ ವೇಳೆ ಇನ್ನೊಂದು ತುದಿಯೆಲೆಯಲ್ಲಿ ಬತ್ತಿ ಹಚ್ಚಿದ ನೆಣೆಯಿರುವುದು. ಕಾಲಕಂಡ ಹಿರಿಯರನ್ನು ಪ್ರಾರ್ಥಿಸಿ 17 ನೇ ತುದಿಯೆಲೆಯನ್ನು 16 ಎಲೆಗಳ ಜೊತೆಗೆ ಸೇರಿಸಿ ನಂತರ ಮೊದಲಿನ 1 ನೇ ಎಲೆಯನ್ನು ಬದಿಗೆ ಸರಿಸಿ ನಿನಗೆ ಮುಕ್ತಿ ದೊರಕಿದೆಯೆಂದು ಹೇಳುವರು. ಕಡೆಗೂ 16 ಎಲೆಗಳು ಎಂದರೆ ಕಾಲಕಂಡ 16 ಕೊಲೆಗಳು ಜೊತೆಯಾಗಿವೆ ಎಂದರ್ಥ. ಹೀಗೆ ಯಾವ ಪ್ರದೇಶದಲ್ಲೂ ಇಷ್ಟು ಸತ್ತ ಕೊಲೆಗಳನ್ನು ನೆನೆಯುವುದು ಅಪರೂಪ. ಆದರೆ ಗೌಡರಲ್ಲಿದೆ. ಇದು ವಿಶೇಷ.

ಗೌಡರ ಸೋಭಾನೆಗಳು ಗೌಡರ ಯುವ ಪೀಳಿಗೆಗೆ ನಿಧಿ ಇದ್ದಂತೆ. ಅದನ್ನು ಉಳ್ಸಿ ಬೆಳ್ಸಿ, ಸಂಶೋಧನೆಗೆ ಒಳಪಡಿಸಿ ಪೋಷಿಸುವುದು ಗೌಡ ಸಂಘಟನೆಗಳ ಮುಖಂಡರೆನಿಸಿದ ನೇತಾರರಿಗೆ ಸೇರಿದ್ದು. ಗೌಡ ಸಂಘಟನೆಯ ಕೆಲವು ಪ್ರಮುಖರು ಅಧಿಕಾರ ದಾಹಕ್ಕಾಗಿಯೊ, ರಾಜಕೀಯ ಲಾಭಕ್ಕಾಗಿಯೋ ಅಥವಾ ನಾಮಾಕಾವಸ್ಥೆಗೆ ಆಡಳಿತ ಮಂಡಳಿಯಲ್ಲಿ ಸೇರ್ಪಡೆಗೊಂಡು ಕಾಲಹರಣ ಮಾಡುವುದಕ್ಕಿಂತ, ಆತ್ಮ ಸಾಕ್ಷಿಯಾಗಿ ನಿಜವಾದ ಸಮಾಜದ ಅಭಿವೃದ್ಧಿ ಕಾಳಜಿಯ ನಿಷ್ಠೆ, ತ್ಯಾಗ, ಬಲಿದಾನ ಮನೋಭಾವನೆಯಿಂದ ಸೇರ್ಪಡೆಗೊಂಡು ಕಾರ್ಯ ಪ್ರವರ್ತ್ತರಾದರೆ ಮಾತ್ರ "ಗೌಡ ಸಂಸ್ಕೃತಿ" ಅಭಿವೃದ್ಧಿ ಪಥದತ್ತ ಸಾಗುವ ದಿನಗಳು ದೂರವಿಲ್ಲ. ಒಂದು ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿ" ಯೆಂಬ ಶ್ಲೋಕದಲ್ಲಿ ನಮಗಿನ್ನು ನಂಬಿಗೆ ಇದೆ.

---

## ಗೌಡ ವಿಧ್ಯಾ ಸಂಘದಿಂದ ಪ್ರೋತ್ಸಾಹ ಧನ ವಿತರಣೆ



ಬಡ ವಿದ್ಯಾರ್ಥಿಗಳಿಗೆ ಗೌಡ ವಿದ್ಯಾ ಸಂಘದ-ಅಧ್ಯಕ್ಷರಾದ ಹೊಸೂರು ರಮೇಶ್ ಜೋಯಪ್ಪ ಸಹಾಯಧನ ವಿತರಿಸುತ್ತಿರುವುದು.

ಕೊಡಗು ಗೌಡ ವಿಧ್ಯಾ ಸಂಘದ ವತಿಯಿಂದ ಇತ್ತೀಚೆಗೆ ಸಂಘದ ಸಭಾಂಗಣದಲ್ಲಿ ಆರ್ಥಿಕವಾಗಿ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಹೊಸೂರು ರಮೇಶ್ ಅವರು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಶ್ರೇಣಿ ಗಳಿಸಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಂಘದ ಉಪಾಧ್ಯಕ್ಷ ಸೂರ್ತಲೆ ಸೋಮಣ್ಣ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪ್ರೋತ್ಸಾಹ ಧನಕ್ಕೆ 34 ಅರ್ಜಿಗಳು ಬಂದಿದ್ದು, ಅದರಲ್ಲಿ 29 ವಿದ್ಯಾರ್ಥಿಗಳಿಗೆ ಸಹಾಯ ಧನ ವಿತರಿಸಲಾಯಿತು. ಸಮಾರಂಭದಲ್ಲಿ ಸಂಘದ ಖಜಾಂಚಿ ಪೊನ್ನಚನ ಸೋಮಣ್ಣ, ಕಾರ್ಯದರ್ಶಿ ಅಂಬೆಕಲ್ ನವೀನ್ ಕುಶಾಲಪ್ಪ, ನಿರ್ದೇಶಕರಾದ ಬೆಪ್ಪುರನ ಮೇದಪ್ಪ, ಪರ್ಲಕೋಟಿ ಕಾರ್ಯಪ್ಪ, ಕೋಡಿ ಚಂದ್ರಶೇಖರ್ ಅಮೆಮನೆ ಕಮಲ ಗಣಪತಿ, ಯಾಲದಾಳು ಸಾವಿತ್ರಿ, ಸೂದನ ಈರಪ್ಪ ಮತ್ತಿತರರು ಉಪಸ್ಥಿತರಿದ್ದರು. ಬೊಮ್ಮಯ್ಯನ ಪ್ರಿಯಾ ಉಲ್ಲಾಸ್ ಪ್ರಾರ್ಥಿಸಿ, ಕೋಡಿ ಚಂದ್ರಶೇಖರ್ ಸ್ವಾಗತಿಸಿದರು. ಕಮಲಾ-ಗಣಪತಿ ವಂದಿಸಿದರು. ಈ ಸಂದರ್ಭ ವನಮಹೋತ್ಸವವನ್ನು ಆಚರಿಸಲಾಯಿತು.

-ಸಂಗಾತಿ

### ಸಕ್ಕರೆ ಖಾಯಿಲೆಯ ಮುನ್ಸೂಚನೆಗ

*ಜ್ಯಾಸ್ತಿ ಕುಡಿಯಕ್ಕೆ ಆದರೆ, ಅತೀ ಹೊಟ್ಟೆ, ಇಸಿರೇ, ತೂಕ ಕಮ್ಮಿ ಆದರೆ, ಪದೆ ಪದೆ ಉಚ್ಚೆ ಹೊಯ್ಯುದು, ಸುಸ್ತು, ನಿಲ್ಲಿಕೆ ಬೊತ್ತದೆ, ಕೈ ಕಾಲ್, ಸೊಂಟ ಪುಳೆದು ಇದ್ದರೆ ನೀವ್ ವೈದ್ಯರನ್ನ ಸಂಪರ್ಕಿಸಿಕೆ ಮರೆಯಕ್ಕಾಗದ್.*

-ಸಂಗಾತಿ.

## ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾ ಸಭೆ - 2003

ದಿನಾಂಕ 29-6-2003 ನೇ ಭಾನುವಾರ ಕೊ. ಗೌ. ಮಾ. ಸೈ. ಕ್ಷೆ. ಸಂಘದ ವಾರ್ಷಿಕ ಮಹಾ ಸಭೆ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿನಿಲಯದಲ್ಲಿ ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರಜಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರನ್ನು ಸಂಘದ ಉಪಾಧ್ಯಕ್ಷರಾದ ಕುಯ್ಯಮುಡಿ ರಾಮಪ್ಪನವರು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿಯಾದ ಕೊಂಬಾರನ ಸುಬ್ಬಯ್ಯನವರು ಆಡಳಿತ ಮಂಡಳಿಯ ವರದಿಯನ್ನು ವಾಚಿಸಿದರು. ನಂತರ ನಡೆದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯು ಒಕ್ಕೊರಳಿನಿಂದ ಅಂಗೀಕರಿಸಿತು. ಇದನ್ನು ಕತ್ರಿ ಕೊಲ್ಲಿ ವಸಂತ ಕುಮಾರ್‌ರವರು ಅನುಮೋದಿಸಿದರು.

ಕಾರ್ಯಕ್ರಮದಂತೆ ಆಡಳಿತ ಮಂಡಳಿ, ಆಯ್ಕೆಯಲ್ಲಿ ಕತ್ರಿಕೊಲ್ಲಿ ವಸಂತ್‌ಕುಮಾರ್ ಮತ್ತು ಚಪ್ಪೇರ ತಮ್ಮಯ್ಯನವರನ್ನು ಹೊಸದಾಗಿ ನಿರ್ದೇಶಕರುಗಳಾಗಿ ಆಯ್ಕೆ ಮಾಡಲಾಯಿತು. ಉಳಿದಂತೆ ಹಳೆಯ ಮಂಡಳಿಯವರೆ ಮುಂದುವರಿಯುವಂತೆ ಸರ್ವಾನುಮತದಿಂದ ಮಹಾ ಸಭೆ ನಿರ್ದೇಶಿಸಿತು. ಸಂಘದ ಸಲಹೆಗಾರರನ್ನಾಗಿ ಪಟ್ಟಡ ಪ್ರಭಾಕರ್ ಹಾಗೂ ಕೊಡಗಿನಿಂದ ಸಕ್ರೀಯ ಕಾರ್ಯಕರ್ತರಾಗಿ ಪೊನ್ನಚನ ಸೋಮಯ್ಯನವರನ್ನು ಆಯ್ಕೆ ಮಾಡಲಾಯಿತು.

2003-2004ನೇ ಸಾಲಿಗೆ ಆಯ್ಕೆ ಆದ ಆಡಳಿತ ಮಂಡಳಿಯವರು ಇಂತಿರುವರು.

ಅಧ್ಯಕ್ಷರಾಗಿ ತಡಿಯಪ್ಪನ ಕುಮಾರ ಜಯನವರು, ಉಪಾಧ್ಯಕ್ಷರಾಗಿ ಕುಯ್ಯಮುಡಿ ರಾಮಪ್ಪನವರು, ಕಾರ್ಯದರ್ಶಿಯಾಗಿ ಕೊಂಬಾರನ ಸುಬ್ಬನವರು, ಖಜಾಂಚಿಯಾಗಿ ಕರ್ಣಯ್ಯನ ಮುದ್ದಯ್ಯನವರು, ನಿರ್ದೇಶಕರಾಗಿ ಕರ್ಣಯ್ಯನ ಲಕ್ಷ್ಮಣ, ಅಂಚೆಮನೆ ಗಣೇಶ್, ಕಾಳೇರಮ್ಮನ ನಾಣಯ್ಯ, ಕೊಂಬಂಡ್ರ ಭೀಮಯ್ಯ, ಕೂಡಕಂಡಿ ಅಪ್ಪಾಜಿ, ಚಪ್ಪೆಮನೆ ತಮ್ಮಯ್ಯನವರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಂಘದ ಮಾಜಿ ಕಾರ್ಯದರ್ಶಿಯವರಾದ ಕರ್ಣಯ್ಯನ ಲಕ್ಷ್ಮಣನವರು ಸಂಘದ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ ಪ್ರೀತಿ, ವಿಶ್ವಾಸದಿಂದ ಒಬ್ಬರನ್ನೊಬ್ಬರೂ ಅರಿತು, ಶ್ರಮಿಸಬೇಕೆಂದು ಕರೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ತಡಿಯಪ್ಪನ ಕುಮಾರ ಜಯನವರು ಮಾತನಾಡಿ ಸಂಘದ ಸದಸ್ಯರು ಸಂಘದ ಪ್ರತಿಯೊಂದು ಕಾರ್ಯಕ್ರಮಕ್ಕೆ ಸಕಾಲದಲ್ಲಿ ಸ್ಪಂದಿಸಬೇಕೆಂದು ವಿನಂತಿಸಿದರು. ಸಂಘ ಕೈ ಗೊಳ್ಳುವ ಅಭಿವೃದ್ಧಿ ಯೋಜನೆಗಳಿಗೆ ಸಂಪೂರ್ಣ ಸಹಕಾರ ನೀಡಬೇಕಂದರಲ್ಲದೆ, ಈ ವರ್ಷದಿಂದ ಸಂಘ ಕೈಗೊಂಡಿರುವ ಅನಾಥ/ ಕಡು ಬಡವ ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ಇಬ್ಬರು ಮಕ್ಕಳನ್ನು ದತ್ತು ತೆಗೆದುಕೊಂಡು ಸಂಘದ ಆರ್ಥಿಕತೆಗೆ ತಕ್ಕಂತೆ ಸಹಾಯ ಮಾಡಿ ಅವರನ್ನು ಸಮಾಜದಲ್ಲಿ ವಿದ್ಯಾವಂತರನ್ನಾಗಿಸುವ ಕಾರ್ಯಕ್ರಮಕ್ಕೆ ಜನಾಂಗದ ಇತರೆ ಸಂಘ ಸಂಸ್ಥೆಗಳು ಹಾಗೂ ಜನರು ಸಹಕಾರ ನೀಡಬೇಕೆಂದು ಕೋರಿದರು. ಸಂಘದ ಕಾರ್ಯದರ್ಶಿ ಕೊಂಬಾರನ ಸುಬ್ಬಯ್ಯನವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಮಹಾ ಸಭೆಯು ಮುಕ್ತಾಯವಾಯಿತು. ಕಾರ್ಯಕ್ರಮದಂತೆ ಉಟೋಪಚಾರವನ್ನು ವ್ಯವಸ್ಥೆ ಮಾಡಲಾಗಿತ್ತು.

ವರದಿ: ಕೊಂಬಾರನ ಸುಬ್ಬಯ್ಯ, ಕಾರ್ಯದರ್ಶಿ.

# ಪರದೇಶಿ ಕಂದ ನಾ-ಮರೆಯದಿರು ಮಾತೆ

*ಡಾ.ಗುಡ್ಡೆ ರಾಘವ ಗೌಡ, ಡೇಟನ್, ಒಹಾಯೊ*



ಶಿರಬಾಗಿ ವಂದಿಪೆನು ತುಂಬು ಎದೆಯಿಂದ
ಕನ್ನಡಾಂಬೆಯೆ ನಿನಗೆ ಅತಿ ಪ್ರೇಮದಿಂದ
ಮನೆ ಬಿಟ್ಟು ಬಂದಿಹನು ಈ ನಿನ್ನ ಕಂದ
ಕೋಪಿಸದೆ ಹರಸೆನ್ನ ವಾತ್ಸಲ್ಯದಿಂದ

ನನ್ನ ಉಸಿರಲಿ ನಿನ್ನ ಹೆಸರು ಅಡಗಿಹುದು
ನನ್ನ ದೇಹದಿ ನಿನ್ನ ಕಣಕಣವು ಬೆರೆತಿಹುದು
ನನ್ನ ನೋಟದಿ ನಿನ್ನ ಚೆಲುವು ತುಂಬಿಹುದು
ನನ್ನ ಭಾವದಿ ನಿನ್ನ ಹಿರಿಮೆ ನೆಲೆಸಿಹುದು

ನಿನ್ನ ಮಕ್ಕಳ ಕಹಳೆ ಇಂದಿಗೂ ಮುಳುಗಿಲ್ಲ
ಹುಕ್ಕ ಬುಕ್ಕರ ಬಲವು ಇಂದಿಗೂ ಅಳಿದಿಲ್ಲ
ವಿಜಯ ನಗರದ ಸಿರಿಯು ಇಂದಿಗೂ ಮರೆತಿಲ್ಲ
ಗತ ಕಾಲ ವೈಭವದ ನೆನಪಿನ್ನೂ ಮಾಸಿಲ್ಲ

ಬೇಲೂರು, ಹಳೆಬೀಡು, ಶಿಲ್ಪ ಕಲೆಗಳ ಬೀಡು
ಗೋಮಟನು ಸಾರುತಿಹ ಶಾಂತಿಯ ನೆಲೆಬೀಡು
ಶ್ರೀರಂಗ ಪಟ್ಟಣದ ಸಹನೆಯ ನೆಲೆನಾಡು
ಶಂಕರನ ಶೃಂಗೇರಿ ಆತ್ಮೋನ್ನತಿ ಬೀಡು

ಭಾರತವ ಹಾಡಿಹನು ಕುಮಾರವ್ಯಾಸನಿಲ್ಲಿ
ರಾಮಾಯಣ ದರ್ಶನವ ಮಾಡಿಹನು ಕುವೆಂಪುವಿಲ್ಲಿ
ಪಂಪ, ರನ್ನರ ಕೃತಿಯು ಮೊರೆಯುವುದು ಇಂದಿಲ್ಲಿ
ಕನಕ, ಪುರಂಧರ ಗೀತೆ ಪ್ರತಿಧ್ವನಿಸುತಿಹುದಿಲ್ಲಿ

ಯಾಲಕ್ಕಿ, ಕಿತ್ತಳೆ, ಕಾಫಿ ಕೊಡಗಿನ ಕೊಡುಗೆ
ತೆಂಗು, ಕಂಗಿನ ಸಿರಿಯು ಕಡಲ್ಕಡೆಯ ಉಡುಗೆ
ರಾಗಿ, ಜೋಳದ ಬೆಳೆಯು ಬಯಲಿನ ಬೆಡುಗೆ
ಎಲ್ಲೆಲ್ಲೂ ಹರಡಿಹುದು ಸಿರಿತೆನೆಯು ನಿನಗೆ

ತುರುಬಿನಲಿ ಹೂವಿಡಲು ಸಹ್ಯಾದ್ರಿಯಿಹಳಿಲ್ಲಿ
ಕಾಲ್ತೊಳೆಯೆ ನಿಂದಿಹಳು ಪಡುಗಡಲು ಮುದದಲ್ಲಿ
ಕೋಲಾರ, ಕುದುರೆಮುಖ ಸಿಂಗರಿಸೆ ಕಾದಿಹರಿಲ್ಲಿ
ಅಭಿಷೇಕವನು ಮಾಡೆ ಕಾವೇರಿ ನಿಂತಿಹಳಿಲ್ಲಿ

ವಿಜಯ ಕಹಳೆಯನೂದೆ ವಿರೂಪಾಕ್ಷ ಬಂದಿಹನು
ಕೊಳಲನೂದುತ ಉಡುಪಿ ಶ್ರೀಕೃಷ್ಣ ನಲಿದಿಹನು
ಧರ್ಮಧ್ವಜವನು ಎತ್ತಿ ಮಂಜುನಾಥ ನಡೆದಿಹನು
ಅನ್ನದಾನವ ನೀಡೆ ಸುಬ್ರಹ್ಮಣ್ಯ ಕುಳಿತಿಹನು

ಭೋರ್ಗರೆವ ಜೋಗಿನಲಿ ನಿನ್ನುಸಿರ ಕೇಳುವೆನು
ಕಡಲ್ತೆರೆಯ ತೆಕ್ಕೆಯಲಿ ಜೋಗುಳವ ಆಲಿಪೆನು
ತಂಗಾಳಿ ತಂಪಿನಲಿ ನಿನ್ನೊಡಲ ನೆನೆದಿಹೆನು
ಮುಂಗಾರು ಹನಿಯಲ್ಲಿ ನಿನ್ನೊಲುಮೆ ಕಾಣುವೆನು

ಕಲ್ಲು ಸಕ್ಕರೆಗಿಂತ ಸನಿಯು ಕನ್ನಡ ನುಡಿ
ಗಂಧ ಲೇಪನದಿಂದ ಘಮಿಸುತಿದೆ ನಿನ್ನ ಅಡಿ
ಹಚ್ಚ ಹಸುರಿನ ಬನವೆ ನಿನಗೊಪ್ಪುವ ಉಡುಗೆ
ಭಾರತಿಯ ಪ್ರಿಯ ತನುಜೆ, ಮಣಿವೆ ನಿನ್ನಡಿಗೆ

ಆ ಹಿರಿಮೆ, ಆ ಘನತೆ ಮತ್ತೆ ಮೆರಗಿಸು ಮಾತೆ
ಪ್ರೇಮ ಸೌಹಾರ್ದತೆಯ ಜ್ಯೋತಿ ಬೆಳಗಿಸು ಮಾತೆ
ಅಪ್ಪಿ ಆಲಂಗಿಸು ನನ್ನ ಸೆರಗಂಚಿನಲಿ ಮಾತೆ
ಪರದೇಶಿ ಕಂದ ನಾ- ಮರೆಯದಿರು ಮಾತೆ

***ಕವಿ ಪರಿಚಯ :***

ಡಾ. ಗುಡ್ಡೆ ರಾಘವ ಗೌಡ ಅವರ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು. ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಮತ್ತು ಎಂ.ಬಿ.ಎಂ. ವಿದ್ಯಾಭ್ಯಾಸವನ್ನು ಮುಗಿಸಿ ಡೆಲ್ಲಿಯ ಕೇಬಲ್ ಕಂಪೆನಿಯೊಂದರಲ್ಲಿ ಸೇಲ್ಸ್ ಮೆನೇಜರರಾಗಿ ಮತ್ತು ಕುರುಕ್ಷೇತ್ರ ವಿಶ್ವ ವಿದ್ಯಾಲಯದ ಬಿಸಿನೆಸ್ ಎಡ್ಮಿನಿಸ್ಟ್ರೇಷನ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಆ ಬಳಿಕ ಅವರು ಜೋರ್ಜಿಯ ಸ್ಟೇಟ್ ಯುನಿವರ್ಸಿಟಿಯಿಂದ ಕಂಪ್ಯೂಟರ್ ಇನ್ಫೋಮೇಷನ್ ಸಿಸ್ಟಂಸ್ನಲ್ಲಿ ಪಿ.ಎಚ್.ಡಿ. ಡಿಗ್ರಿಯನ್ನು ಪಡೆದರು. ಈಗ ಅವರು ಯುನಿವರ್ಸಿಟಿ ಆಫ್ ಡೇಟನ್‌ನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಗ್ರಾಜ್ಯುವೇಟ್ ಪ್ರೋಗ್ರಾಮಿನ ಡೈರೆಕ್ಟರಾಗಿದ್ದಾರೆ.

## ನನ್ನಣ್ಣ

ಬುದ್ಧನಾಂಗೆ
ಆಕುತೇಳಿ
ನೆಡ್‌ಇರ್ಲ್
ಗುಡಿ ಹೊದ್ದ್
ಮಲಗಿದ್ದ್ ನನ್ನ ಅಂಣ
ಕಪ್ಪು ಕತ್ತಲೆಲಿ ಎದ್ದ್
ಹೊಣ್ಕೆ ಮಲಗಿತ್

*ಆರೋಗ್ಯವೇ ಭಾಗ್ಯ :*

# ದಂತ ಮತ್ತು ಬಾಯಿಯ ಬಗ್ಗೆ

ಸಾಮಾನ್ಯವಾಗಿ ದಂತ ಆರೋಗ್ಯದ ಬಗ್ಗೆ ಜನರು ಅಷ್ಟು ಕಾಳಜಿ ವಹಿಸುವುದಿಲ್ಲ. ಅದರ ನೆನಪು ಹಲ್ಲು ನೋವು ಬಂದಾಗಲೇ ನೋವು ಬಂದ ನಂತರ ಅದರ ಚಿಕಿತ್ಸಾ ವೆಚ್ಚವೂ ದುಬಾರಿಯಾಗುತ್ತದೆ. ಅಥವಾ ಹಲ್ಲು ತೆಗೆಯಬೇಕಾಗುತ್ತದೆ.

ಹಲ್ಲು ಕೊಳೆತ ರೀತಿಯಲ್ಲಿ ತುಂಬಾ ದಿವಸ ಇದ್ದಲ್ಲಿ, ನಿಧಾನವಾಗಿ ಅದು ನಿಮ್ಮ ಹೃದಯ ಸಂಬಂಧವಿರುವ ಕಾಯಿಲೆಗಳಿಗೆ ಕಾರಣವಾಗಬಹುದು (Bacterial endocorditions)

ಗಮನಿಸಬೇಕಾದ ಅಂಶಗಳು:

ಸಣ್ಣ ಗುಳಿ ಬಿದ್ದ ಹಲ್ಲು ನಿಧಾನವಾಗಿ ಮುಂದುವರಿದಲ್ಲಿ, ಹಲ್ಲಿನ ಡೆಂಟಿನ್ ಎಂಬ ಭಾಗಕ್ಕೆ ತಲುಪಿ ನಿಮಗೆ ಹಲ್ಲು ಜುಮ್ ಗರೆಯುವ ಲಕ್ಷಣ ಕಂಡುಬರುತ್ತದೆ. ಅದು ಮತ್ತೂ ಮುಂದುವರಿದಲ್ಲಿ ತಡೆಯಲಾಗದ ನೋವು ಉಂಟಾಗುತ್ತದೆ. ಈ ಸಮಯದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳದಿದ್ದಲ್ಲಿ ನಿಮ್ಮ ಮುಖವು ಊದಿಕೊಳ್ಳಬಹುದು.

ದಿನಕ್ಕೆರಡು ಬಾರಿ ಹಲ್ಲು ಉಜ್ಜಲೇಬೇಕು. ರೋಗಾಣುಗಳು ರಾತ್ರಿ ಹೊತ್ತಲ್ಲಿ ಹೆಚ್ಚು ಕೆಲಸ ಮಾಡುವುದರಿಂದ ನಿಮ್ಮ ಹಲ್ಲು ಹುಳುಕು ಹಿಡಿಯುವುದು ಬೇಗ. ನಿದ್ದೆ ಮಾಡಿದಾಗ ಬಾಯಿಯ ಜೊಲ್ಲುರಸವಸರುವುದು ಕಮ್ಮಿಯಾಗುತ್ತದೆ. ಆದ್ದರಿಂದ ತಿಂದ ಆಹಾರ ಹಲ್ಲಿನೆಡೆಯಲ್ಲಿ ಸಿಕ್ಕಿಕೊಂಡು ಹಲ್ಲಿನ ಆರೋಗ್ಯವನ್ನು ಹಾನಿಗೆಡವುತ್ತದೆ. ಅತಿಯಾದ ಅಂಟಾದ ಪದಾರ್ಥ (ಸಿಹಿ) ಇದ್ದಲ್ಲಿ ಹಲ್ಲಿಗೆ ಅಂಟಿಕೊಂಡು ಸಂದಿಗಳಿಗೆ ಹೋಗಿ ಹುಳುಕು ಹಲ್ಲನ್ನು ಮಾಡುತ್ತದೆ. ಆದ್ದರಿಂದ ಪ್ರತಿ ಸಾರಿ ತಿಂದಾಗ ಬಾಯಿ ಮುಕ್ಕಳಿಸುವುದು ಉತ್ತಮ.

ಹಲ್ಲಿನಲ್ಲಿ ಸಣ್ಣ ಕಪ್ಪು ಚುಕ್ಕಿಯಂತೆ ಕಂಡಲ್ಲಿ ಅದನ್ನು ಕೂಡಲೇ ದಂತ ವೈದ್ಯರಲ್ಲಿ ತೋರಿಸಿ ಅದಕ್ಕೆ ಬೇಕಾದ ಸೂಕ್ತ ಚಿಕಿತ್ಸೆಯನ್ನು ಪಡೆಯುವುದು.

ಪ್ರತಿ ಆರು ತಿಂಗಳಿಗೊಮ್ಮೆ ದಂತ ವೈದ್ಯರಲ್ಲಿ ಪರೀಕ್ಷೆ ಮಾಡಿಸಿ ಸೂಕ್ತ ಮಾಹಿತಿಯನ್ನು ಪಡೆಯಿರಿ.

ಹಲ್ಲು ನೋವು ಬಂದಾಗ ಸುಣ್ಣ ಹೊಗೆಸೊಪ್ಪು, ಗುಟ್ಕಾ, ಇವೆಲ್ಲವನ್ನು ನೋವು ನಿವಾರಣೆಗೆ ಹಲ್ಲಿನ ಜಾಗಕ್ಕೆ ಇಡಲು ಹೋಗಬೇಡಿ. ಇದರಿಂದ ರೋಗವು ಇನ್ನಷ್ಟು ಉಲ್ಬಣಗೊಂಡು ಚಿಕಿತ್ಸೆಯು ಫಲಕಾರಿಯಾಗುವುದಿಲ್ಲ.

ವೈದ್ಯರ ಹತ್ತಿರ ಯಾವುದೇ ಅಂಜಿಕೆ ಅಳುಕ್ಕಿಲ್ಲದೆ ನಿಮ್ಮ ತೊಂದರೆಗಳನ್ನು ನೇರವಾಗಿ ಹೇಳಿ. ನಿಮಗೆ ಬೇರಾವುದೇ ಕಾಯಿಲೆ ಇದ್ದಲ್ಲಿ ಮುಂಚಿತವಾಗಿ ತಿಳಿಸುವುದು. ಇಲ್ಲದಿದ್ದಲ್ಲಿ ವೈದ್ಯರು ಕೊಟ್ಟ ಔಷಧದಲ್ಲಿ ಅಡ್ಡ ಪರಿಣಾಮಗಳು ಆಗುವ ಸಾಧ್ಯತೆ ಇದೆ.

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಸುವುದು)*

*ಡಾ. ರತೀಶ್ ಬಿಳಿಯಲೆ, ಕಾವೇರಿ ಡೆಂಟಲ್ ಕ್ಲಿನಿಕ್,*
*ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ.*

## ಲೇಖಕಿಯ ಪರಿಚಯ



ಹೆಸರು : ರೇಣುಕಾ ವಸಂತ, ಕೊಡಗು.
ಜನನ: 10-7-1969
ವಿದ್ಯಾರ್ಹತೆ:ಎಂ. ಕಾಂ. ವೃತ್ತಿ: ಶಿಕ್ಷಕಿ
ಹವ್ಯಾಸ : ಓದು,ಬರಹ, ಕಸೂತಿ, ಹೊಲಿಗೆ, ನಿಟ್ಟಿಂಗ್.
ತಂದೆ ತಾಯಿ :ಸೋಮಣ್ಣ, ಜಾನಕಿ (ಪಾಕ ಮುಕ್ಕಾಟಿ ಮನೆ)
ಸಾಕ್ಷರ ಕಾವೇರಿ : ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಸ್ವಯಂ ಸೇವೆ (8ತಿಂಗಳು)

ಪ್ರಾಥಮಿಕ ವಿದ್ಯಾಭ್ಯಾಸ ಸ. ಹಿ. ಪ್ರಾ. ಶಾ. ಕೊಳಗದಾಳು, 1-5 ತರಗತಿ, ಹಿ. ಪ್ರಾ. ಶಾ. ಚೇರಂಬಾಣೆ 6-7 ತರಗತಿ, ಅರುಣಾ ಪ.ಪೂ. ಕಾಲೇಜು ಚೇರಂಬಾಣೆ 8-10 ನೆಹರು ಸ್ಮಾರಕ ಮಹಾ ವಿದ್ಯಾಲಯ I.ಪಿ.ಯು., ಬಿ. ಕಾಂ. (ಸುಳ್ಯ): ಮೈಸೂರು ಮುಕ್ತ ವಿಶ್ವ ವಿದ್ಯಾಲಯ ಎಂ.ಕಾಂ.,

ಬರಹ: 7 ನೇ ತರಗತಿ, ಮೊದಲ ಕಥೆ "ವ್ಯಥೆ" ಮೊದಲ ಪ್ರಕಟಿತ ಕವಿತೆ "ಚೇತನಾ" ಪತ್ರಿಕೆ ಸುಳ್ಯ (ಕವಿತೆ -"ಪರಸ್ಪರ")

ಮೊದಲ ಕಥೆ -ಕುಂಞ (ಕೊಡಗಿನ ಗೌರಮ್ಮ ಪ್ರಶಸ್ತಿ) ಹಲವಾರು ಕಥೆ, ಕವನ, ಲೇಖನ, ಹನಿಗವಿತೆಗಳು, ತುಷಾರ, ಮಯೂರ, ಸುಧಾ, ಗಡಿನಾಡ ಸಂಚಾರಿ, ಶಕ್ತಿಪತ್ರಿಕೆ, ಕೊಡಗು ಸಂಗಾತಿ, ಮುಂಗಾರು, ಕನ್ನಡಮ್ಮ (ದಿನ ಪತ್ರಿಕೆ -ಬಿಜಾಪುರ) ಮುಂತಾದ ಹಲವು ದಿನ, ವಾರ, ಮಾಸಿಕ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ.

- ಪಟ್ಟಡ ಪ್ರಭಾಕರ

**ಇದೀಗ ಕೊಡಗು ಸಂಗಾತಿಗಾಗಿ ಕವಿತೆ.**

***ನಾಳೆ:***

ರಂಗೋಲಿ ಕಲಿಸಿಕೊಡು ಎಂದು
ಮೂಗೆಳೆದೆ ನೀನು
ನಾಳೆಯಾಗಲಿ ಎಂದೆ ನಾನು
ಮೋಟಾರು ಚಾಲನೆ, ನಾಳೆ, ಕಸೂತಿ-ನಾಳೆ
ಹಿಂದಿ ಪಾಠ-ನಾಳೆ, ಹೊಸ ರುಚಿ ನಾಳೆ
ನಾಳೆ-ನಾಳೆ......ನಾಳೆ
ಓ, ಎಷ್ಟೊಂದು ನಾಳೆಗಳು
ನಮ್ಮ ಮುಂದೆ,!?
ಕಲಿಯಬೇಕಿತ್ತು ಎಲ್ಲ ಇಂದೇ
ಅನಿಸಿದ್ದು, ಗೆಳೆಯಾ,
ನೀ ಸಾವಿರ ಮೈಲಿಯಾಚೆಯನೀಲಿಯಲಿ
ನನಗಿಲ್ಲವಾದ ನಾಳೆ....
ಈಗಿದೋ ಅರಿವಿಲ್ಲದೇ
ಸುರಿವ ಕಂಬನಿ
ಸುಡುವ ನಿಟ್ಟುಸಿರಿನಲಿ
ನಾಳೆಯ ಕನಸುಗಳ ಚೂರು
ಹೇಳು-ನನಗೆಲ್ಲಿದೆ ನಾಳೆ?!

- ರೇಣುಕಾ ವಸಂತ, ಮೈಸೂರು.

ಅರೆಗನ್ನಡ ಸ್ವತಂತ್ರ ಭಾಷೆ. ಕನ್ನಡದ ಹಿಂದಿನ ರೂಪಾಂತರವೇ ಆಗಿದೆ.

# ಕಾರ್ತಿಂಗಳು ದೆವ್ವಕ್ಕೆ ಕೊಡುವುದು.

ಹಿಂದೆ ಕೊಡಗಿನಲ್ಲಿ ವರ್ಷದ 10 ತಿಂಗಳು ಮಳೆಯಾಗುತ್ತಿತ್ತೆಂದು ಹಿರಿಯರ ಮಾತು. ಎರಡು ತಿಂಗಳು ಪ್ರತಿ ಊರುಗಳಲ್ಲಿ ಹಬ್ಬ, ಮದುವೆ, ಹರಿಸೇವೆ, ಜಾತ್ರೆ, ಭೂತಕೋಲ ಇತ್ಯಾದಿಗಳನ್ನು ನಡೆಸುತ್ತಿದ್ದರು. ಅದರಂತೆ ಆ ಕ್ರಮ ಇಂದಿಗೂ ನಡೆಯುತ್ತಾ ಬರುತ್ತದೆ. ಊರಿನಲ್ಲಿ ಈ ಮೇಲಿನ ಕಾರ್ಯಕ್ರಮ, ದೇವರ ಜಾತ್ರೆ-ಮದುವೆ ಇತ್ಯಾದಿ ಕೆಲಸಗಳನ್ನು ಮುಗಿಸಿ ಕೊನೆಗೆ ಭೂತಗಳಿಗೆ ಕೊಡುವುದನ್ನು ಮಾಡುತ್ತಾರೆ. ಈ ಕೆಲಸವನ್ನು ವ್ಯವಸಾಯ ಆರಂಭದ ಮೊದಲು ಇಟ್ಟುಕೊಳ್ಳುವುದು ಅಂದರೆ ಜೂನ್ 15 ರಿಂದ ಜುಲೈ 15ರ ತನಕ ಬರುವ ಕಾರ್ತಿಂಗಳಲ್ಲಿ ಇಟ್ಟುಕೊಳ್ಳುವುದು ರೂಢಿ- ಇದಕ್ಕೆ ಅರೆಗನ್ನಡ ಮಾತನಾಡುವ ಗೌಡ ಜನರಾದ ನಾವು ದೆವ್ವಕ್ಕೆ ಕೊಡ್ದು ಎನ್ನುತ್ತೇವೆ.

ಪ್ರತಿವರ್ಷ ಮಳೆಗಾಲ ಪ್ರಾರಂಭವಾದ ಜೂನ್ ತಿಂಗಳು ಮನೆಗಳ ಹಿತ್ತಲಲ್ಲೊ -ಒಳಗೊ-ದೆವ್ವಗಳಿಗೆ ಎಡೆಕೊಟ್ಟು ಪೂಜಿಸುವ ಕ್ರಮ. ಇವುಗಳಲ್ಲಿ ಒಂಟಿ ಮೂರ್ತಿ, 3-5-10 ಹೀಗೆ ಕೂಟು ಮೂರ್ತಿಗಳನ್ನು ಸಹ ಒಂದೇ ಬಾರಿಗೆ ಪೂಜಿಸುತ್ತಾರೆ. ಉದಾ: ನಾಗನಿಗೆ ಬ್ರಾಹ್ಮಣರಿಂದ ಪೂಜೆ, ಚೌಂಡಿ ಎಂಬ ಮೂರ್ತಿಗೆ ಮಲೆಯರಿಂದ ಪೂಜೆ ಮಾಡುತ್ತಾರೆ. ಈ ಕ್ರಮ ಕೆಲವು ಕಡೆ ಇರುವುದರಿಂದ ಇದನ್ನು ತಿಳಿಸಲಾಗಿದೆ. ಇದನ್ನು ಕಾರ್ತಿಂಗಳು ಅಥವಾ ಸೋಣ ತಿಂಗಳು ಮಾತ್ರ ಕೊಡುವುದಾಗಿದೆ.

ಪ್ರತಿ ಕುಟುಂಬದ ಹಿರಿಯವ ಅಥವಾ ಕುಟುಂಬದವರ ಪೂಜಾರಿ ಎಂದು ನಿಶ್ಚಯಿಸಿದ ಕುಟುಂಬದ ವ್ಯಕ್ತಿ ಎಡೆಹಾಕುವ ಪದ್ಧತಿಯಿದೆ. ಕ್ರಮ ಒಂದು ವಾರಕ್ಕೆ ಮೊದಲು ಐನ್ ಮನೆಯ ಗಂಡಸರೆಲ್ಲರು ಸೇರಿದ ನಂತರ ಸ್ನಾನ ಮಾಡಿ ಮುಡಿಯುಟ್ಟು ಬಂದ ಪೂಜಾರಿ ಬಾಳೆ ಗೊನೆಯನ್ನು ಕಡಿದು ಅಟ್ಟದಲ್ಲಿ ನೇತುಹಾಕುತ್ತಾನೆ. ಶುದ್ಧವಾಗಿದ್ದರೆ ಸರಿಯಾಗಿ ಹಣ್ಣಾಗುವುದೆಂದು ನಂಬುತ್ತಾರೆ. ದೆವ್ವಕ್ಕೆ ಕೊಡುವ ದಿನ ಊರ ದೇವಸ್ಥಾನದಿಂದ ಗಂಧ ಮತ್ತು ಪುಣ್ಯಾರ್ಚನೆ ತಂದು ಮನೆ ಎಲ್ಲಾ ಶುದ್ಧೀಕರಿಸುತ್ತಾರೆ. ಅಕ್ಕಿ, ಭತ್ತ, ಹೊದುರಿ, ಊದುಬತ್ತಿ, ನೆಣೆಬತ್ತಿ ತೆಂಗಿನಕಾಯಿ, ಕುರ್ದಿನೀರು, ಕೋಲ್‌ತ್ರಿ -(ಬಿದಿರಿನ ಕಡ್ಡಿಗಳನ್ನು ಮಾಡಿ ಬಿಳಿ ಬಟ್ಟೆಯನ್ನು ಸುತ್ತುವುದಕ್ಕೆ ಕೊಲ್‌ತ್ರಿ ಎನ್ನುತ್ತಾರೆ) ಮೊದಲು ಗಣಪತಿಗೆ ಇಟ್ಟು ನಂತರ ಎಡೆ ಹಾಕುತ್ತಾರೆ. ಎಡೆ ಎಂದರೆ ಕೋಳಿ ಮಾಂಸ ಸಾರು ಮತ್ತು ಅಕ್ಕಿಪುಡಿಯ ರೊಟ್ಟಿ. ಇದನ್ನು ಪೂಜಾರಿಯೇ ಮಾಡತಕ್ಕದ್ದು. ಅಲ್ಲದೆ ಇದರಲ್ಲಿ ಗಂಡಸರೆ ಭಾಗವಹಿಸುತ್ತಾರೆ. ಹಾಗೂ ಗೌಡ ಕುಟುಂಬದವರು ಹೆಚ್ಚಾಗಿ ಪಾಷಾಣ ಮೂರ್ತಿಯನ್ನು ಎಡೆಹಾಕಿ ಪೂಜಿಸುತ್ತಾರೆ. ಇನ್ನು ಕೆಲವು ಮೂರ್ತಿಗಳಿಗೆ ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮೆ ನೀಡುವ ಕ್ರಮವಿದೆ. ಮಂದಣಮೂರ್ತಿ ಕೊರ್ತಿ, ಅಜ್ಜಪ್ಪ, ಕಾಡಯ್ಯ, ಗುಳಿಗ, ತಮ್ಮಚ್ಚ, ಚಾವುಂಡಿ, ಅಜ್ಜಿಕುಟಿ, ಪಾಷಾಣಮೂರ್ತಿ ಎನ್ನುವ ಮೂರ್ತಿಗಳಿಗೆ ಕೋಳಿ ಎಡೆಕೊಟ್ಟು ಪೂಜಿಸುತ್ತಾರೆ.

*ಉದ್ದೇಶ:* ವ್ಯವಸಾಯ ಮಾಡುವ ರೈತ ತನ್ನ ಶ್ರಮಕ್ಕೆ ಫಲ ಸಿಗಲಿ ಎಂದು ಗುಳಿಗ ಮೂರ್ತಿಯನ್ನು ಪೂಜಿಸುತ್ತಾನೆ. ಇದಕ್ಕೆ ಭೂಮಿ ಗುಳಿಗ ಅಥವಾ ಭೂಮಿ ಚೌಂಡಿ ಎನ್ನುತ್ತಾರೆ. ಈ ತರ ಎಲ್ಲಾ ಮೂರ್ತಿಗಳಿಗೂ ಪೂಜಾರಿ ಅಡುಗೆ ಮಾಡಿದ ಕೋಳಿ ಮಾಂಸ ರೊಟ್ಟಿಯ ಅಡುಗೆಯನ್ನು ಎಡೆಗೆ ಬಳಸಿ ಉಳಿದವರು ಪ್ರಸಾದವಾಗಿ ತಿನ್ನುತ್ತಾರೆ. ತೋಟಗಳಲ್ಲಿ ಪಕ್ಕದ ಅರಣ್ಯದಲ್ಲಿ ಕೊಡುವ ಎಡೆಗೆ ಕಾಡಯ್ಯ, ತಮ್ಮಚ್ಚನೆಂದು ಹೇಳುತ್ತಾರೆ. ಹಿಂದೆ ದನಕರುಗಳು ಅರಣ್ಯದ ಕಡೆ ಮೇಯಲು ಹೋದಾಗ ಇವುಗಳಿಗೆ ರಕ್ಷಣೆ ಸಿಗಲಿ ಎಂದು ಈ ಕ್ರಮವನ್ನು ಅನುಸರಿಸಿ ಕಾಡಿಗೆ ಹೋದ ಮನುಷ್ಯನೇ ಆಗಲಿ ದನಕರುಗಳೇ ಆಗಲಿ ಕ್ಷೇಮವಾಗಿ ಹಿಂತಿರುಗಲಿ ಎಂದು ಒಂದು ನಿರ್ದಿಷ್ಟ ಮರ ಅಥವಾ ದೊಡ್ಡ ಬಂಡೆಕಲ್ಲುಗಳ ಕೆಳಗೆ ಈ ತರ ಗುರ್ತಿಸಿ ಪೂಜಿಸಿ ಎಡೆಕೊಡಲು ಪ್ರಾರಂಭಿಸಿದರು.

ಹೀಗೆ ಭೂಮಿ ಕಾಯುವವನಿಗೆ ಗುಳಿಗರಾಜನೆಂದು ದನಗಳನ್ನು ಕಾಯುವವನಿಗೆ ಅಂಗರನೆಂದೂ ಹೆಣ್ಣುಮಕ್ಕಳ ರಕ್ಷಣೆಗೆ ಪಾಷಾಣ ಮೂರ್ತಿ ಎಂದು ಹೆಸರುಗಳನ್ನು ಇಟ್ಟುಕೊಂಡಿರುತ್ತಾರೆ.

ಐನ್‌ಮನೆಯಲ್ಲಿ ಮಾಡುವ ಪೂಜೆಯ ಅಡುಗೆಯನ್ನು ಎಲ್ಲರೂ ಸೇರಿ ಊಟ ಮಾಡುತ್ತಾರೆ. ಆ ದಿನ ಕಾರಣರಿಗೂ ಇಡುವ ಪದ್ಧತಿಯಿದೆ. ಹೊರಗಡೆ ಕಾಡು ತೋಟಗಳಲ್ಲಿ ಹೆಂಗಸರು ಹೋಗುವುದು ನಿಷಿದ್ಧವಾಗಿದೆ. ಕೊಟ್ಟ ಹೆಣ್ಣು ಮಕ್ಕಳು ಸಹ ಸೌಖ್ಯವಿಲ್ಲದಿದ್ದಾಗ ತವರು ಮನೆಯಲ್ಲಿ ಭಾಗವಹಿಸುವರು. ಹೆಣ್ಣು ಮಕ್ಕಳಿಗೆ ಕೊಡುವ ಚಿನ್ನಾಭರಣ ಹಣಕಾಸನ್ನು ಏನಿದ್ದರೂ ಗೌಡ ಜನಾಂಗದವರು ಹತ್ತು ಜನರ ಮುಂದೆಯೇ ಕೊಡುತ್ತಾರೆ. ಹೆಣ್ಣು ಮಕ್ಕಳಿಗೆ ಕೊಡುವ ವಿಷಯದಲ್ಲಿ ಯಾರೂ ವಂಚನೆ ಮಾಡದೆ ಎಚ್ಚರ ವಹಿಸುತ್ತಾರೆ.

ವಂಚನೆಗಳು ಆಗಿದ್ದರೆ ಪಾಷಾಣಮೂರ್ತಿ ತೊಂದರೆ ನೀಡುವುದೆಂದು ನಂಬಿಕೆ. **- ಬೈತಡ್ಕ ಜಾನಕಿ, ಮಡಿಕೇರಿ.**

## ನಗೆಹನಿ

ಅಂಣೆ : ಎಲ್ಲದಕ್ಕೂ ಪ್ರಾಣ ಹೃದಯಲಿ ಇರ್ದು, ಅಂದರೆ ಮೊಸಳೆಗೆ ಯಾಕೆ ತಲೇಲಿ ಉಟ್ಟು ಗುರು.

ಗುರು: ಅರೆರೇ ಹೌದಾ? ನಂಗೆ ಗೊತ್ತೆ ಇತ್ತಿಲ್ಲೆ ಅಂಣೆ, ನಿಂಗೆ ಧನ್ಯವಾದ

**-ಕಲ್ಲುಮುಟ್ಲು ಮನು, ಸಿದ್ದಾಪುರ.**

# ಮಡಿಕೇರಿ ವಿಹಂಗಮ ನೋಟ

ಹಿತಕರ ಹವಾಗುಣ ಹಾಗೂ ಪ್ರಕೃತಿ ಸೌಂದರ್ಯ ದಿಂದಾಗಿ "ದಕ್ಷಿಣ ಕಾಶ್ಮೀರ" ಎಂದು ಕರೆಯಲಾಗುವ ಮಡಿಕೇರಿಯು ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಕೇಂದ್ರ ಸ್ಥಳ. ಪಶ್ಚಿಮ ಘಟ್ಟಗಳ ಕಡಿದಾದ ಬೆಟ್ಟ ಗುಡ್ಡಗಳ ನಡುವೆ ನಿರ್ಮಿತವಾಗಿರುವ ಈ ಊರು ಹಸಿರು ಕಾಡು, ಹುಲ್ಲುಗಾವಲು, ಬೆಟ್ಟ-ಕಣಿವೆಗಳಲ್ಲಿ ತೇಲಿ ಹೊಂದಂತಿರುವ ಹೆಂಚಿನ ಮನೆಗಳಿಂದಾಗಿ ಹಿಮಾಲಯದ ತಪ್ಪಲು ಹಾಗೂ ನೀಲಗಿರಿ ಬೆಟ್ಟಗಳ ಪರಿಸರದಲ್ಲಿರುವ ಊರುಗಳನ್ನು ನೆನಪಿಗೆ ತರುತ್ತವೆ.

ಬ್ರಿಟಿಷರು ಮಡಿಕೇರಿಯನ್ನು 'ಮರ್‌ಕೆರಾ' ಎಂದು ಕರೆಯುತ್ತಿದ್ದರು. ಹಾಲೇರಿ ವಂಶದ ಅರಸರಕಾಲದಲ್ಲಿ ಮುದ್ದುರಾಜ ಎಂಬುವನು 1681 ರಲ್ಲಿ ಈ ನಗರವನ್ನು ಸ್ಥಾಪಿಸಿ ತನ್ನ ರಾಜಧಾನಿಯನ್ನು ಇಲ್ಲಿಗೆ ಸ್ಥಳಾಂತರಿಸಿದನಂತೆ. ಮುದ್ದುರಾಜನ ಕೇರಿ ಎಂಬ ಹೆಸರು ಮುಂದೆ ಮಡಿಕೇರಿ ಆಯಿತೆಂದು ಹೇಳುತ್ತಾರೆ. 'ಮರಡಿ'(ಎತ್ತರವಾದ ಬೆಟ್ಟ)ಯ ಮೇಲಿರುವ ಊರು ಇದಾದುದರಿಂದ 'ಮರಡಿಯ ಕೇರಿ' ಎಂಬ ಹೆಸರು ಮುಂದೆ ಮಡಿಕೇರಿ ಆಯಿತೆಂದೂ ಒಂದು ಅಭಿಪ್ರಾಯವಿದೆ. 19 ನೇ ಶತಮಾನದ ಆದಿ ಭಾಗದಲ್ಲಿ ಈ ಊರಿನಲ್ಲಿ ಬರೀ 300 ಮನೆಗಳಿದ್ದುವಂತೆ. 1834 ರಲ್ಲಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಾಗ ಈ ನಗರ ಪ್ರಗತಿ ಹೊಂದಿತು. ಮಡಿಕೇರಿಯಲ್ಲಿ ಹಲವಾರು ಐತಿಹಾಸಿಕ ಹಾಗೂ ಪ್ರೇಕ್ಷಣೀಯ ಸ್ಥಳಗಳಿವೆ. ಎತ್ತರವಾದ ದಿಬ್ಬದ ಮೇಲಿರುವ ಕೋಟೆ ಹಾಗೂ ಅದರೊಳಗಿನ ಅರಮನೆ- ವೀರಭದ್ರ ದೇವಸ್ಥಾನವನ್ನು ನೆಲಸಮಗೊಳಿಸಿ 1855 ರಲ್ಲಿ ನಿರ್ಮಿಸಿದ ಚರ್ಚ್-ಕೋಟೆಯ ಗೋಡೆಯ ಮಗ್ಗುಲಿಗೆ ಗಾರೆಯಲ್ಲಿ ನಿರ್ಮಿಸಲಾದ ನೈಜ ಪ್ರಮಾಣದ ಎರಡು ಆನೆಗಳು ಇವೆಲ್ಲ ಆಕರ್ಷಕವಾಗಿದೆ.

ಟಿಪ್ಪು ಸುಲ್ತಾನನು ಹಳೆಯ ಮಣ್ಣಿನ ಕೋಟೆಯಿದ್ದ ಜಾಗದಲ್ಲಿ ಕಲ್ಲಿನ ಕೋಟೆಯನ್ನು ಪುನರ‍್ರಚಿಸಿ ಅದಕ್ಕೆ ಜಾಫರಾಬಾದ್ ಎಂಬ ಹೆಸರಿಟ್ಟಿದ್ದ ಅರಮನೆ ಈಗ ಸರ್ಕಾರಿ ಕಾರ್ಯಾಲಯವಾಗಿದೆ. ಚರ್ಚ್ ಈಗ ವಸ್ತು ಸಂಗ್ರಹಾಲಯ ವಾಗಿದೆ. ಮುಖ್ಯವಾಗಿ ಕಾಣುವಂತಹ ಓಂಕಾರೇಶ್ವರ ದೇವಾಲಯ 1820 ರಲ್ಲಿ ಎರಡನೆಯ ಲಿಂಗರಾಜ ದೊರೆಯಿಂದ ನಿರ್ಮಿತ ವಾದುದ್ದು. ಇಲ್ಲಿ ಪ್ರತಿಷ್ಠಾಪನೆಗೊಂಡಿರುವುದು ಕಾಶಿಯಿಂದ ತಂದ ಶಿವಲಿಂಗ "ಇಂಡೋ ಸಾರ್ಸನಿಕ್" ಶೈಲಿಯ ದೇವಾಲಯವು ಸುಂದರ ಪರಿಸರದಲ್ಲಿದೆ. ಆವರಣದಲ್ಲಿ ಸುಂದರವಾದ ಕಲ್ಯಾಣಿ ಇದೆ. ಮಡಿಕೇರಿಯಲ್ಲಿ ಚರ್ಚ್‌ಗಳು, ಮಸೀದಿಗಳೂಇವೆ. 'ರಾಜಾಸೀಟ್' ಎಂದು ಕರೆಯಲಾಗುವ ಮಂಟಪವು ಸುಂದರ ಉದ್ಯಾನದ ನಡುವೆ ಇದೆ. ಇಲ್ಲಿಂದ ಕಾಣುವ ನೋಟ ತುಂಬಾ ರಮಣೀಯ. ಊರ ಹೊರ ಆವರಣದಲ್ಲಿರುವ ರಾಜರ ಸಮಾಧಿಗಳು, ಊರ ನಡುವೆ ಇರುವ ಭಾರತದ ಭೂಸೇನಾ ದಂಡನಾಯಕ ಜನರಲ್ ತಿಮ್ಮಯ್ಯನವರ ಪ್ರತಿಮೆ, ಸ್ವತಂತ್ರ ಭಾರತದ ಪ್ರಥಮ ಮಹಾದಂಡನಾಯಕ ಫೀಲ್ಡ್‌ಮಾರ್ಷಲ್ ಕೆ. ಎಂ. ಕಾರ್ಯಪ್ಪನವರ ಪ್ರತಿಮೆ ಹಾಗೂ ಅವರು ವಾಸವಾಗಿದ್ದ ಮನೆ 'ರೊಷನಾರ' ಜನದಟ್ಟಣೆಯ ಅಂಗಡಿ ಬೀದಿ ಇವೆಲ್ಲವೂ ಮನಸ್ಸಿನಲ್ಲಿ ಉಳಿಯುತ್ತದೆ. ಕೊಡಗು ಜಿಲ್ಲೆ ಕರ್ನಾಟಕದ ಜೀವನದಿ ಕಾವೇರಿಯ ಉಗಮ ಸ್ಥಾನ. ಸಾಹಸಿಗಳ ನಾಡು ರಣಕಲಿಗಳ ಬೀಡಾದ ಈ ಸುಂದರನಾಡು ನಮ್ಮದು.

ಲೇಖಿನ: ಪೂಜಾರಿರ ವರುಣ್ ರಮೇಶ್

# ಬಾಯಿ ಕ್ಯಾನ್ಸರ್‌ಗೆ ಗೋಮೂತ್ರ

ಬಾಯಿ ಕ್ಯಾನ್ಸರ್‌ಗೆ ಯಾವುದೇ ಔಷಧಿ ಫಲಿಸದೆ ಗೋಮೂತ್ರದಿಂದ ವಾಸಿಯಾಗುವುದು ಸಾಬೀತಾಗಿದೆ.

ಮತ್ತೂರಿನ ಶಿಲ್ಪಿ ಕೋಟಿ ಮೂಲೆ ಶಂಕರಭಟ್ಟ (80) ಬಾಯಿ ಕ್ಯಾನ್ಸರ್‌ನಿಂದಗುಣ ಹೊಂದಿದವರು.

ತಿಂಗಳುಗಳ ಹಿಂದೆ ಇವರಿಗೆ ಬಾಯಿಯೊಳಗೆ, ಸಣ್ಣ ಗುಳ್ಳೆ ಕಾಣಿಸಿತ್ತು ಬಾಯಿ ಹುಣ್ಣಿರಬಹುದೆಂದು ಚಿಕಿತ್ಸೆ ಮಾಡಿದರು. ಆದರೆ ಅದು ವಾಸಿಯಾಗಲಿಲ್ಲ. ಪರಿಸ್ಥಿತಿ ಬಿಗಡಾಯಿಸಿದಾಗ ಮಂಗಳೂರಿಗೆ ತೆರಳಿ ತಜ್ಞರಿಂದ ಪರೀಕ್ಷಿಸಿದಾಗ ಕ್ಯಾನ್ಸರ್ ಎಂಬುದು ತಿಳಿದುಬಂತು.

ಹಲವು ರೀತಿಯ ಚಿಕಿತ್ಸೆ ನೀಡಿದರೂ ರೋಗ ವಾಸಿಯಾಗಲಿಲ್ಲ. ಶ್ರೀರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಮಹತ್ವಾಕಾಂಕ್ಷೆಯ ಸ್ವದೇಶಿ ಗೋ ತಳಿ ಸಂರಕ್ಷಣಾ ಯೋಜನೆ 'ಕಾಮದುಘಾ'ದ ಪ್ರಚಾರಕ ಸದಾಶಿವ ಮೋಂತಿಮಾರು ಅವರಿಗೆ ಶಂಕರಭಟ್ಟರ ಬವಣೆ ತಿಳಿದು ಬಂತು. ಮೋಂತಿಯಾರು ಅವರು ಭಟ್ಟರಿಗೆ ಗೋಮೂತ್ರ ಚಿಕಿತ್ಸೆಯ ಸಲಹೆ ನೀಡಿದರು.

ಕೂಡಲೇ ಚಿಕಿತ್ಸೆ ಆರಂಭಿಸಿ, ಬೆಂಗಳೂರಿನ ಜ್ಞಾನಗಂಗಾ ಸಂಸ್ಥೆಯ ಮೂಲಕ ಶುದ್ಧ ಗೋಮೂತ್ರ ಪಡೆದು ದಿನಕ್ಕೆ ಮೂರು ಹೊತ್ತು ಎರಡೆರಡು ಚಮಚೆಯಷ್ಟು ಸೇವಿಸಿದರು.

ಒಂದೇ ತಿಂಗಳಲ್ಲಿ ಭಟ್ಟರ ಬಾಯಿ ಹುಣ್ಣು ಒಣಗಿತ್ತು.ದೇಹದಲ್ಲಿ ಪುನರ್ ಚೈತನ್ಯ ಧುಮ್ಮಿಕ್ಕಿತು. ಹಸಿವು, ನಿದ್ರೆ ಆಹಾರ ಸಹಜಗೊಂಡಿತು.

ಈಗಾಗಲೇ ಶಿರಸಿ ಹಾಗೂ ಮಂಗಳೂರಿನ ಗಂಟಲು ಕ್ಯಾನ್ಸರ್, ಡಯಾಬಿಟಿಸ್‌ರೋಗಿಗಗಳಿಗೆ ಈ ಚಿಕಿತ್ಸೆ ಫಲಕಾರಿಯಾಗಿದೆ. ಕಿಡ್ನಿ ವೈಫಲ್ಯದಲ್ಲೂ ಗೋಮೂತ್ರ ಚಿಕಿತ್ಸೆ ಯಶಸ್ಸುಕಂಡಿದೆ. ಈ ಕುರಿತು ಸದಾಶಿವ ಮೋಂತಮಾರು ವಿವರ ನೀಡಿರುತ್ತಾರೆ. ***ವಿವರಗಳಿಗೆ ಸದಾಶಿವ ಮೋಂತಿಮಾರು, ಮೊಬೈಲ್ 94481 50645 ಅನ್ನು ಸಂಪರ್ಕಿಸಬಹುದು.***

*-ಸಂಗಾತಿ*

ಕನ್ನಡವು ಮೂರು ಭಾಗ - ಹಳೆಗನ್ನಡ, ಅರೆಗನ್ನಡ, (ನಡುಗನ್ನಡ ) ಹೊಸಗನ್ನಡ.

## ಪತ್ರ ವಿಭಾಗ: ಒಂದ್ - ಹೊಗಳಿಕೆಯ ಕೆಲ್ಸ.

ಶ್ರೀ ಪಟ್ಟಡ ಪ್ರಭಾಕರ ಮತ್ತು ಶ್ರೀಮತಿ ಶೀಲಾ ಮಣಿ ನೀವ್ಗೆ ಗುಡ್ಡೆ ರಾಘವನ ನಮಸ್ಕಾರ

ನೀವು ಈವರೆಗೆ ಕಳ್ಸಿದ ಕೊಡಗು ಸಂಗಾತಿನ ಏಳ್ ಪ್ರತಿಗ ಮತ್ತು ನೀವು ಬರ್ದ ಕಾಗದ ಕೂಡ ಸಿಕ್ಕಿಟು. ಕೂಡ್ಲೆ ಕಾಗದ ಬರೆಕೆ ಆಗದಕ್ಕೆ ಕ್ಷಮಿಸಿ, ನೀವು ಮತ್ತು ನಿಮ್ಮ ಮನೆವು ಎಲ್ಲವೂ ಸೇರಿ ಕಷ್ಟಪಟ್ಟ್ ಸಂಗಾತಿನ ಪ್ರಕಟಣೆ ಮಾಡ್ತಾ ಇರ್ದು ತುಂಬಾ ಹೊಗಳಿಕೆಯ ಕೆಲ್ಸ. ನೀವು ಕಳ್ಸಿದ ಎಲ್ಲಾ ಸಂಚಿಕೆನೂ ಓದಿದೆ. ಸಣ್ಣಂದಿನಿಂದಲೇ ಊರು ಬುಟ್ಟು ನಾ ಬನಾರಸ್ ಹಿಂದೂ ವಿಶ್ವವಿದ್ಯಾಲಯಲಿ ಓದಿದೆ. ಆ ಮೇಲೆ ಹಿಂದಿನೇ ನನ್ನ ಭಾಷೆ. ಹಿಂದಿಲಿ ಕೆಲವು ಹಾಸ್ಯ ಕವಿತೆ ಬರ್ದೊಳೆ. ನನ್ನ ಶ್ರೀಮತಿ (ಶೈಲ್ ಅವ್ಳು ಹಿಸ್ಟ್ರಿಲಿ ಪ್ರೊಫೆಸರ್) ಬನಾರಸಿನವ್ಳು. ನಮ್ಮ ಅಪ್ಪ ಅವ್ಳಿಗೆ ಕನ್ನಡ ಕಲ್ಸಿಕೆ ಹೋಗಿ ಹಿಂದಿ ಕಲ್ತ್ಕೊಂಡೊ! ಮನೆಲಿ ನನ್ನ ಮಕ್ಕಳಿಗೆ (ಮಗಳ್ ಅಲ್ಪನಾ-ಎಂ.ಡಿ. ಮುಗಿಸಿ, ರೆಸಿಡೆನ್ಸಿ ಮಾಡಿಕೊಂಡುಟ್ಟು. ಮಂಜ, ಅಭಿಷೇಕ್‌ಮೆಡಿಕಲ್-ಲಿ ಓದಿದೆ) ಕೆಲವು ಕನ್ನಡ ಶಬ್ದ ಗೊತ್ತುಟು. ನಿಮ್ಮ ಸಂಗಾತಿಂದ ನಂಗೆ ಹತ್ತ್ ಕುಟುಂಬದವರ ಸಂಗತಿ ಗೊತ್ತಾದೆ. ನೀವು ಸಂಗಾತಿನ ಕಳ್ಸಿಕೊಡುದಕ್ಕೆ ನಾ ಆಭಾರಿ!

ನಂಗೆ ಡಾ. ಚಿನ್ನಯ್ಯ ಅವರ ಭೇಟಿ ಆದ್ದ್ ಜುಲೈ ೫ ಮತ್ತ್ ೬, ೨೦೦೩ಕ್ಕೆ ವರ್ಜಿನಿಯ ಬೀಚ್ಲಿ ನಡ್ದ ಅಮೇರಿಕ ಒಕ್ಕಲಿಗರ ಪರಿಷತ್ತಿನ ಸಮಾರಂಭಲಿ, ಚಿನ್ನಯ್ಯಣ್ಣ ಕೊಡಗು ಎಜುಕೇಷನ್ ಅಕಾಡೆಮಿ ಬಗ್ಗೆ ಮಾತಾಡ್ದೊ. ನಾ ಗೌಡ್ರ ಬಗ್ಗೆ ಒಂದು ಪದ್ಯ ಓದಿದ್ದೆ. ಒಕ್ಕಲಿಗ ಬಂಧು ನೀ ಒಂದಾಗಿ ಬಾ, ಒಂದಾಗು ಬಾ, ಅದರ್ಲಿ ಅಪ್ಪಯ್ಯ ಗೌಡ್ರ ಹೆಸ್ರ್ ಇತ್ತ್. ಆ ಮೇಲೆ ಗೊತ್ತಾತ್- ನಾವು ಒಂದೇ ಮನೆವುತ. ಆ ಮೇಲೆ ಗುಡ್ಡೆಮನೆ ರಮೇಶ ಒಂದು ಕಾಗಧ ಬರ್ದಿದ್ದೊ. ಅದ್ಕೆ ಅವ್ಕೆ ಉತ್ತರ ಬರ್ದಿದ್ದೆ. ಅದ್ ಅವ್ಕೆ ಸಿಕ್ಕಿಟೋ ಇಲ್ಯೋ ಗೊತ್ತಿಲ್ಲೆ.

ನಾ ಹಿಂದೆ ಊರಿಗೆ ಹೋಕನ ನಮ್ಮ ಹಿರಿಯರ ಬಗ್ಗೆ ಪ್ರಾಯಸ್ಥದಲ್ಲಿ ಕೇಳ್ದೆ. ಆಗ ಅಪ್ಪಯ್ಯ ಗೌಡ್ರ ಹೆಸ್ರ್ ಗೊತ್ತಾತ್. ಅವಲ್ಲದೆ ತಮ್ಮಣ್ಣ ಪಾರುಪತ್ಯಗಾರ ಕೂಡ ಹೆಸ್ರಾವ್ಸಿ ಗಡ! ಕಲ್ಯಾಣಪ್ಪನ ಕಟ್ಕಾಯಿ ಬಗ್ಗೆ ಅಜ್ಜಿ ಹೇಳ್ದ ಕಥೆ ನೆನಪಿತ್ತ್. ಶ್ರೀ ದೇವಿ ಪ್ರಸಾದ ಅವರ ಲೇಖನ ಎಲ್ಲೋ ಓದಿದ್ದೆ. ಅದಲ್ಲದೆ ನಾ ಗೌಡರ ಮೂಲ ತಿಳಿಯೊಕ್ಕೊಂತ ಬ್ರಿಟಿಷರ ಕೆಲವು ದಾಖಲೆಗಳ (ಕೆಂಬ್ರಿಡ್ ವಿಶ್ವವಿದ್ಯಾಲಯಕ್ಕೆ ಸೇರ್ದ್) ನೋಡ್ದೆ. ಹಂಗೆ ಗೊತ್ತಾತ್ ನಮ್ಮಬುಡವೂ ಅಪ್ಪಯ್ಯ ಗೌಡ್ರದ್ದ್‌ತ. ನೀವೆಲ್ಲ ಸೇರಿ ಅಪ್ಪಯ್ಯ ಗೌಡ್ರ ಸ್ಮಾರಕಕ್ಕೆ ಪ್ರಯತ್ನ ಮಾಡ್ತು ತುಂಬಾ ಒಳ್ಳೆ ಕೆಲ್ಸ. ನೀವು ಅವರ ಬಗ್ಗೆ ಪುಸ್ತಕ ಬರೆವ/ಬರೆಸುವ ವಿಷಯ ತಿಳ್ದ್ ತುಂಬಾ ಸಂತೋಷ ಆತ್. ನನ್ನ ಅಳಿಲ ಸೇವೆಗೆ ನಾನ್ ಸದಾ ಸಿದ್ಧ.

ನೀವು ಬರ್ದ ಕವಿತೆ 'ಗೌಡರ ಸ್ಮರಣೆ' ಯಂ. ಎ. ಓದಿದ ಗೂಡೆ ತುಂಬಾ ಚೆನ್ನಗಿತ್ತ್. ಶ್ರೀ ಶಿವಳ್ಳಿ ಕೆಂಪೇಗೌಡರ ಮತ್ತೆ ಪ್ರೊ. ಪೂಜಾರಿ ಮೊಣ್ಣಪ್ಪ ಅವರ ಲೇಖನಗಳ ಓದಿಕನ ನಮ್ಮೊರ್ನ ನೋಡಿದಹಂಗೆ ಆದೆ. ಶ್ರೀ ಎ. ಕೆ. ಹಿಮಕರ ಅವರ "ಸಂಪಾದಕನ ಮಾತ್" ಓದಿ, ನಮ್ಮ ಭಾಷೆಲೆ ನೀವ್ಗೆ ಕಾಗದ ಬರೆವ ಮನಸ್ ಆತ್.

ಸಾಧ್ಯ ಆದರೆ ದಿಶಂಬರ ತಿಂಗಳ್ಲಿ ಊರಿಗೆ ಬರೋಕ್ಕುಂತ ಉಟ್ಟು. ಆಗ ನೀವೆಲ್ಲ ನಮ್ಮ ಊರಿಗೆ ಬನ್ನಿ, ಗುಡ್ಡೆ ನೋಡಿ! ನನ್ನ ತಮ್ಮನ ವಿಳಾಸ ಗುಡ್ಡೆ ಕುಶಾಲಪ್ಪ ಗೌಡ, ದೇವಚಳ್ಳ ಗ್ರಾಮ, ಪ್ರೊ. ನೆಲ್ಲುರುಕೆಂರಾಜೆ, ಸುಳ್ಯ ತಾಲ್ಲೂಕು. ಗೌಡರ ಇತಿಹಾಸದ ಬಗ್ಗೆ ಏನಾದರೂ ಪುಸ್ತಕ ಸಿಕ್ಕಿರೆ ದಯಮಾಡಿ ನಂಗಾಗಿ ತೆಗ್ದ್ ಇಡಿ. ನಾ ಬಾಕನ ತಕ್ಕಣೆ.

ನಿಮ್ಮ ಹಂಗೆ ಪತ್ರಿಕೋದ್ಯಮಕ್ಕೆ ನಾಂದಿ ಹಾಕಿದ ನಿಮ್ಮ ಮಂಜ ದೀಪಕ್ ಮತ್ತು ಮಗಳ್ ನಿಶಾ ಅವರ್ನ ಕೇಳ್ದೆ ಅಂತ ಹೇಳಿ. ಸಂಗಾತಿಗೆ ಆರ್ ವರ್ಷ ತಿಂಬಿದಕ್ಕೆ ನಮ್ಮ ಶುಭಾಶಯ!

ನನ್ನ ಅರೆ-ಅರೆ ಕನ್ನಡದ ಕಾಗದ ಇಲ್ಲಿಗೆ ಮುಕ್ತಾಯ ಮಾಡ್ನೆ!

*ಇತಿ ನಮಸ್ಕಾರ,*

*ಗುಡ್ಡೆ ರಾಘವ ಗೌಡ,ಡೇಟನ್, ಒಹಾಯೊ, ಯು. ಎಸ್. ಎ.*

*ಜುಲೈ 18-2003*

*ಸೂ: ಇದರೊಟ್ಟಿಗೆ ಬೇರೆ ಕಡೆ ಪ್ರಕಾಶ ಆದ ನನ್ನ ಪದ್ಯಗ ಮತ್ತು ಇದೇ ಜುಲೈ ೪ ಕ್ಕೆ ಸಿನ್ಸಿನ್ನಾಟಿಲಿ ನಡ್ದ ಜೈನ ಸಮ್ಮೇಳನದಲ್ಲಿ ಹಿಂದೂ ಧರ್ಮಲಿ ಅಹಿಂಸೆಯ ಬಗ್ಗೆ ಮಾಡ್ದ ಭಾಷಣದ ಪ್ರತಿನೂ ಕಳ್ಸೊಳೆ. -ವಂದನೆಗ*

---

### *ಪತ್ರ ವಿಭಾಗ : ಎರಡ್*

## ಸುಖಾ ಸುಮ್ಮನೆ ದೂರಿಕಾಕ್ಕದ್

ಕೊಡಗು ಸಂಗಾತಿ ಸಂಪುಟ 7 ಸಂಚಿಕೆ 5-6 ರ ಪತ್ರ ವಿಭಾಗ ಸಂಖ್ಯೆ 2 ರ ಬಗ್ಗೆ ದಿಕ್ಕು ದೆಸೆಯಿಲ್ಲದ ಸೋಮಯ್ಯ ತ್ತೇಳುವವಂಗೆ ನಿಮ್ಮ ಪತ್ರಿಕೆ ಒಂದು ಅಲರ್ಜಿ ಆಗುಟ್ಟುಕಂಡದೆ. ಬಹುಷ ನಿಮ್ಮಪತ್ರಿಕೆದ್ ಚಂದಾಹಣ ಪೂರ್ತಿ ಕೊಟ್ಟಿರಿಕಿಲ್ಲೆ ಕಂಡದೆ. ಹಂಗಾಗಿ ಅಂವ ಅಡ್ರೆಸ್ ಕೊಟ್ಟಿತ್ತ್‌ಲೆ. ಅಂವಪತ್ರಿಕೆನ ಮತ್ತೆ ಅರೆಗನ್ನಡ ಭಾಷೆನಬಾರಿ ದೂರಿ ಬರ್ದ್‌ಂವ ಕನ್ನಡಲಿ ಯಾಕೆ ಪತ್ರ ಬರ್ದ್‌ದ್? ಅವಂಗೂ ಅರೆಗನ್ನಡ ಬಾಸೆ ಬಾದುಲೆ ಕಂಡದೆ. ಮತ್ತೆ ಅವಂಗೆ ಗುಡ್ಡೆಮನೆ ಅಪ್ಪಯ್ಯಗೌಡರ ಸ್ಟ್ಯಾಚು ಬೇಕ್‌ಗಡ. ಗುಡ್ಡೆಮನೆ ಅಪ್ಪಯ್ಯಗೌಡರ ಬಗ್ಗೆ ಲೇಖನ ಮಾಡ್ತಲಿರ್ವ ಕೊಡಗ್ ಸಂಗಾತಿನ ದಿಟ್ಟತನ ಏನ್‌ತ್ತೇಳ್ದು ಅವಂಗೆ ಗೊತ್ತುಟ್ಟಾತ ಕೇಳಿ? ಅವಂಗೆ ಮತ್ತೊಂದ್ ತಿಳ್ಸಿ. ಬೇರೆಯವುಕ್ಕೆ ಕೇಡ್ ಬಯಸುದನ್ನ ಬಿಟ್ಟ್ ತನ್ನಿಂದ ಸಮಾಜಕ್ಕೆ ಎನಾದರ್ ಒಳ್ಳೆದ್ ಮಾಡಿಟ್ಟಾತ್ತೇಳಿ ಕೇಳಿ?ದಯವಿಟ್ಟ್ ಪ್ರಕಟಿಸೋಕುತ ಕೇಳಿಕಣೆ.

-ಕೆ. ಆರ್. ಅನಂತ್ ಕುಮಾರ್, ಗಾಳಿಬೀಡು.

---

"ಕಟ್ಟಿಂಗ್ ಪ್ಲೇಯರ್" ಮನೋಭಾವನೆಯಿಂದ ಗೌಡ ಜನಾಂಗ ದೂರವಿರಬೇಕು. (ಏಡಿ ಬುದ್ಧಿ)

# ನಿಮ್ಮ ಹಣ, ನಿಮ್ಮದೇ ಆರೋಗ್ಯ / ಅನಾರೋಗ್ಯ???

ಕೋಲ ಅಥವಾ ಈ ಜಾತಿಯ ಯಾವುದೇತಂಪು ಪಾನೀಯವೇ ಆಗಲಿ, ಅದರಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಇರುತ್ತದೆ. ಜೊತೆಗೆ ಅವು ಕಾರ್ಬಾಲಿಕ್ ಆಸಿಡ್ ಮತ್ತು ಇತರೆ ರಾಸಾಯನಿಕ ಮಿಶ್ರಣವೂ ಇರುತ್ತದೆ. ನೀವು ಮಾಡಿರುವ ಊಟ ಜೀರ್ಣವಾಗಲು ಸರಿಯಾದ ಉಷ್ಣಾಂಷ 37 ಡಿಗ್ರಿ ಇರಬೇಕು. ನೀವು ಹಿಡಿದುಕೊಂಡಿರುವ ಈ ಕೋಲ್ಡ್ ಕೋಲಾದ ಉಷ್ಣಾಂಶ ಸುಮಾರು ಜೀರೋ ಡಿಗ್ರಿ ಇದೆ. ಇದನ್ನು ಕುಡಿಯುವುದರಿಂದ ಆಹಾರ ಸರಿಯಾಗಿ ಜೀರ್ಣವಾಗದೆ ನಿಮ್ಮ ಜೀರ್ಣಾಂಗಗಳ ಮೇಲೆ ಒತ್ತಡ ಹೆಚ್ಚುವುದಲ್ಲದೆ ಜೀರ್ಣ ರಸ (Degestive Juices) ಸಹ ತೆಳ್ಳಗಾಗುತ್ತದೆ. ನೀವು ತಿಂದ ಆಹಾರ ಜೀರ್ಣವಾಗದೆ ಹೊಟ್ಟೆಯಲ್ಲೇ ಕೊಳೆಯತೊಡಗಿ ಹೊಟ್ಟೆಯಲ್ಲಿ ಆಸಿಡ್ (Bio-gas?) ಉತ್ಪಾದನೆಯಾಗಿ ಆಹಾರ ವಿಷವಾಗಲು ಶುರುವಾಗುತ್ತದೆ. ಈ ವಿಷ ಕರುಳಿನ ಮೂಲಕ ರಕ್ತಗತವಾಗಿ ಇಡೀ ದೇಹಕ್ಕೆ ಹರಡುತ್ತದೆ. ಇದರಿಂದ ನಿಮ್ಮ ದೇಹ ರೋಗಗಳ ಅಗರವಾಗುತ್ತದೆ.

ಕೋಲಗಳಲ್ಲಿ ವಿವಿಧ ರೀತಿಯ ಸಕ್ಕರೆ ಅಂಶಗಳಿದ್ದು ಇದರ ಸೇವನೆಯಿಂದ ಕ್ಯಾನ್ಸರ್ ಬರುವ ಸಂಭವ ಇದೆ ಹಾಗೂ ಈ ಸಕ್ಕರೆಗಳಿಂದ *ಅಪಚನ, ನಿದ್ರನಾಶ, ಸಿಡುಕುತನ, ಚಡಪಡಿಕೆ, ತಲೆನೋವು, ಅರ್ಧ ತಲೆನೋವು* ಉಂಟಾಗುವುದೆಂದು ಪರೀಕ್ಷೆಗಳ ಮೂಲಕ ಕಂಡು ಬಂದಿದ್ದೆ. ಸರಾಸರಿ 12 ಔನ್ಸ್ ಕೋಲದಲ್ಲಿ ಒಂದು ಔನ್ಸ್ (9 Teaspoons) ಸಕ್ಕರೆ ಇದ್ದು ಡಾ. ಎ. ತ್ರಾಪ್. ಎಂ.ಡಿ., ಅವರ ಪ್ರಕಾರ ಇವು ನಿಮ್ಮ ದೇಹವು ಬ್ಯಾಕ್ಟೀರಿಯಾಗಳೊಂದಿಗೆ ಹೋರಾಡುವ ಶಕ್ತಿಯನ್ನು ನಾಶಮಾಡುತ್ತದೆ.

ಈ ತಂಪು ಪಾನೀಯಗಳಲ್ಲಿ ಫಾಸ್ಪರಿಕ್ ಆಸಿಡ್ಡಿನ ಅಂಶ ಇರುವುದರಿಂದ ಹಲ್ಲುಗಳ ಸಂರಕ್ಷಣೆಗಾಗಿ ಇರುವ ಎನಾಮಲ್ ಧಾತು ನಾಶವಾಗುತ್ತದೆ. ಹಲ್ಲುಗಳು ತೀವ್ರ ನಾಶವಾಗುತ್ತವೆ. ಮಕ್ಕಳ ಹಲ್ಲುಗಳ ಮೇಲೆ ಕೂಡಲೇ ಕೆಟ್ಟ ಪರಿಣಾಮವಾಗುತ್ತದೆ. ನೀವು ಬೇಕಾದರೆ ಪರೀಕ್ಷೆ ಮಾಡಿ ನೋಡಿ, ಯಾರದಾದರೂ ಒಂದು ಬಿದ್ದಿರುವ ಹಲ್ಲನ್ನು ಕೋಲಾ ಅಥವಾ ಈ ರೀತಿಯ ಯಾವುದೇ ತಂಪು ಪಾನೀಯದ ಬಾಟಲ್‌ನಲ್ಲಿ ಹಾಕಿ ನೋಡಿ, ಅದು ಕೆಲ ದಿನಗಳಲ್ಲಿ ಮೆತ್ತಗಾಗಿ, ದಿನೇ ದಿನೇ ಕರಗಿ, ಕೆಲವೇ ದಿನಗಳಲ್ಲಿ ಮಾಯವಾಗಿಬಿಡುತ್ತದೆ. ಮಣ್ಣಿನಲ್ಲಿ ಹೂತರೂ ಮಣ್ಣಾಗದ, ಬೆಂಕಿಯಲ್ಲಿ ಹಾಕಿದರೂ ಸುಡಲಾಗದ ನಿಮ್ಮ ಹಲ್ಲುಗಳಿಗೇ ಈ ಗತಿಯಾದರೆ, ಇನ್ನು ನಿಮ್ಮ ಹೊಟ್ಟೆ, ಕರುಳು, ರಕ್ತನಾಳ, ಜಠರ ಇತರೆ ಸೂಕ್ಷ್ಮ ಭಾಗಗಳ ಕೋಶಗಳ (Cells) ನ ಗತಿ ಏನು?

ಕೋಲಾ ಹಾಗೂ ಇದರ ಜಾತಿಯ ತಂಪು ಪಾನೀಯ, ಸೇವನೆಯಿಂದ ಕಿಡ್ನಿಯ ಮೇಲೆ ದುಷ್ಪರಿಣಾಮವಾಗುವುದು, ಎರಡು ಅಥವಾ ಮೂರು ಬಾಟಲ್ ತಂಪು ಪಾನೀಯಗಳನ್ನು ಸೇವಿಸಿ ಮರುದಿನ ಮೂತ್ರ ವಿಸರ್ಜನೆಗೆ ಹೋಗುವಾಗಿನ ಪರಿಣಾಮವನ್ನು ಗಮನಿಸಿ, ಕಿಡ್ನಿಸ್ಟೋನ್ಸ್ ರೋಗಿಗಳ ಮೇಲೆ ನಡೆದ ಪ್ರಾಯೋಗಿಕ ಪರೀಕ್ಷೆಯಲ್ಲಿ ತಿಳಿದು ಬಂದ ಅಂಶವೆಂದರೆ ತಂಪು ಪಾನೀಯಗಳ ಸೇವನೆಯನ್ನು ಮುಂದುವರೆಸಿದ ರೋಗಿಗಗಳಲ್ಲಿ ಕಿಡ್ನಿಯ ಬಾಧೆ, ವಿವಿಧ ಪಾನೀಯಗಳನ್ನು ಅವಲಂಬಿಸಿ ಹೆಚ್ಚಾದರೆ, ತಂಪು ಪಾನೀಯಗಳ ಸೇವನೆಯನ್ನು ನಿಲ್ಲಿಸಿದ್ದ ಇತರರಲ್ಲಿ ಈ ಬಾಧೆ ಶಮನಗೊಂಡಿತ್ತು.

ಭಾರತದಲ್ಲಿ ಬಹಳವಾಗಿ ಮಾರಾಟವಾಗುತ್ತಿರುವ ಕೆಲವು ವಿದೇಶಿ ತಂಪು ಪಾನೀಯಗಳು Ph values ಈ ಕೆಳಗಿನಂತಿದೆ.

ಪೆಪ್ಸಿಕೋಲ -3.46ಕೋಕಾಕೋಲ- 3-43 ತಮ್ಸ್‌ಅಪ್- 3-41 ಲಿಮ್ಕಾ-3-60

ಕಕ್ಕಸ್ಸನ್ನು ಸ್ವಚ್ಛಗೊಳಿಸುವ ಆಸಿಡ್(ಫೀನಾಯಿಲ್) ನ Ph value ಸಹ 3.40 ಆಗಿರುತ್ತದೆ.

ಇವು ನಿಮ್ಮ ದೇಹಕ್ಕೆ ಮಾತ್ರವಲ್ಲ, ನಿಮ್ಮ ದೇಶದ ಮೇಲೂ ದುಷ್ಪರಿಣಾಮ ಬೀರುತ್ತದೆ. BICPಎಂಬ ಸರ್ಕಾರಿ ಸಂಸ್ಥೆಯ ಪ್ರಕಾರ ಒಂದು ಬಾಟಲಿ ಕೋಲಾ ತಯಾರಿಸಲು 70ಪೈಸೆ ತಗಲುತ್ತದೆ. ಸರಬರಾಜು, ಜಾಹೀರಾತು. ಇವುಗಳ ಮೇಲೆ ಒಂದು ಬಾಟಲಿಗೆ ಸುಮಾರು 2 ರೂ. ಎಂದರೂ 3 ರೂ. ಗೆ ಒಂದು ಬಾಟಲಿ ತಯಾರಾಗುತ್ತದೆ. ಇದನ್ನು 10 ರೂ. ಗೆ ಮಾರಿ ನೀವು ಕುಡಿಯುವ ಒಂದು ಬಾಟಲಿ ಕೋಲದಿಂದ 7 ರೂ. ಲಾಭ ಕಂಪನಿಗೆ ಹೋಗುತ್ತದೆ. ಹೀಗೆ ಒಂದೊಂದು ಕೋಲಾ ಕಂಪನಿಯ ಮೂಲಕ 3,500 ಕೋಟಿ ರೂ. ಲಾಭ ಅಮೇರಿಕಾ ದೇಶಕ್ಕೆ ರವಾನೆಯಾಗುತ್ತಿದೆ. ಆದರೆ ದೇಶೀಯವಾಗಿ ತಯಾರಾಗುವ ಟೊರಿನೋ ಹಾಗೂ ಡಿಕ್ಸಿ ಕೋಲಾದ ph Value 8.0 ಆಗಿರುತ್ತದೆ.

ಕುಡಿಯುವ ನೀರಿನ ph Value ಸಹ 8.0 ಇರುತ್ತದೆ. ದೆಹಲಿ ವಿಶ್ವ ವಿದ್ಯಾನಿಲಯದಲ್ಲಿ ನಡೆದ ಅಧಿಕ ಕೋಲಾ ಸೇವನೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಯೊಬ್ಬ 8 ಕೋಲಾ ಸೇವಿಸಿ ಹೊಟ್ಟೆ ಉಬ್ಬರಿಂದ ಸ್ಥಳದಲ್ಲೇ ಕೊನೆಯುಸಿರೆಳೆದ. ಅಂದಿನಿಂದ ದೆಹಲಿ ವಿಶ್ವ ವಿದ್ಯಾನಿಲಯ ಅಲ್ಲಿನ ಕ್ಯಾಂಟೀನ್‌ನಲ್ಲಿ ಯಾವುದೇ ತರದ ತಂಪು ಪಾನಿಯಗಳ ಮಾರಾಟಕ್ಕೆ ನಿರ್ಬಂಧ ವಿಧಿಸಿದೆ.

***ಕಿಡ್ನಿ ಇಲ್ಲದೆ ನಿಮಗೆ ಜೀವಿಸುವ ಧೈರ್ಯ ಇದ್ದಲ್ಲಿ ನೀವು ಎಷ್ಟು ಬೇಕಾದರೂ ಕೋಲ ಮತ್ತು ಈ ರೀತಿಯ ತಂಪು ಪಾನೀಯ ಕುಡಿಯಿರಿ.***

- ಆಜಾದಿ ಬಚಾವೊ ಆಂದೋಲನ ಕೈಪಿಡಿ.

*ವಿ.ಸೂ. : ನಮ್ಮ ಓದುಗರು ಬಹುವಾಗಿ ಚಿಂತಿಸಿ ವಿಚಾರಿಸುವುದಲ್ಲದೆ ಕಿರಿ ಮಕ್ಕಳಿಗೆ ಸೇವನೆ ಮಾಡದಂತೆ ತಿಳಿ ಹೇಳಬೇಕು.*

ಇಷ್ಟೆಲ್ಲಾ ತೊಂದರೆಗಳಿದ್ದರೂ ಸಹ ಸರಕಾರ ಯಾಕೆ ನಿಬಂರ್ಧ ಹಾಕುತ್ತಿಲ್ಲ ? - ನಾವೆಲ್ಲರೂ ಸ್ವದೇಶಿಯರು ತಾನೇ ?

# 2002-2003 ರ ವಾರ್ಷಿಕ ಮಹಾ ಸಭೆ



ಕೊಡಗು ಮತ್ತು ದ. ಕ. ಜಿಲ್ಲಾ ಗೌಡ ಮಹಿಳಾ ಸಂಘ, ಮೈಸೂರು ಇದರ 2002-2003 ರ ವಾರ್ಷಿಕ ಮಹಾ ಸಭೆ ದಿನಾಂಕ 27-7-03 ರ ಮಧ್ಯಾಹ್ನ 2 ಘಂಟೆಗೆ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಗೌಡ ವಿಧ್ಯಾಭವನದಲ್ಲಿ ನಡೆಯಿತು. ಕೂಡಕಂಡಿ ಲಲಿತಾ ಸೋಮಣ್ಣನವರು ವೇದಿಕೆಗೆ ಅತಿಥಿಗಳನ್ನು ಆಹ್ವಾನಿಸಿದರು. ಮನುಭರತ್ ಅವರು ಪ್ರಾರ್ಥನೆಯನ್ನೂ ಮಾಡಿದರೆ, ಪಟ್ಟಡ ಶೀಲಾಮಣಿ ಪ್ರಭಾಕರ್ ರವರು ಎಲ್ಲರನ್ನು ಸ್ವಾಗತಿಸಿದರು. ಚೆರಿಯಮನೆ ಶಾರದಾ ರಾಮಚಂದ್ರ ಹಾಗೂ ನಾಟೋಳನ ಸೀತಮ್ಮ ಶ್ರೀಧರ್ ಇವರುಗಳು ಅತಿಥಿಗಳಿಗೆ ಹೂಗುಚ್ಛ ನೀಡಿ ಗೌರವಿಸಿದರು. ಸಂಘದ ಕಾರ್ಯದರ್ಶಿನಿ ಗೀತಾ ಮೋಂಟಡ್ಕ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರ ಮಂಡನೆ ಮಾಡಿದರು.

ಅತಿಥಿಯಾಗಿ ಆಗಮಿಸಿದ್ದ ರಾಷ್ಟ್ರಪತಿ ಪದಕ ವಿಜೇತೆ ತೆಕ್ಕಡೆ ಜಯಶೀಲ ಮುತ್ತಣ್ಣ ಇವರಿಗೆ ಸಂಘದ ಅಧ್ಯಕ್ಷರಾದ ದಂಬೆಕೋಡಿ ಭಾಗೀರಥಿಯವರು ಹಾರ ಹಾಕಿ, ಶಾಲು ಹೊದಿಸಿ ಫಲಪುಷ್ಪ ನೀಡಿ ಸನ್ಮಾನಿಸಿದರು. ಸನ್ಮಾನ.ಹಾಗೂ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಾ ಅವರು ಮಾನವ ಸಂಘ ಜೀವಿ. ಆತ ಏಕಾಂಗಿಯಾಗಿ ಜೀವಿಸಲಾರ. ಪ್ರತಿಯೊಬ್ಬ ವ್ಯಕ್ತಿಯು ಬದುಕಬೇಕು ಸಮಾಜದ ಒಂದು ಅವಿಭಾಜ್ಯ ಅಂಗ. ಆತ ಸಮೂಹದಲ್ಲಿ ಆಗ ಉನ್ನತ ಜೀವನವನ್ನು ಬೆಳೆಸಿಕೊಳ್ಳಬಹುದು. ಎಂದು ಒಂದು ಸಂಘ, ಸಂಸ್ಥೆಯ ಮಹತ್ವದ ಬಗ್ಗೆ ಹೇಳಿದರು. ಅಲ್ಲದೇ ಸ್ತ್ರೀಯು ಅಬಲೆಯಲ್ಲ ಅವಳು ಸಬಲೆ. ಒಂದು ಮಹಿಳೆ ಸಮಾಜದ ನಿರ್ಮಾಪಕಿ. ಪ್ರತಿಯೊಬ್ಬ ಪುರುಷನ ಯಶಸ್ಸಿಗೆ ಸ್ತ್ರೀಯು ಬೆಂಗಾವಲಾಗಿರುತ್ತಾಳೆ. ಶಿವಾಜಿ ಛತ್ರಪತಿ ಯಾಗಬೇಕಾದರೆ ಆತನ ತಾಯಿ ಜೀಜಾಬಾಯಿಯೇ ಕಾರಣ. ಹೆಣ್ಣಿನಿಂದಲೇ ಹಿತವು- ಪರಮ ಸಕಲವೂ ಎಂದು ಹೆಣ್ಣನ್ನು ತಾಯಿಯ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮದ ಇನ್ನೊಂದು ಅತಿಥಿಯಾದ ಅಂಡ್ವಂಗಾಯ ಗೀತಾ ಪುಂಡರೀಕ ರವರು ಮಾತನಾಡುತ್ತಾ ಇಂಥಹ ಸಂಘ ಸಂಸ್ಥೆಗಳಲ್ಲಿ ಸಾಧ್ಯವಾದಷ್ಟು ನಾವು ಭಾಗವಹಿಸಿ ರಾಜಕೀಯವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮ ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳುವಂತಾಗಬೇಕು ಎಂದು ಹೇಳಿದರು. ಅಲ್ಲದೇ "ವಿದ್ಯಾಭ್ಯಾಸದ ನಂತರದ ಮಾಹಿತಿ" ಹಾಗೂ ಇತರ ಮಾಹಿತಿ ಬಗ್ಗೆ ಕೂಲಂಕುಷವಾಗಿ ವಿವರ ನೀಡಿದರು. ಹೆಚ್ಚಿನ ವಿವರಗಳಿಗಾಗಿ ತಮ್ಮ ಸ್ವಂತ ಅಕಾಡೆಮಿ "ಪ್ರಜ್ಞಾ" ಇಲ್ಲಿಗೆ ಬಂದು ಸಂಪರ್ಕಿಸಬಹುದೆಂದು ಕೋರಿದರು. ಅತಿಥಿಗಳನ್ನು ಕಡ್ಯದ ಸರೋಜ ಹಾಗೂ ಉಳುವಾರನ ಘನು ಇವರುಗಳು ಸಭೆಗೆ ಪರಿಚಯಿಸಿದರು.

ಸಭಿಕರ ಪರವಾಗಿ ಪಾಣತ್ತಲೆ ವಸಂತಿ ಪಳಂಗಪ್ಪ, ಕೊಡಲಿಂಗನ ತಿಲಕ ಮೇದಪ್ಪ, ಕುಡಕಂಡಿ ಲಲಿತಾ ಇವರುಗಳು ಹಾಗೂ ತೆಕ್ಕಡೆ ಮುತ್ತಣ್ಣ ಅವರು ಮಾತನಾಡಿದರು. ತೆಕ್ಕಡೆ ಮುತ್ತಣ್ಣ ಅವರು ಕೀಳು ಮನೋಭಾವ ಬಿಟ್ಟು, ಸಣ್ಣತನ ಬಿಟ್ಟು, ಶುದ್ಧ ಮನಸ್ಸಿನಿಂದ ಆತ್ಮ ತೃಪ್ತಿಯಿಂದ ಕೆಲಸ ಮಾಡಬೇಕು. ಚಿಕ್ಕಂದಿನಲ್ಲೇ ಮಕ್ಕಳಿಗೆ ಎಲ್ಲಾ ವಿಷಯಗಳನ್ನು ತಿಳಿಸಿ ಎಲ್ಲಾ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು. ಪ್ರೋತ್ಸಾಹ ನೀಡಬೇಕು. ಇಂದಿನ ಮಕ್ಕಳೇ ಮುಂದಿನ ಜನಾಂಗ ಎಂದು ಹೇಳಿದರು. ಬೆಳೆಯುತ್ತಿರುವ ಈ ಮೈಸೂರು ನಗರದಲ್ಲಿ ನಮ್ಮ ಜನಾಂಗವು ಈ ರೀತಿಯಲ್ಲಿ ಮುಂದೆ ಬಂದು ಸಂಸ್ಥೆ ಕಟ್ಟಿ ತನ್ನ 6 ನೇ ವರುಷವನ್ನು ಕಳೆದುದಕ್ಕೆ ಸಂತಸ ವ್ಯಕ್ತ ಪಡಿಸಿದರು. ಇನ್ನೂ ಒಳ್ಳೆಯ ಕೆಲಸವನ್ನು ಮಾಡುವಂತಾಗಲಿ ಎಂದು ಶುಭ ಹಾರೈಸಿ ರೂ. 1000/- ವನ್ನು ಪ್ರೋತ್ಸಾಹಕವಾಗಿ ಸಂಘಕ್ಕೆ ನೀಡಿದರು.

2003-2004 ರ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಅದರಂತೆ ಅಧ್ಯಕ್ಷರಾಗಿ ಕೂಡಕಂಡಿ ಲಲಿತಾ ಸೋಮಣ್ಣ, ಉಪಾಧ್ಯಕ್ಷರಾಗಿ, ಪಟ್ಟಡ ಶೀಲಾಮಣಿ ಪ್ರಭಾಕರ್, ಕಾರ್ಯದರ್ಶಿಯಾಗಿ ಬಾಳೆಡಿ ಲಕ್ಷ್ಮಿ ಉತ್ತಯ್ಯ ಸಹ ಕಾರ್ಯ ದರ್ಶಿಯಾಗಿ ಚೆರಿಯಮನೆ ಶಾರದ, ರಾಮಚಂದ್ರ, ಖಜಾಂಚಿಯಾಗಿ ಉಳುವಾರನ ಘನು ಇವರುಗಳು ಆಯ್ಕೆ ಯಾದರು. ಅವರಲ್ಲದೆ ಕಾರ್ಯಕಾರಿ ಮಂಡಳಿ ಸದಸ್ಯರುಗಳಾಗಿ ಶಿರಕಜೆ ಸುಮಿತ್ರ, ರಾಮಕೃಷ್ಣ, ಪಾಣತ್ತಲೆ ವಸಂತಿ ಪಳಂಗಪ್ಪ, ಕಡ್ಯದ ಸರೋಜ ಚುಂಡಯ್ಯ, ದೇವರ ಗುಂಡ ಹೇಮಾವತಿ, ಕೊಡಲಿಂಗನ ತಿಲಕ ಮೇದಪ್ಪ, ನಾಟೋಳನ ಸೀತಮ್ಮ ಶ್ರೀಧರ್, ಗುಡ್ಡೇರ ಸುಶೀಲಕುಮಾರಪ್ಪ, ಅಂಡ್ವಂಗಾಯ ಗೀತಾ ಪುಂಡರಿಕ, ಬೈನೆರವನ ಶೋಭಾ ಇಂದ್ರಕುಮಾರ್, ಕುಯ್ಯುಮುಡಿ ಮೀನಾ ಚಂಗಪ್ಪ, ಉಳುವಾರನ ನೀನಾ ರವಿ, ಇವರುಗಳು ಆಯ್ಕೆ ಯಾದರು. ಹಿಂದಿನ ಅಧ್ಯಕ್ಷರಾದ ದಂಬೆಕೋಡಿ ಭಾಗೀರಥಿ ಹಾಗೂ 6 ವರುಷದಿಂದ ಕಾರ್ಯದರ್ಶಿನಿಯಾಗಿ ಕೆಲಸ ಮಾಡಿದ ದೇವಜನ ಗೀತಾ ಮೋಟಡ್ಕ ಇವರುಗಳನ್ನು ಸಮಿತಿಯು ಗೌರವ ಅಧ್ಯಕ್ಷೆ, ಹಾಗೂ ಗೌರವ ಕಾರ್ಯ ದರ್ಶಿಯಾಗಿ ಮುಂದು ವರಿಯ ಬೇಕೆಂದು ಕೇಳಿಕೊಂಡಿತು.

ಇದಾದ ನಂತರ ಅಧ್ಯಕ್ಷರಾದ ದಂಬೆಕೋಡಿ ಭಾಗೀರಥಿ ಯವರು ಮಾತನಾಡುತ್ತಾ, ಹೊಸ ಕಮೀಟಿಗೆ ಅಭಿನಂದನೆಗಳನ್ನು ಸಲ್ಲಿಸಿ ಇನ್ನೂ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿ

12 ನೇ ಪುಟಕ್ಕೆ

ಒಂದು ಮನೆಯಲ್ಲಿ ಸ್ತ್ರೀಯು ವಿದ್ಯೆ ಬುದ್ಧಿವಂತಳಾದರೆ ಆ ಸಮಾಜ ಖಂಡಿತ ಉದ್ಧಾರವಾದಂತೆ.

# ದೇರಜೆ ಗದ್ದೆಗೆ ರಂಗು ಮೂಡಿಸಿದ 'ಕೆಸರು ಗದ್ದೆ ಕ್ರೀಡಾ ಕೂಟ'

***ಮುತ್ತಾರ್ಮುಡಿ ಮಹಿಳಾ ತಂಡ, ಪಾರಾಣೆ ಪುರುಷ ತಂಡಗಳಿಗೆ ಹಗ್ಗ ಜಗ್ಗಾಟದಲ್ಲಿ ಪ್ರಥಮ ಸ್ಥಾನ.***

ಆಟ ತಿಂಗಳಿನಲ್ಲಿ, ಮನೋರಂಜನೆಯೊಂದಿಗೆ ಗೌಡ ಜನಾಂಗವನ್ನು ಸಂಘಟಿಸುವ ಉದ್ದೇಶದಿಂದ, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ನಡೆಸಿ ಕೊಂಡು ಬರುತ್ತಿರುವ, ನಾಲ್ಕನೇ ವರ್ಷದ ಕೆಸರುಗದ್ದೆ ಕ್ರೀಡೋತ್ಸವ ಜುಲೈ 27 ರಂದು ದೇರಜೆ ಗದ್ದೆಯಲ್ಲಿ ನಡೆದು ಸಹಸ್ರಾರು ಪ್ರೇಕ್ಷಕರನ್ನೂ ರಂಜಿಸಿತು. ಮುತ್ತಾರ್ಮುಡಿ ನದಿ ತೀರದ ಪ್ರಶಾಂತ ವಾತಾವರಣದಲ್ಲಿ ಅತ್ಯಂತ ರೋಚಕವಾಗಿ ಮುಕ್ತಾಯಗೊಂಡ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಸ್ಥಳೀಯ ಮುತ್ತಾರ್ಮುಡಿ ಮಹಿಳಾ ತಂಡವು, ಕಟ್ಟೆಮಾಡು ಮಹಿಳಾ ತಂಡವನ್ನು ಸೋಲಿಸಿ ಪ್ರಥಮ ಸ್ಥಾನವನ್ನು ಪಡೆಯಿತು. ಪುರುಷರ ವಿಭಾಗದಲ್ಲಿ ಪಾರಾಣೆ ಗೌಡ ಸಮಾಜ ತಂಡವು ಕಾಂತೂರು ತಂಡವನ್ನೂ ಸೋಲಿಸಿ ಪ್ರಶಸ್ತಿ ಪಡೆದುಕೊಂಡಿತು.

ಓಟದ ಸ್ಪರ್ಧೆಯಲ್ಲಿ ಅಮೆಮನೆ ನವೀನ್‌ಕುಮಾರ್ ಪ್ರಥಮ, ಕರ್ಣಯ್ಯನ ಗಣೇಶ್ ದ್ವಿತೀಯ, ಕೊಡೆಕಲ್ಲು ಪ್ರಶಾಂತ್ ತೃತೀಯ ಸ್ಥಾನ ಪಡೆದುಕೊಂಡರು. ಮಹಿಳೆಯರ ವಿಭಾಗದಲ್ಲಿ ಮುಕ್ಕಾಟಿ ಶೋಭ ಪ್ರಥಮ, ನಡುಗಲ್ಲು ದಮಯಂತಿ ದ್ವಿತೀಯ, ಕೊಂಪುಳಿರ ಜಯಶ್ರೀ ತೃತೀಯ ಸ್ಥಾನ ಪಡೆದುಕೊಂಡರು. ಪ್ರಾಥಮಿಕ ಶಾಲಾ ವಿಭಾಗದ ಹುಡುಗರಲ್ಲಿ ಕರ್ತಡ್ಕ ಚೇತನ್ ಪ್ರಥಮ, ಮುಕ್ಕಾಟಿ ಮಿಲನ್ ದ್ವಿತೀಯ, ಪರ್ಲಕೋಟಿ ಚಿರಂತ್ ತೃತೀಯ ಸ್ಥಾನ ಪಡೆದುಕೊಂಡರೆ, ಹುಡುಗಿಯರ ವಿಭಾಗದಲ್ಲಿ ದೇರಜೆ ಸ್ವಾತಿ ಪ್ರಥಮ, ಕೂಡೆಕಲ್ಲು ರಶ್ಮಿ ದ್ವಿತೀಯ ಸ್ಥಾನ, ಕಲ್ಲುಮುಟ್ಲು ಮಮತ ತೃತೀಯ ಸ್ಥಾನ ಪಡೆದರು. ಮಾಧ್ಯಮಿಕ ಶಾಲಾ ವಿಭಾಗದಲ್ಲಿ ಪೊನ್ನಚ್ಚನ ಪ್ರಶಾಂತ್ ಪ್ರಥಮ, ಬಿದ್ರುಪಣೆ ಲಿಖಿತ ದ್ವಿತೀಯ, ದೇರಜೆ ಜೀವನ ತೃತೀಯ ಸ್ಥಾನ ಪಡೆದರು. ಹುಡುಗಿಯರಲ್ಲಿ ಕೊಂಬಾರನ ಟೀನಾ ಪ್ರಥಮ, ಕರ್ಣಯ್ಯನ ಮಮತ ದ್ವಿತೀಯ, ಕೊಡೆಕಲ್ಲು ರಮ್ಯ ತೃತೀಯ ಸ್ಥಾನ ಪಡೆದರು. ಪ್ರೌಢಶಾಲಾ ವಿಭಾಗದಲ್ಲಿ ದಂಡಿನ ಅಶೋಕ ಪ್ರಥಮ, ಬೊಳ್ತಜೆ ಪವನ ದ್ವಿತೀಯ, ತಳೂರು ಕುಮಾರಧಾರ ತೃತೀಯ ಸ್ಥಾನ ಪಡೆದರು. ಹುಡುಗಿಯರಲ್ಲಿ ಗುತ್ತಿಮುಂಡನ ಪ್ರಮೀಳ ಪ್ರಥಮ, ಕೊಡೆಕಲ್ಲು ರಶ್ಮಿ ದ್ವಿತೀಯ, ಕುಂಟಕಾನ ಗ್ರೀಷ್ಮ ತೃತೀಯ ಸ್ಥಾನ ಪಡೆದರು. ಕಾಲೇಜು ವಿಭಾಗದಲ್ಲಿ ಕಾವೇರಿ ಮನೆ ಭರತ್ ಪ್ರಥಮ, ಪೂಜಾರಿರ ಸಂತೋಷ್ ದ್ವಿತೀಯ, ಅಳಪೆಮನೆ ಶಶಿಕುಮಾರ್ ತೃತೀಯ ಸ್ಥಾನ ಪಡೆದರು. ಹುಡುಗಿಯರಲ್ಲಿ ಕೊಂಪುಳಿರ ಜಯಶ್ರೀ ಪ್ರಥಮ, ದೊಡ್ಡೇರ ರಮ್ಯ ದ್ವಿತೀಯ, ಕುಂಬೇರ ಬಿಂದು ತೃತೀಯ ಸ್ಥಾನ ಪಡೆದುಕೊಂಡರು. ವಯಸ್ಕರಿಗೆ ನಡೆದ ಓಟದ ಸ್ಪರ್ಧೆಯಲ್ಲಿ ಪೂಜಾರಿರ ನಾಣಯ್ಯ ಪ್ರಥಮ, ಕುಲ್ಲಚೆಟ್ಟಿ ರಮೇಶ್ ದ್ವಿತೀಯ, ಕಡ್ಲೇರ ಉತ್ತಪ್ಪ ತೃತೀಯ ಸ್ಥಾನ ಪಡೆದರು. ವಯಸ್ಕ ಮಹಿಳೆಯರಲ್ಲಿ ಯಾಲದಾಳು ರತಿ ಪ್ರಥಮ, ಬೈತಡ್ಕ ಸುಶೀಲ ದ್ವಿತೀಯ, ತೆಕ್ಕಡೆ ಶೀಲಾ ತೃತೀಯ ಸ್ಥಾನ ಪಡೆದುಕೊಡರು.

ಕ್ರೀಡೋತ್ಸವವನ್ನು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್‌ರವರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಜನಾಂಗದ ಪ್ರತಿಯೊಂದು ಸಂಘಟನಾ ಕಾರ್ಯಗಳಿಗೆ ಸರ್ವರ ಸಹಕಾರ ಕೋರಿದರು. ಸಭೆಯಲ್ಲಿ ಭಾಗವಹಿಸಿದ್ದ ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ಹೊಸೂರು ರಮೇಶ್‌ರವರು ಮಾತನಾಡಿ ಜನರು ತಮ್ಮ ಸಂಸ್ಕೃತಿಯನ್ನು ರೂಢಿಸಿಕೊಂಡಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು. ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ನಿಜಕ್ಕೂ ಪ್ರಶಂಸನೀಯ ಎಂದು ಕುಶಾಲನಗರ ಗೌಡ ಯುವಕ ಸಂಘದ ಅಧ್ಯಕ್ಷ ಪೊನ್ನಚ್ಚನ ಮೋಹನ ಅಭಿಪ್ರಾಯಪಟ್ಟರು. ವೇದಿಕೆಯಲ್ಲಿ ಮರಗೋಡು ಗೌಡ ಸಮಾಜದ ಅಧ್ಯಕ್ಷರು ಟ್ರೋಫಿ ದಾನಿಗಳಾದ ಸೂದನ ಸರೋಜಿನಿ ಪೊನ್ನಪ್ಪ, ಪೊನ್ನಚ್ಚನ ಲಲಿತಾ ಸೋಮಣ್ಣ, ಕೊಳಂಬೆ ಪುಷ್ಪರವಿಕುಮಾರ್ ಹಾಗೂ ತಳೂರು ನಳಿನಿ ಆನಂದರವರು ಉಪಸ್ಥಿತರಿದ್ದು ಬಹುಮಾನಗಳನ್ನೂ ವಿತರಿಸಿದರು. ದೇರಜೆ ಕುಟುಂಬದ ಪಟ್ಟೆದಾರ ಉತ್ತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮವು ದೇರಜೆಯೋಗೀಶ್‌ರವರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಅಕಾಡೆಮಿ ನಿರ್ದೇಶಕಿ ಕಟ್ಟೆಮನೆ ಲಲಿತಾ ಸ್ವಾಗತಿಸಿದರು. ನಿರ್ದೇಶಕ ಕೊಂಪುಳಿರ ಗಣೇಶ್ ವಂದಿಸಿದರು. ಕಟ್ಟೆಮನೆ ಸೋನಾ ಮತ್ತು ಕಾರಂಬಿ ಪ್ರದೀಪ್ ವೀಕ್ಷಕ ವಿವರಣೆ ನೀಡಿದರೆ, ನಿರ್ದೇಶಕ ಪಟ್ಟಡ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಮರಗೋಡು ಕಾಲೇಜಿನ ದೈಹಿಕ ಶಿಕ್ಷಕ ಪರ್ಚನ ಮುತ್ತಪ್ಪ, ನಿರ್ದೇಶಕರು ಗಳಾದ ಕೊಂಪುಳಿರ ಗಣೇಶ್ ಮತ್ತು ಕರಕರನ ಉತ್ತಯ್ಯನವರು ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು. ದೇರಜೆ ಚಂಗಪ್ಪನವರ ಜ್ಞಾಪಕಾರ್ಥ ಅವರ ಪತ್ನಿ ಮತ್ತು ಮಕ್ಕಳು ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಏರ್ಪಡಿಸಿದ್ದರು.

ವರದಿ :ಪಟ್ಟಡ ಶಿವಕುಮಾರ್, ಉಪನ್ಯಾಸಕರು, ಮದೆ.

---

11 ನೇ ಪುಟದಿಂದ

ಕೊಳ್ಳುವಂತಾಗಲೀ ಯಾವುದೇ ಭೇಧ ಭಾವ, ಇಲ್ಲದೇ ನಾವೆಲ್ಲರೂ ಒಂದೇ ಮನಸ್ಸಿನಿಂದ ನಮ್ಮ ಹಬ್ಬವನ್ನು ಎಲ್ಲರೂ ಸೇರಿ ಆಚರಿಸುವಂತಾಗಲೀ ಎಂದು ಹಾರೈಸಿದರು. ತನ್ನ ಜೊತೆಗಿದ್ದು ಸಹಕರಿಸಿದ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಮನೋರಂಜನೆಗಾಗಿ ಕತ್ರಿಕೊಲ್ಲಿ ಪ್ರಿನ್ಸಿ, ಕಡ್ಯದ ಶ್ಯಾಮಲ, ಪಾಣತಲೆ ವಸಂತಿ ಪಳಂಗಪ್ಪ, ಕಡ್ಯದ ಸರೋಜ ಇವರುಗಳೂ ಹಾಡು ಹಾಡಿದರು. ಪುಟಾಣಿ ಕತ್ರಿಕೊಲ್ಲಿ ಪ್ರಿನ್ಸಿಗೆ ಪ್ರೋತ್ಸಾಹಕವಾಗಿ ಮುಖ್ಯ ಅತಿಥಿ ತೆಕ್ಕಡೆ ಜಯಶೀಲ ಮುತ್ತಣ್ಣ ಅವರು ರೂ. 100 ಬಹುಮಾನವಾಗಿ ನೀಡಿದರು. ಕೂಡಕಂಡಿ ಲಲಿತಾ ಸೋಮಣ್ಣನವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಕೊನೆಯಲ್ಲಿ ಕಾಫಿ ತಿಂಡಿಯ ವ್ಯವಸ್ಥೆಯಿತ್ತು.

ವರದಿ : ಗೀತಾ ಮೋಟಡ್ಕ

---

ಉತ್ತಮ ಆರೋಗ್ಯ ಹೊಂದಲು ಬೇಕು ಕ್ರೀಡಾ ಕೂಟಗಳು

# ಗೌಡರ ಏಳುಬೀಳು - ಚಾರಿತ್ರಿಕ ಅವಲೋಕನ - 2

*ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ :*

೧೯೨೦ನೇ ಇಸವಿಯಲ್ಲಿ ಆಯುಧದ ಕಾನೂನುಗಳನ್ನು ಪುನಃ ಬದಲಾಯಿಸಿದಾಗ ಆಯುಧಗಳನ್ನು ಹಿಡಿಯಬಾರದೆಂಬ ಪೂರ್ವದಂತೆಯೇ ಕೊಡಗು ಜನರಿಗೆ ಲಗಾವು ಆಗಬಾರದೆಂದು ಆಗ ಕೊಡಗಿನ ಡಿಸ್ಟಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಎಫ್. ಎಲ್. ಬ್ರಿಗ್ ಸ್ಟಾಕ್ ಸಾಹೇಬರು ಹಠತ್ತಾಗಿ ಬರೆದ ಮೇರೆಗೆ ಆಗ ಚೀಫ್ ಕಮಿಷನರಾಗಿದ್ದ ಎಚ್. ವಿ. ಕಾಬ್ ಸಾಹೇಬರು ಮಂಜೂರು ಮಾಡಿಸಿದರು.

ಮೇಲಿನ ವಿವರಣೆಯಿಂದ ಅರ್ಥವಾಗುವುದೇನೆಂದರೆ ಶಸ್ತ್ರ ನಿರ್ಬಂಧ ಕಾಯಿದೆಯಲ್ಲಿ ವಿನಾಯಿತಿ ಸಿಗಲು ೧೮೩೭ ಮತ್ತು ೧೮೫೭ರಲ್ಲಿ ಅವರು ಶಸ್ತ್ರ ಹಿಡಿದು ಬ್ರಿಟಿಷರ ಪರವಾಗಿ ಭಾರತೀಯರ ವಿರುದ್ಧವಾಗಿದ್ದುದೇ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಇದು ಸ್ವಾತಂತ್ರ್ಯ ಸಿಕ್ಕಿ ಅರ್ಧ ಶತಮಾನ ಕಳೆದರೂ ಜಾರಿಯಲ್ಲಿರುವುದು ಸರಿಯೇ?

ಬಾಂಬೆ ಕಮಿಟಿಯ ಹಿಸ್ಟ್ರಿ ಆಫ್ ಫ್ರೀಡಮ್ ಮೂವ್ ಮೆಂಟ್‌ನಲ್ಲಿ ಹೀಗೆ ಬರೆದಿದ್ದಾರೆ:

"ಕೆನರಾ ಜಿಲ್ಲೆಯಲ್ಲೆಲ್ಲಾ ಹರಡಿ ನೆರೆಹೊರೆಯ ಪ್ರಾಂತ್ಯ ಗಳಿಗೂ ಹರಡುತ್ತಿದ್ದ ವಿಶಾಲ ವ್ಯಾಪ್ತಿಯ ಪ್ರಭಾವಶಾಲಿ ಬಂಡಾಯವನ್ನು ಆರು ವಾರಗಳಲ್ಲಿ ತಣ್ಣಗೆ ಮಾಡಲಾಯಿತು. ಕಾರ್ಯಸಿದ್ಧಿಗೂ, ಬಂಡಾಯವನ್ನು ಸಂಪೂರ್ಣವಾಗಿ ಮಟ್ಟ ಹಾಕಲಿಕ್ಕೂ ಮುಖ್ಯವಾಗಿ ಕೊಡಗಿನ ದಿವಾನ ಬೋಪನ್ ಕಾರಣ. ಈ ಮಹಾತ್ಕಾರ್ಯ ಸಾಧನೆಯಲ್ಲಿ ವಿಶೇಷ ಸೇವೆ ಸಲ್ಲಿಸಿದ ದಿವಾನ ಬೋಪನ್ ಮತ್ತು ಅವರ ಪಕ್ಷದವರಿಗೆ ಬಂಡಾಯಗಾರರಿಂದ ವಶಪಡಿಸಿಕೊಂಡ ಭಂಡಾರವನ್ನೆಲ್ಲಾ ಬಹುಮಾನವಾಗಿ ಕೊಡಲಾಯಿತು."

"ನಿಜವಾಗಿಯೂ ಇದು ಜನರ ಬಂಡಾಯ; ಜನರು ಸರಕಾರವನ್ನು ಪ್ರತಿಭಟಿಸಿ ನಿಂತ ದಂಗೆ, ಜನರೊಂದಿಗೆ ಸರಕಾರದ ಅಧಿಕಾರಿಗಳೂ, ಗ್ರಾಮಾಧಿಕಾರಿಗಳೂ ಸೇರಿದ್ದರೆಂದು ನಂಬಲಾಗಿದೆ. ಈ ಬಂಡಾಯ ಕಾಲ ಪೂರ್ತಿ ಕೊಡಗಿನ ಜನರು ಸರಕಾರದ ಭಕ್ತರಾಗಿ ವರ್ತಿಸಿದರೆಂಬುದೊಂದು ಮಾತ್ರ ನಿರಾಶೆಯನ್ನುಂಟು ಮಾಡತಕ್ಕ ವಿಷಯ. ಈ ಕಾರಣದಿಂದಲೇ ದಿವಾನ ಬೋಪನ್ ಬಂಡಾಯದ ನಾಯಕರನ್ನು ಹುಡುಕಿ ಹಿಡಿದು, ಅವರ ದ್ರೋಹ ಕೃತ್ಯಗಳ ಹುಟ್ಟಡಗಿಸಲು ಸಮರ್ಥನಾದ. ಈ ಬಂಡಾಯದ ನಾಯಕರನ್ನೆಲ್ಲ ಬಂಧಿಸಿ, ವಿಚಾರಣೆಗೆ ಗುರಿಪಡಿಸಿ, ಅವರಿಗೆ ಶಿಕ್ಷೆ ವಿಧಿಸುವುದು ಸಾಧ್ಯವಾಯಿತು.

ದಂಗೆಯ ವಿಚಾರಣೆ ನಡೆಸಿದ ಕಾಟನ್ ರಿಪೋರ್ಟ್‌ನಲ್ಲಿಯ ಅನುಬಂಧದಲ್ಲಿ ಪುಟ ೨೯೭, ೨೯೮, ೨೯೯ ರಲ್ಲಿ ಕಾಣಿಸಿಕೊಳ್ಳುವ ಎರಡು ಪತ್ರಗಳಲ್ಲಿ ಸಿಕ್ಕುವ ವಿವರಗಳ ಪ್ರಕಾರ: ದಿವಾನ ಬೋಪು ೭೦೦ ಕೊಡಗರೊಂದಿಗೆ ಘಟ್ಟದ ಕೆಳಗಿನ ಪ್ರದೇಶವಾದ ಸಂಪಾಜೆಗೆ ೨೦. ೧೨. ೧೮೩೭ ರಂದು ಬಂದಿಳಿದನು. ಮುಂದೆ ಪೆರಾಜೆಯ ಕಡೆ ಮುಂದುವರಿದನು. ಅಲ್ಲಿಗೆ ಸುಭೇದಾರ ಅಚ್ಚು, ೨೦೦ ಕೊಡಗರೊಂದಿಗೆ ಬಂದು ಸೇರಿಕೊಂಡನು. ಇವರಿಗೆ ಸುಮಾರು ೧೫೦ ದಂಗೆಕೋರರು ಎದುರಾಗುತ್ತಾರೆ. ನಾಲ್ವರು ಸತ್ತು ಬಿದ್ದಾಗ ಚದರಿ ಓಡಿಹೋಗುತ್ತಾರೆ. ಕೆಲವರು ಓಡಿದರೆ ಒಬ್ಬನು ಮಾತ್ರ ಸೆರೆ ಸಿಕ್ಕುತ್ತಾನೆ. ಅಷ್ಟು ದೊಡ್ಡ ಸೈನ್ಯಕ್ಕೆ ಆಹಾರ ವ್ಯವಸ್ಥೆ ಇಲ್ಲದ ಕಾರಣ ತಾವು ನಾಡಿಗೆ (ಭಾಗಮಂಡಲಕ್ಕೆ) ಹಿಂತಿರುಗುತ್ತಾರೆ. ಬ್ರಿಟಿಷ್ ಆಡಳಿತಕ್ಕೆ ಮೊದಲು ಕೊಡಗರು ಬಂಡಾಯಗಾರರ ಬೇಟೆಯಾಡಿದ್ದನ್ನು ಮೇಲ್ಕಾಣಿಸಿದ ವಿವರಣೆಯಿಂದ ಅರ್ಥವಾಗುತ್ತದೆ.

ಬಂಡಾಯಗಾರರೆಂದರೆ ಯಾರು? ದಂಗೆಯಲ್ಲಿ ತೆರೆದುಕೊಂಡು ಭಾಗಿಗಳಾಗಿದ್ದ ಕೆಳಕೊಡಗು ಮತ್ತು ಬಂಟ್ವಾಳ ತಾಲೂಕಿನ ಒಟ್ಟು ಗಂಡಸರ ಸಂಖ್ಯೆ ಸುಮಾರು ೩೦,೦೦೦ ಸಾವಿರವಿದ್ದು ಅದರಲ್ಲಿ ಎಂಟು ಅಥವಾ ಹತ್ತು ಸಾವಿರದಷ್ಟು ಜನರು ಮ್ಯಾಚ್‌ಲಾಕ್ (matchlocks) ಮತ್ತಿತರ ದೇಶೀಯ ಶಸ್ತ್ರಗಳೊಂದಿಗೆ ಸಕ್ರೀಯವಾಗಿ ಭಾಗವಹಿಸಿರಬಹುದೆಂದು ನಂಬಬಹುದಾಗಿದೆ.

ಕೆಳಕೊಡಗು ಅದರಲ್ಲೂ ಬಂಟ್ವಾಳ ತಾಲೂಕಿನಲ್ಲಿ ಗಂಡಸರ ಸಂಖ್ಯೆ ೩೦,೦೦೦ ಇದ್ದಿತು. ಅದರಲ್ಲಿ ೮,೦೦೦ದಿಂದ ೧೦,೦೦೦ ಜನರು ನಾಡು ಕೋವಿ ಇತ್ಯಾದಿ ಆಯುಧ ಹಿಡಿದು ಸಕ್ರೀಯವಾಗಿ ದಂಗೆಯಲ್ಲಿ ಭಾಗವಹಿಸಿದರೆಂದು ನಂಬಬಹುದಾಗಿದೆ.

ಸಂಪಾಜೆ, ಅರಂತೋಡು, ಪೆರಾಜೆ ಮುಂತಾದ ಗ್ರಾಮ ಗಳಲ್ಲಿದ್ದವರು ಆಗ ನೂರಕ್ಕೆ ನೂರು ಗೌಡರು. ಈ ರೀತಿ ಬ್ರಿಟಿಷರಿಂದಾಗಿ ಕೊಡಗರು ಮತ್ತು ಗೌಡರು ಕಾದಾಡಿದರು. ವೈರಿಗಳಾದರು.ಬ್ರಿಟಿಷರ ನಂಬಿಕೆ ಗಳಿಸಿದವರು ಉನ್ನತ ಪದವಿ ಗಿಟ್ಟಿಸಿಕೊಂಡರು. ವಿರೋಧ ಗಳಿಸಿಕೊಂಡವರು ಅಧಃಪತನದ ಪಾತಾಳ ತಲುಪಿದರು.

೧೮೫೫ರಲ್ಲಿ ರೆವರೆಂಡ್ ಮೊಗ್ಲಿಂಗ್‌ನು ಪ್ರಕಟಿಸಿದ ಕೂರ್ಗ್ ಮೆಮೊಯರ್‌ನಲ್ಲಿ ಕೊಡಗಿನಲ್ಲಿ ಗೌಡ ಜನಾಂಗ ಇದೆ ಎನ್ನುವುದನ್ನು ಗುರುತಿಸಲು ನಿರಾಕರಿಸಿದಂತಿದೆ. ಕೊಡಗಿನ ಚರಿತ್ರೆ ಅಂದರೆ ಕೊಡಗರ ಚರಿತ್ರೆ ಎಂಬಂತೆ ಚಿತ್ರಿಸಲಾಗಿದೆ ಇದು ಸರಿಯಲ್ಲ.

'ಇಡಿ ಕೊಡಗು ಜನಸಂಖ್ಯೆ ೨೫,೦೦೦ ಅಥವಾ ೨೬,೦೦೦ ಇರಬಹುದೆಂದು ಅಂದಾಜಿಸಲಾಗಿದೆ. ಹಿಂದಿನ ದಿವಸಗಳಲ್ಲಿ ಅವರ ಸಂಖ್ಯೆ ೪,೦೦೦ ಅಥವಾ ೫,೦೦೦ ಒಟ್ಟಾರೆ ಇದ್ದೀರಬಹು ದೆನ್ನಿಸುತ್ತದೆ. ಕಳೆದ ೨೦ ವರ್ಷಗಳಲ್ಲಿ ಅವರ ಸಂಖ್ಯೆ ಬಹಳ ಹೆಚ್ಚತೊಡಗಿತು. ಆಗ ನಿರಂಕುಶ ರಾಜನಿಂದ ಅವರು ಕೊಲ್ಲಲ್ಪಡು ವುದಾಗಲೀ, ಯುದ್ಧದಲ್ಲಿ ನಾಶವಾಗುವುದಾಗಲಿ ಇಲ್ಲವಾಗಿದೆ.

೧೮೨೯ರಲ್ಲಿ ಜೇಮ್ಸ್ ಸ್ಟೀವನ್ಸ್‌ಗೆ ದೊಡ್ಡ ವೀರರಾಜನು ಬರೆದ ಪತ್ರದಲ್ಲಿ ಆಗ ಇದ್ದಿರಬಹುದಾದ ಕೊಡಗರ ಸಂಖ್ಯೆಯ ಬಗ್ಗೆ ಬೆಳಕು ಬೀರುತ್ತದೆ"

"ಇದರ ನಂತರ ನನ್ನ ಲೂಟಿ ಮಾಡಿದ್ದರೆ ನಾನು ಹೊಣೆಯಾಗಿ ತಕ್ಕ ಪ್ರತಿಫಲ ಸಲ್ಲಿಸುತ್ತೇನೆ. ಕಂಪೆನಿ ಯುದ್ಧದ ಕ್ಯಾಂಪ್‌ಗಳಿಗೆ ನನ್ನ

**ಮೈಸೂರಿನಲ್ಲಿ ಮಾಜಿ ಸೈನಿಕರ ಸಂಘ ಇಬ್ಬರು ಗೌಡ ಮಕ್ಕಳನ್ನು ದತ್ತು ತೆಗೆದುಕೊಂಡಿದೆ.**

ಜನರ ಹೆಂಗಸರು, ಮಕ್ಕಳು, ಭತ್ತ ಕುಟ್ಟಿ ತರುತ್ತಿದ್ದುದು ತಮಗೆ ತಿಳಿದ ವಿಚಾರ. ಒಟ್ಟಿನಲ್ಲಿ ನನಗೆ ಬೇಕಾದ್ದು ನನ್ನ ೬೦೦೦ ಅಥವಾ ೭೦೦೦ ಕೊಡಗರ ಹೊಟ್ಟೆ ಬಟ್ಟೆಯ ಅವಶ್ಯಕತೆಗಳು ಮತ್ತು ಸತ್ತವರ ಸಂಬಂಧಿಕರ ಹಾಗೂ ಗಾಯಾಳುಗಳ ರಕ್ಷಣೆ ಮಾತ್ರ ಆಗಿರುತ್ತದೆ.'

ದೊಡ್ಡ ವೀರರಾಜನೊಂದಿಗೆ ಇದ್ದ ೬೦೦೦ ರಿಂದ ೭೦೦೦ ಕೊಡಗರ ಸಂಖ್ಯೆ ೧೮೩೭ ರ ತನಕ ಹೆಚ್ಚಾಗಲೇ ಇಲ್ಲ. ಮುಂದಿನ ೨೦ ವರ್ಷಗಳಲ್ಲಿ ಹೆಚ್ಚಾಗಲು ಕಾರಣವೇನು? ೧೮೭೦ರಲ್ಲಿ ಗೌಡರು ಕೊಡಗರನ್ನು ಹೋಲುವುದಾಗಿ ರೆ. ರಿಕ್ತರನು ದಾಖಲಿಸಿದ್ದಾನೆ. ಈಗಲೂ ಕೊಡಗಿನಲ್ಲಿ ಗೌಡರನ್ನು ಮತ್ತು ಕೊಡಗರನ್ನು ಪ್ರತ್ಯೇಕವಾಗಿ ಗುರುತಿಸುವುದು ಕಷ್ಟ. ನಾಲ್ಕು ನಾಡು, ಎಡೆ ನಾಲ್ಕು ಪ್ರದೇಶದಲ್ಲಿರುವವರು ಮಾತ್ರ ನಿಜವಾದ ಕೊಡಗರಾಗಿದ್ದು-ಕಿಗ್ಗಟ್ ನಾಡುನವರು ಶತಮಾನಗಳು ಹಿಂದೆ ವಕ್ಕಲಿಗರಾಗಿದ್ದಿರಬಹುದು.

೧೭೯೨ರಲ್ಲಿ ಮೈಸೂರು ಒಪ್ಪಂದದಲ್ಲಿ ಬಹಳ ಒತ್ತಡ ಹೇರಿ ಕೊಡಗನ್ನು ಸ್ವಾಧೀನಪಡಿಸಿಕೊಂಡ ಬ್ರಿಟಿಷರು, ವೀರ ರಾಜೇಂದ್ರ ಎಂಬ ಹೆಸರಿಟ್ಟು ಒಬ್ಬಾತನ ವಶಕ್ಕೆ ಕೊಡಗನ್ನು ಕೊಟ್ಟರು. ಹೀಗೆ ಕೊಡುವ ಮೊದಲೇ ವೀರರಾಜೇಂದ್ರಪೇಟೆ ಕಟ್ಟಿಸಿದರು. ಆತನಿಗೆ ೧೭೯೫ರಲ್ಲಿ ಅಂದರೆ ಮೂರು ವರ್ಷಗಳ ನಂತರ ನಾಲ್ಕು ನಾಡು ಅರಮನೆ ಕಟ್ಟಿಸಿಕೊಟ್ಟರು. ಜಮ್ಮ ರೈತರು ಮೂವರಲ್ಲಿ ಒಬ್ಬನಂತೆ ರಾಜನ ಸೇವೆಯಲ್ಲಿ ಇರಬೇಕಾಗಿತ್ತು. ಈ ಸೇವೆಗಾಗಿ ಸಾಗು ರೈತರು ಕೊಡುವ ಕಂದಾಯದ ಅರ್ಧದಷ್ಟು ಜಮ್ಮ ರೈತರಿಗೆ ರಿಯಾಯಿತಿ ನೀಡಲಾಗಿತ್ತು.

ಮೂಗ್ಲಿಂಗ್ ಈ ರೀತಿ ದಾಖಲಿಸಿದ್ದಾನೆ:

'ಬಹಳ ಈಚಿನ ದಿನಗಳವರೆಗೂ, ದೊಡ್ಡಸಂಖ್ಯೆಯ ಸಶಸ್ತ್ರ ಜನರನ್ನು ತನ್ನ ಸುತ್ತಲೂ ರಾಜರು ಇಟ್ಟುಕೊಳ್ಳುವುದು ವಾಡಿಕೆಯಾಗಿತ್ತು. ರಾಜನ ಪಾಕ ಶಾಲೆಯಲ್ಲಿ ಪ್ರತಿದಿನವೂ ಸಾವಿರದಷ್ಟು ಕೊಡಗರಿಗೆ ಊಟ ಕೊಡುತ್ತಿದ್ದರು ಎನ್ನಲಾಗಿದೆ."

ರಾಜರ ಕಾಲದಲ್ಲಿ ಅರೆಕಾಲಿಕ ಸೇವೆಯಲ್ಲಿದ್ದ ಜಮ್ಮ ರೈತರನ್ನು ಕೊಡಗರೆಂದು ಗುರುತಿಸಿ ಕೊಂಡಿದ್ದು, ಅವರು ಬ್ರಿಟಿಷರ ಕಡೆ ತಮ್ಮ ನಿಷ್ಠೆಯನ್ನು ಬದಲಾಯಿಸಿದಾಗ ಕೊಡಗರ ಸಂಖ್ಯೆ ಕಡಿಮೆ ಇದ್ದಿತು. ಇದನ್ನು ಸರಿಪಡಿಸುವುದಕ್ಕೆ ಬ್ರಿಟಿಷರು ಆದ್ಯತೆ ನೀಡಿದರು. ಅದಕ್ಕಾಗಿ ಕೊಡವರಿಗೆ ಕೊಡಲ್ಪಡುವ ಸವಲತ್ತುಗಳ ಆಮಿಷದ ಮೂಲಕ ಗೌಡರು ಪ್ರಭಾವಿತರಾಗಿ ಕೊಡವ ಜನಾಂಗದೊಳಗೆ ಸೇರಿಕೊಳ್ಳುವುದರಲ್ಲಿ ಆಸಕ್ತರಾಗತೊಡಗಿದರು. ಉತ್ತರ ಕೊಡಗಿನಲ್ಲಿಯ ವಕ್ಕಲಿಗರಲ್ಲಿ ಕೊಡವರಾದವರು ಇವರ ಸುತ್ತಲಿನ ಒಕ್ಕಲಿಗರೊಂದಿಗೆ ವಿವಾಹ ಸಂಬಂಧ ಇಂದಿಗೂ ಮುಂದುವರಿಸಿದ್ದಾರೆ.

ವಸಾಹತುಶಾಹಿ ಆಳ್ವಿಕೆಯ ಸಂದರ್ಭ ಕೊಡವ ಜನಾಂಗಕ್ಕೆ ಸೇರಿಸಲ್ಪಟ್ಟವರಲ್ಲಿ ವರ್ಗೀಕರಣಗಳಿವೆ:

ಸಣ್ಣ ಕೊಡವ, ಮಲ್ಲಿ ಕೊಡವ, ಜಮ್ಮ ಕೊಡವ ಅಥವಾ ಬಡ್ಡು ಕೊಡವ ಎಂದು ಕರೆಯಲ್ಪಡುತ್ತಿರುವುದು. ಅಲ್ಲದೇ ಬ್ರಿಟಿಷರೊಂದಿಗೆ ಒಡನಾಟದಲ್ಲಿದ್ದ ಅತೀ ಚಿಕ್ಕ ಗುಂಪನ್ನು 'ರಾಯಲ್ಸ್' ಎಂದು ಕರೆಯುತ್ತಾರೆ. ಶ್ರೀಮಂತ, ಮಧ್ಯಮ ದರ್ಜೆಯವರೊಳಗೆ ಎಷ್ಟನೆ ಶತಮಾನಗಳ ನಂತರವೂ ಪ್ರತಿಯೊಂದು ಮನೆತನಗಳ ಮೇಲಿನ ಪೂರ್ವಗ್ರಹ ಹಾಗೆಯೇ ಉಳಿದಿದೆ.

ಅಮರ ಸುಳ್ಯದ ೫೮೦ ಚದರ ಮೈಲು ವಿಸ್ತೀರ್ಣದ ಪುತ್ತೂರು, ನೆಟ್ಟಣ, ಅಡೂರು, ಅಮರ ಸುಳ್ಯ, ಪಂಜ, ಬೆಳ್ಳಾರೆ, ಏನೆಕಲ್ಲು, ದೇವರಹಳ್ಳಿಗಳೆಂಬ ಎಂಟು ಮಾಗಣೆಗಳನ್ನು ಕೊಡಗಿನಿಂದ ಬೇರ್ಪಡಿಸಬೇಕಾಯಿತು. ಈ ಪ್ರದೇಶದಲ್ಲಿ ಗೌಡರ ಸಂಖ್ಯೆ ಇಂದಿಗೂ ಅತಿ ಹೆಚ್ಚು.

'ಕಿಗ್ಗಟ್‌ನಾಡಿನ ಕೊಡಗರು ಸ್ವಲ್ಪ ಮಟ್ಟಿಗೆ ಬಡಗ ಕನ್ನಡಿಗರ ಸಂಪ್ರದಾಯವನ್ನು ಒಪ್ಪಿಕೊಂಡಿದ್ದಾರೆ. ನೂತನ ಜೋಡಿ ಮೊದಲು ವಧುವಿನ ಮನೆಯಲ್ಲಿ ಆಹ್ವಾನಿತ ನೆಂಟರು, ಬಂಧುಗಳು ಅವರನ್ನು ಅಭಿನಂದಿಸುತ್ತಾರೆ. ವರನ ಮನೆಯಲ್ಲಿಯೂ, ಇದರ ಪುನರಾವರ್ತಿ ನಡೆಯುತ್ತದೆ. ಸೇರಿದ ಕೂಟ ಮಾತ್ರ ಬದಲಾಗಿರುತ್ತದೆ. ಆದರೆ ನಿಜವಾದ ಕೊಡಗು ಪದ್ಧತಿ ಕಟ್ಟುನಿಟ್ಟಿನಿಂದ ನಡೆಯುವುದು ಕೂರ್ಗ್‌ಪ್ರೊಪೆಸರ್ (ಮೂಲ ಕೊಡಗು) ಅಥವಾ ಮೆಂದಲ್‌ನಾಡು ಉತ್ತರಭಾಗ ಮೇಲಿನ ಪ್ರದೇಶದಲ್ಲಿದ್ದು ಕಿಗ್ಗಟ್‌ನಾಡು ಭೌಗೋಳಿಕವಾಗಿ ಮಾತ್ರವೇ ಅಲ್ಲ, ಹತ್ತು ಹಲವು ಕಾರಣಗಳಿಂದಾಗಿ ಮೆಂದಲ್‌ನಾಡಿಗಿಂತ ಕೆಳಗಿದೆ.'

೧೮೦೪ರಲ್ಲಿ ಅಮರ ಸುಳ್ಯ ಮತ್ತು ಏಳು ಸಾವಿರ ಸೀಮೆ (ಈಗಿನ ಸೋಮವಾರಪೇಟೆ ತಾಲೂಕು) ಕೊಡಗಿಗೆ ಜೋಡಿಸಲ್ಪಟ್ಟಿತು. ಇದರಲ್ಲಿ ಕೊಡಗರು ಇರಲಿಲ್ಲ. ಮೂಗ್ಲಿಂಗ್ ಹೇಳುವಂತೆ ಇಪ್ಪತ್ತು ವರ್ಷಗಳಲ್ಲಿ ಕೊಡಗರ ಸಂಖ್ಯೆ ಐದು ಪಟ್ಟು, ಹೇಗೆ ಏರಿತು ಎಂದು ವಿಶ್ಲೇಷಿಸಬೇಕಾಗಿದೆ. ರೆ. ರಿಕ್ತರನ ಪ್ರಕಾರ ಕೊಡಗರ ಬಗ್ಗೆ ಹೀಗೆ ಹೇಳಿದ್ದಾನೆ:

'ಪಾಡಿ ನಾಲ್ಕು ನಾಡಿನಲ್ಲಿ ಮಲೆಯಾಳಿ ಮೂಲವು ವಿಶೇಷವಾಗಿ ಕಾಣಿಸುತ್ತದೆ. ಹಾಗೆ ತಾವು ನಾಡು, ಬೇಂಗ ನಾಡು ಮತ್ತು ಸೂರ್ಲಭಿ ಮತ್‌ನಾಡುಗಳಲ್ಲಿ ತುಳು ಗೌಡರ ಮತ್ತು ಬಂಟರ ಪ್ರಭಾವ ಅನುಭವಕ್ಕೆ ಬರುತ್ತದೆ. ಕೊಡಗರು ಮಿಶ್ರ ಜನಾಂಗ ಎನ್ನುವುದಕ್ಕೆ ಹೆಚ್ಚಿನ ಆಧಾರ ಬೇಕೆನ್ನುವುದಾದರೆ, ಅದರ ಮುಖ ಲಕ್ಷಣದ ವ್ಯತ್ಯಾಸ ಕಾಕೇಸಿಯನ್ ಮತ್ತು ಮಂಗೋಲಿಯನರ ನಡುವೆ ಇರುವಷ್ಟು, ಹಾಗೂ ಮೈಬಣ್ಣ ಬೆಳ್ಳಗೆ ಅಥವಾ ಕಪ್ಪಗೆ'.

ಬೇರೆ ಬೇರೆ ಜಾತಿ, ಜನಾಂಗ, ಪಂಗಡಗಳಿಂದ ಕೊಡಗರನ್ನಾಗಿ ೧೯ನೇ ಮತ್ತು ೨೦ನೇ ಶತಮಾನಗಳಲ್ಲಿ ಸ್ವೀಕರಿಸಿದ ಉದಾಹರಣೆಗಳಿವೆ. ರೇ. ರಿಕ್ತರ್ ಪ್ರಕಾರ.

ಕೊಡಗು ಜನಾಂಗಕ್ಕೆ ಅಪರಿಚಿತರನ್ನು ಆಹ್ವಾನಿಸಿ ಸೇರಿಸಿ ಕೊಳ್ಳುವುದು ಈಗಿನ ತಲೆಮಾರಿನ ಜನರು ನೆನಪಿಸಿಕೊಳ್ಳುತ್ತಾರೆ. ಕಿಗ್ಗಟ್ ನಾಡಿನಲ್ಲಿ ಆರು ಕುಟುಂಬಗಳನ್ನು ಹತ್ತು ವರ್ಷಗಳ ಹಿಂದೆ ಮುಖ್ಯ ಶಿರಸ್ತೇದಾರ ನಂಜಪ್ಪನು ಕೊಡಗರಾಗಿ ಸ್ವೀಕರಿಸಿದ್ದು ಆತನ ಮರಣನಂತರ, ಉಳಿದ ಕೊಡಗು ಜನರು ತಮ್ಮ ಜಾತಿಯಿಂದ ಅವರನ್ನು ಹೊರಹಾಕಿದರು. ಇದರ ತೀರ್ಮಾನವು ಬಾಕಿ ಇದ್ದರೂ ಪ್ರಾಯಶಃ ಇದು ಕೇವಲ ಸಮಯದ ಪ್ರಶ್ನೆ ಎನ್ನಬಹುದಾಗಿದೆ ಹೊರತು, ಕೊಡಗರ ಹೊಂದಾಣಿಕೆ ಇಲ್ಲದ ಸುಪ್ರಸಿದ್ಧ ವ್ಯವಸ್ಥೆಯಲ್ಲಿ, ಸಮಾನ ಮೂಲದ ಬುಡಕಟ್ಟಿನವರನ್ನು ಒಂದು

**ದತ್ತು ಮಕ್ಕಳಿಗೆ ಬೇಕಾದ ಸವಲತ್ತುಗಳನ್ನು ನೀಡಿ ಸತ್ಪ್ರಜೆಗಳಾಗಿ ಮಾಡುವುದೆ ಮಾಜಿ ಸೈನಿಕರ ಸಂಘದ ಉದ್ದೇಶ.**

ಜನಾಂಗ್ಗವನ್ನಾಗಿ ಮೈಗೂಡಿಸಿಕೊಳ್ಳುವುದು ರೂಢಿಯಾಗಿರುತ್ತದೆ.

ಕಾವೇರಿ ಹಬ್ಬದೂಟ ವಿವರಣೆಯ ಕೊನೆಯಲ್ಲಿ ಗೋವಿನ ಕತೆಯ ಪೂರ್ಣ ಸಾರಾಂಶ ಹೇಳಲಾಗಿದೆ. ಓದು ಬರಹ ತಿಳಿದವರ ಮನೆಗಳಲ್ಲಿ ಗೋವಿಪದ ಪುಸ್ತಕವನ್ನು ತೆಗೆದು ಹಾಡುತ್ತಾರೆ ಮತ್ತು ಕುಟುಂಬದ ಇತರ ಸದಸ್ಯರು ಆಲಿಸುತ್ತಾರೆ. ರೆ. ರಿಕ್ತರ್‌ನು ದಾಖಲಿಸಿರುವ ಈ ಅಂಶಗಳಿಂದಾಗಿ ದಕ್ಷಿಣಕೊಡಗಿನ ಕೊಡಗರಲ್ಲಿ ಬಹುತೇಕ ಜನರು ವಕ್ಕಲಿಗರಾಗಿದ್ದು ಕ್ಷಳೆದ ಒಂದೆರಡು ಶತ ಮಾನಗಳಲ್ಲಿ ಕೊಡಗರಾದರೇ? ಎನ್ನುವ ಅನುಮಾನ ಹುಟ್ಟಿಸುತ್ತದೆ.

ಒಡೆದು ಆಳುವ ನೀತಿಗೆ ಹೆಸರಾದ ಬ್ರಿಟಿಷರು ನಮ್ಮ ಗೌಡ ಜನಾಂಗವನ್ನು ಕೊಡಗರಾಗಿ ವಿಭಜಿಸಿದರು. ಕೊಡಗಿನಲ್ಲಿರುವ ಗೌಡರಿಗೂ ಕೊಡಗಿನಲ್ಲಿ ಗುಣ ಸ್ವಭಾವದಲ್ಲಿ, ಆಚಾರ ವಿಚಾರಗಳಲ್ಲಿ ಆಯಾ ಆಕಾರದಲ್ಲಿ ಹೆಚ್ಚೇನು ವ್ಯತ್ಯಾಸವಿಲ್ಲ. ಇವರನ್ನು ಪ್ರತ್ಯೇಕವಾಗಿ ಗುರುತಿಸಲು ಹೊರ ಪ್ರದೇಶದವರಿಗೆ ಯಾಕೆ ಇಲ್ಲಿಯವರಿಗೆ ಸಾಧ್ಯವಾಗುವುದಿಲ್ಲ. ಕೇವಲ ೨೦ ವರ್ಷಗಳಲ್ಲಿ ತಮ್ಮ ಸಂಖ್ಯೆಯನ್ನು ಐದು ಪಾಲು ಹೆಚ್ಚಿಸಿಕೊಂಡ ರಹಸ್ಯವೇ ಇದಕ್ಕೆ ಕಾರಣ.

ಈ ರೀತಿಯಲ್ಲಿ ಅತೀ ದೊಡ್ಡ ಸಂಖ್ಯೆಯಲ್ಲಿದ್ದ ಗೌಡ ಜನಾಂಗದ ಅನೇಕರು ಕೊಡಗರಾದರು. ಉಳಿದ ಗೌಡರು ನೀವು ಕನ್ನಡ ಜಿಲ್ಲೆಯಿಂದ ಬಂದವರೆಂಬ ಪ್ರಚಾರಕ್ಕೆ ತುತ್ತಾದರು. ಹತ್ತುಬಾರಿ ಹೇಳಿದ ಸುಳ್ಳು ಸತ್ಯವೆಂದು ಸ್ವೀಕರಿಸಲ್ಪಡುತ್ತದೆ. ಚರಿತ್ರೆಯ ಯಾವ ಪುಟದಲ್ಲೂ ಯಾವುದೇ ರಾಜ ಗೌಡರನ್ನು ಕನ್ನಡ ಜಿಲ್ಲೆಯಿಂದ ಕರೆಯಿಸಿದ ವಿಚಾರ ಇಲ್ಲ.

೧೯೯೨ರಲ್ಲಿ ಡಾ. ಸೂರ್ಯನಾಥ ಕಾಮತ್ ಮುಖ್ಯ ಸಂಪಾದಕರಾಗಿ ಕರ್ನಾಟಕ ಸರಕಾರ ಕೊಡಗುಜಿಲ್ಲೆಯ ಗ್ಯಾಸೆಟಿಯರ್ ಪ್ರಕಟಿಸಿದೆ. ಅದರ ಪುಟ ಸಂಖ್ಯೆ ೬೬ರಲ್ಲಿಹೀಗಿದೆ: '೧೦ನೇಯ ಶತಮಾನಕ್ಕೆ ಮೊದಲು ಗುಡ್ಡ, ಕೆಂಬಟ್ಟಿಗಳು, ಬೆಟ್ಟಗಳಿಂದಲೂ, ಅಡವಿಗಳಿಂದಲೂ ದುರ್ಗಮವಾದ ಪ್ರದೇಶವಾಗಿದ್ದ ಕೊಡಗು, ಬೆಟ್ಟ ಕುರುಬರು, ಜೇನು ಕುರುಬರು, ಯರವರ್ರು ಮುಂತಾದ ಬುಡಕಟ್ಟು ಜನರಿಂದ ತುಂಬಿದ್ದು ಇದೇ ಕಾಲ ಖಂಡದಲ್ಲಿ ಈಗ ಕೊಡವರು ಕೂರ್ಗ್ಸ್ ಎಂದು ಪರಿಚಿತರಾದ ಜನಾಂಗದವರೂ ಗೌಡ ಜನಾಂಗದವರೂ ಇಲ್ಲಿ ನೆಲೆ ನಿಂತರು ಎಂಬುದಾಗಿ ದಾಖಲಿಸಿದ್ದಾರೆ.'

ಇಂತಹ ಅಮೂಲ್ಯ ದಾಖಲೆಯನ್ನು ಬದಿಗೊತ್ತಿ ೧೬ನೇ ಶತಮಾನದಲ್ಲಿ ವಿಜಯನಗರದಿಂದ ಬಂದವರು ಅಥವಾ ೧೮ನೇ ಶತಮಾನದಲ್ಲಿ ಕನ್ನಡ ಜಿಲ್ಲೆಯಿಂದ ಕರೆಯಿಸಿಕೊಂಡವರೆಂದು ಹೇಳಿಕೊಳ್ಳುವುದು ನಮ್ಮ ಐತಿಹಾಸಿಕ ಮೌಢ್ಯತೆಯನ್ನು ತೋರಿಸಿಕೊಡುತ್ತದೆ.

ಋಷಿ ಮುನಿಗಳ ತಪೋವನವಾಗಿದ್ದ ತಲಕಾವೇರಿಯ ಸುತ್ತಮುತ್ತ ನೆಲೆಸಿದ ನಾಗರಿಕರಲ್ಲಿ ಗೌಡರು ಪ್ರಥಮ ಎನ್ನುವುದಕ್ಕೆ ತಲಕಾವೇರಿ ಮತ್ತು ಭಾಗಮಂಡಲದ ಭಗಂಡೇಶ್ವರ ದೇವಸ್ಥಾನಗಳ ಮುಕ್ತೇಸರಿಕೆ ಗೌಡ ಜನಾಂಗದವರಾದ ಕೋಡಿ ಮತ್ತು ಬಳ್ಳಡ್ಕ ಮನೆಯವರಿಗೆ ಸೇರಿರುವುದೇ ಸಾಕ್ಷಿ.

ಬಹುತೇಕ ಗ್ರಾಮಗಳ ಪಟೇಲಿಕೆ ಹಾಗೂ ಗ್ರಾಮ ದೇವಸ್ಥಾನಗಳ ಮುಕ್ತೇಸರಿಕೆಗಳನ್ನು ಬ್ರಿಟಿಷ್ ಆಡಳಿತದಲ್ಲಿಯೂ ಬದಲಾಯಿಸುವುದು ಸಾಧ್ಯವಾಗಲಿಲ್ಲ. ಆದರೆ ಪಟೇಲರ ಸಂಬಳ ಮತ್ತು ದೇವಸ್ಥಾನಗಳ ತಸ್ತೀಕು ಹಣವನ್ನು ಅತೀ ಕಡಿಮೆಯಾಗಿರಿಸಿ ಕಿರುಕುಳ ಕೊಡುವುದರಲ್ಲಿಯೇ ಬ್ರಿಟಿಷ್ ಸರಕಾರ ತೃಪ್ತಿ ಪಟ್ಟುಕೊಂಡಿತು.

ಗ್ರಾಮಗಳಲ್ಲಿ ಶಾನುಭೋಗರಾಗಿದ್ದ ದೇವಸ್ಥಾನಗಳಲ್ಲಿ ಅರ್ಚಕರಾಗಿದ್ದ ಸ್ಥಾನಿಕ ಬ್ರಾಹ್ಮಣರಿಗೆ ವಸಾಹತುಶಾಹಿ ಆಡಳಿತದಲ್ಲಿ ಅತ್ಯಂತ ಹೀನಸ್ಥಿತಿ ಬಂದೊದಗಿದ್ದನ್ನು ಕಾಣಬಹುದು. ಚಿಕ್ಕವೀರರಾಜನ ದಿವಾನರಲ್ಲಿ ಒಬ್ಬನಾಗಿದ್ದ ಲಕ್ಷ್ಮೀನಾರಣಯ್ಯ ಸೆರೆಮನೆಗೆ ತಳ್ಳಲ್ಪಟ್ಟನು. ಆತನ ಬಂಧು ಬಳಗ ಕರಿನೀರಿನ ಶಿಕ್ಷೆ ಮೊದಲಾದ ಸಂಕಷ್ಟಕ್ಕೆ ಒಳಗಾದರು. ಆತನ ತಮ್ಮ ರಾಮಪ್ಪಯ್ಯ ತನ್ನವರಿಗೆ ಶತ್ರುವಾಗಿ ಸೆರೆ ಹಿಡಿಯಲ್ಪಟ್ಟು ಶಿರಶ್ಛೇಧಕ್ಕೆ ಒಳಗಾದನು.

ಬ್ರಿಟಿಷರ ಪರವಹಿಸಿದ್ದಕ್ಕಾಗಿ ಶತಮಾನಕ್ಕೂ ಹೆಚ್ಚು ಕಾಲ ಸರ್ವ ವಿಧದ ಸಹಾಯ ಸಹಕಾರ ಸೌಕರ್ಯಗಳ ಲಾಭ ಪಡೆದ ಕೊಡವ ಜನಾಂಗ ಇತ್ತೀಚಿನ ದಿನಗಳಲ್ಲಿ ಸರಕಾರದ ಮುಂದೆ ಈ ಕೆಳಗಿನ ಅರ್ಥಹೀನ ಬೇಡಿಕೆಗಳನ್ನು ಇಟ್ಟು ಬೀದಿಗಿಳಿದು ಹೋರಾಟಕ್ಕೆ ತೊಡಗಿದೆ.

೧. ಕೊಡಗಿನ ನೆಲ ಕೊಡವರದೆಂದು ಘೋಷಿಸಬೇಕು.

೨. ಕೊಡವ ಭಾಷೆಯನ್ನು ಎಂಟನೆ ಪರಿಚ್ಛೇಧಕ್ಕೆ ಸೇರ್ಪಡೆಗೊಳಿಸಬೇಕು.

೩. ಕೊಡವರಿಗೆ ಲೋಕಸಭೆ, ರಾಜ್ಯಸಭೆಗಳಲ್ಲಿ ಒಂದೊಂದು ಸ್ಥಾನ ಕಾಯ್ದಿರಿಸಬೇಕು.

೪. ಕೊಡವರು ಅಲ್ಪ ಸಂಖ್ಯಾತ, ಪರಿಶಿಷ್ಟ ವರ್ಗದವರೆಂದು ಗುರುತಿಸಬೇಕು.

೫. ಕೊಡವ ಭಾಷೆಯನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು.

೬. ಕೊಡವರಿಗೆ ಸಿಖ್ಖರಂತೆ ವಿಶೇಷ ಜನಾಂಗವೆಂಬ ಮಾನ್ಯತೆ ನೀಡಬೇಕು.

೭. ಜಮ್ಮ ಭೂಮಿಯ ಒಡೆತನ ಸಂಪೂರ್ಣ ಕೊಡವರದಾಗಬೇಕು.

೮. ಅವರವರ ಭೂಮಿಯಲ್ಲಿರುವ ಮರದ ಹಕ್ಕು ಕೊಡಬೇಕು.

೯. ಕೊಡವರ ಐನ್ ಮನೆಗಳನ್ನು ಸಂರಕ್ಷಿಸಬೇಕು.

೧೦. ಕೊಡವರಿಗೆ ವಿಶ್ವವ್ಯಾಪಿ ಸಂವಿಧಾನಾತ್ಮಕ ರಕ್ಷಣೆ ಸಿಗಬೇಕು.

೧೧. ಕೊಡವ ಭಾಷೆ ಮತ್ತು ಸಂಸ್ಕೃತಿ ಮೇಲಿನ ದೌರ್ಜನ್ಯಕ್ಕೆ ತಡೆ ನೀಡಬೇಕು.

೧೨. ಕಾಫಿಗೆ ಬೆಂಬಲ ಬೆಲೆ ನೀಡಬೇಕು.

ಬ್ರಿಟಿಷರ ವಿರೋಧಗಳಿಸಿದವರಿಗೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆದರೂ ಸಂಘಟಿತರಾಗಿ ತಮ್ಮ ಬೇಕು ಬೇಡಿಕೆಗಳನ್ನು ಕೇಳಿಕೊಳ್ಳುವ ಸಾಮರ್ಥ್ಯ ಇಂದಿಗೂ ಇಲ್ಲದಿರುವುದು ಅತ್ಯಂತ ವಿಷಾದನೀಯ ವಿಚಾರ.

*ಉಲ್ಲೇಖಗಳು :*

೧. ಕರ್ನಾಟಕ ಸರ್ಕಾರ (ಸಂಪುಟ ೫)- ಪ್ರೊ. ಬಿ. ಶೇಕ್ ಆಲಿ ಪುಟ ೬೬

೨. ಅಮರ ಸುಳ್ಯದ ಸ್ವಾತಂತ್ರ್ಯ ಸಮರ - ಎನ್. ಎಸ್. ದೇವಿಪ್ರಸಾದ್ ಪುಟ ೦೭

೩. ಕರ್ನಾಟಕ ಚರಿತ್ರೆ-ಪ್ರೊ ಬಿ. ಶೇಕಕ್ ಆಲಿ ಪುಟ ೩೫೨

೪. ಕರ್ನಾಟಕ ಚರಿತ್ರೆ-ಪ್ರೊ. ಬಿ. ಶೇಕ್ ಆಲಿ ಪುಟ ೩೫೩

೫. ಕರ್ನಾಟಕ ಚರಿತ್ರೆ-ಪ್ರೊ ಬಿ. ಶೇಕ್ ಆಲಿ ಪುಟ ೩೫೩

೬. ಕರ್ನಾಟಕ ಚರಿತ್ರೆ - ಪ್ರೊ.ಬಿ. ಶೇಕ್ ಆಲಿ ಪುಟ ೩೫೩

೭. Rajah founded the town Virarajendrapet in 1792. In April 1795 Viraraja took up his residence in the new palace built at Nalknad.

*ಗಜೆಟಿಯರ್ ಆಫ್ ಕೂರ್ಗ್-ರೆ. ಜಿ. ರಿಕ್ತರ್ ಪುಟ ೨೫೯*

೮. ಅಮರ ಸುಳ್ಯ ಸ್ವಾತಂತ್ರ್ಯ ಸಮರ- ಎನ್. ಎಸ್.ದೇವಿಪ್ರಸಾದ್ ಪುಟ ೭೪-82

೯. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ -ತಿ.ತಾ. ಶರ್ಮ ಪುಟ ೭

೧೦. ಐಗೂರು ಇತಿಹಾಸ ನಿಡುಗರೆ ಲಕ್ಷ್ಮೀನರಸಿಂಹ ಶಾಸ್ತ್ರಿ ಪುಟ ೭೭-೯೦

೧೧. ಲಿಂಗರಾಜನ ಹುಕುಂನಾಮೆ -ಡಾ. ಪುರುಷೋತ್ತಮ ಬಿಳಿಮಲೆ ಪುಟ ೪-೯

೧೨. ಕೊಡಗಿನ ಇತಿಹಾಸ-ಡಿ. ಎನ್. ಕೃಷ್ಣಯ್ಯ ಪುಟ ೪೬೧-೪೭೭

೧೩. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ- ತಿ. ತಾ. ಶರ್ಮ ಪುಟ ೨೬, ೩೭,೩೮

೧೪. ಕೊಡಗಿನ ಇತಿಹಾಸ -ಡಿ. ಎನ್. ಕೃಷ್ಣಯ್ಯ ಪುಟ ೫೨೬-೨೯

೧೫. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ -ತಿ.ತಾ. ಶರ್ಮ ಪುಟ ೨೬, ೩೭, ೩೮

೧೬. ಲೆವಿನನ ವರದಿ-ಪಾರಾ ೩

೧೭. ಲೆವಿನನ ವರದಿ-ಪಾರಾ ೨೭

೧೮. ಲೆವಿನನ ವರದಿ-ಪಾರಾ ೩೦

೧೯. ಲೆವಿನನ ವರದಿ-ಪಾರಾ ೬,೧೩

೨೦. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪುಟ ೩೯

೨೧. ಗಜೆಟಿಯರ್ ಆಫ್ ಕೂರ್ಗ್ ರೆ. ಜಿ. ರಿಕ್ತರ್ ಪುಟ ೩೬೩

೨೨. ಜುಡಿಶಿಯರ್ ಇಂಡೆಕ್ಸ್ ಪುಟ ೩೦, ೩೨, ೩೫, ೪೯, ೫೦, ೫೨

೨೩. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ -ತಿ.ತಾ. ಶರ್ಮ ಪುಟ ೪೧

೨೪. ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ -ತಿ. ತಾ. ಶರ್ಮ ಪುಟ ೨೮, ೪೧, ೪೨

೨೫. ***This so called Coorg Rebellion was properly speaking a rise of gowdas a tribe on the Western Slope of the Ghats who resemble the Coorg's in many of their habits.***

End. - N.S. Deviprasad, Sampaje.

## ಯಮ ಸದನಲಿ ನಿರ್ಧಾರ ಆಗುಟು; ಇನ್ನ್ ಮ್ಯಾಲೆ ಸ್ವರ್ಗ ಸಲ್ಲಿ ಸುದು ಅರೆಗನ್ನಡ ಭಾಷೆಲಿ ಆಗಲಿ.

ಯಮ ಲೋಕಲಿ ಮುಂಗಾರ್ ಅಧಿವೇಶನ ನಡೆಕಾಕನ ಸದಸ್ಯರ್ ಭಾರೀ ಗದ್ದಲ ನಡ್ಸಿದೋಗಡ. ವಿಷಯ ಏನ್ತ್ನೇಳ್ರೆ, ಭೂಲೋಕಲಿ ಅವರವರ ಮಾತೃಭಾಷೆಗೆ ಸಲ್ಲುವ ಗೌರವ ಯಮಲೋಕಲೂ ಸಲ್ಲಕುತ್ತೇಳಿ. ಆದರೆ ಅಲ್ಲಿದ್ದ ಗೌಡ ಜನಾಂದವುಕೆ ಭಾರೀ ಅವಮಾನ ಆತ್‌ಗಡ. ಯಾಕೆತ್ತೇಳ್ರೆ, ಅವರ ಮಾತೃಭಾಷೆ ಅರೆಗನ್ನಡ ಆದ್ರೂ, ಸ್ವರ್ಗ ಸಲ್ಲಿಸಿ ಕಾಕನ, ಕನ್ನಡಲಿ ಸಲ್ಲಿಸುತ್ತಿದ್ದೊ. ಹಂಗಾಗಿ ಇನ್ನ್ ಮುಂದೆ ಸ್ವರ್ಗ ಸಲ್ಲಿಸಿ ಕನಾದರೂ ಅರೆಗನ್ನಡ ಭಾಷೆಲಿ ಸಲ್ಲ್‌ಸಲಿತ್ತೇಳಿ, ಈ ಸಂಸ್ಕೃತಿ ಬರಹನ ನಿಮ್ಮ ಮುಂದೆ ಇಡ್ತಾ ಒಳೊ. ಅಂದರೆ ಬದ್ಕಿ ಇರೋಕಾಕನ ಅವಂಗೆ ಭಾಷೆ ಸಂಸ್ಕೃತಿ ಯಾವ್ದು ಬೇಡವಾಗಿತ್ತ್. ಸತ್ತನಂತರ ಆದರ್ ಇರ್ಲಿ‌ತ ಅಂವನ ಕೊನೆ ಆಸೆ. ಅದಿಕ್ಕೆ ಅರೆಗನ್ನಡಲಿ ಸುರ್ ಮಾಡ್ದ್.

ಬ್ರಹ್ಮಲಿಪಿಯಂಗೆ ಅವರ ಮಾತಪಿತ್ಯರ ಸುಪುತ್ರ/ ಸುಪುತ್ರಿಯಾಗಿ ಹುಟ್ಟಿ, ತನ್ನದೇ ಆದ ಆಟ, ಪಾಠಗಳ ನಡವಳಿಕೆಂದ, ಎಲ್ಲರ ಕಣ್ಮಣಿಯಾಗಿ ಬೆಳ್ದ್, ಶಾಲೆ ಸೇರಿ ವಿದ್ಯಾಭ್ಯಾಸ ಪಡ್ದೆರಿ. ಮೊದುವೆ ವಯಸ್ಸಿಗೆ ಬಾಕನ ಪತಿ/ಸತಿನ ಮೊದುವೆ ಯಾದರಿ, (ಇಲ್ಲಿ ಅವನ/ಅವಳ ಪರಿಚಯ ಹೇಳೊಕು) ಮಕ್ಕಳನ, ಮೊಮ್ಮಕ್ಕಳನ ಪಡ್ದರಿ. ಮನೆಗೆ ಬಂದೊವುಕೆ ಹೊಟ್ಟೆಗೆ ಅನ್ನ ಕೊಟ್ಟರಿ, ತಲೆ ನೋಡಿ ಎಣ್ಣೆ ಕೊಟ್ಟರಿ, ಮೈನೋಡಿ ಬಟ್ಟೆ ಕೊಟ್ಟರಿ, ಎಲ್ಲ ರೀತಿಲೂ ದಾನ, ಧರ್ಮಗಳ್ನ ಮಾಡಿ ಕೀರ್ತಿ ಪಡ್ದ್ ಬಾಳಿ ಬದ್‌ಕಿದರಿ. ಆದರೆ ಇಂದಿಗೆ, ಚಿಗ್‌ರೆಲೆ ಕಾಯಿ ಎಲೆಯಾಕು, ಕಾಯಿ ಎಲೆ ಹಣ್ಣೆಲೆಯಾಕು. ಹಣ್ಣೆಲೆ ಉದುರೇ ಉದುರಕುತ್ತೇಳುವ ಸೃಷ್ಟಿ ನಿಯಮ ದಂಗೆ, ಮಕ್ಕಳ್‌ನ, ನೆಂಟ್ರಗಳ್ನ, ಅಷ್ಟೈಶ್ವರ್ಯನ ಬುಟ್ಟ್, ಜೀವನೇ ಬುಟ್ಟ್, ನಾಡ್‌ಬುಟ್ಟ್ ಕಾಡ್ ಸೇರಿ, ನಿಮ್ಮ ಆತ್ಮ, ಪರ ಮಾತ್ಮನಲ್ಲಿ ಸೇರಿಹೋವುಟು.

ನೀವ್ ಪರಮಾತ್ಮನ ಸೇರ್‌ದ ತಕ್ಷಣ ಎಲ್ಲವುಕೂ ಗೊತ್ತಾಗಲಿತ್ತೇಳಿಯೂ, ಆತ್ಮ ದೇವ್ರುಲಿ ಐಕ್ಯವಾಗಿಟ್ಟುತ್ತೇಳುವ ಸೂಚನೆಗಾಗಿಯೂ, ಜೋಡ್ ಗುಂಡ್‌ನ ಆಕಾಶಕ್ಕೆ ಹಾರ್ಸಿ, ನೆರೆಕೆರೆವು ಬಂದ್ ಬಾಯಿಗೆ ತೊಳ್ಸಿ ನೀರ್ ಕೊಟ್ಟೊ. ಊರೋವು ಸುಡಿಕೆ ಬೇಕಪ್ಪ್ ಸೌದೆ ಮಾಡ್ಲೊ. ಮತ್ತೆ ಶಾಸ್ತ್ರನಂಗೆ ಮೃತ ದೇಹನ ಮೀಸಿ, ಮಡಿಬಟ್ಟೆ ಉಡ್ಸಿ ಬಿಳಿಬಟ್ಟೆ ಹೊದ್ಸಿ, ಚಟ್ಟದ ಮ್ಯಾಲೆ ಇಟ್ಟ್ ತಲೆಕಡೆಂದ ಮನೆವ್, ಕಾಲ್‌ಕಡೆಂದ ಊರೋವು ಹೊತ್ತ್‌ಕಂಡ್ಹೋಗಿ ತೆಂಕು ಬಡಗು ಆಗಿ ಕಾಟದ ಮ್ಯಾಲೆ ಇಟ್ಟ್, ತಲೆಕಡೆಂದ ಮನೆವ್, ಕಾಲ್ ಕಡೆಂದ ಊರೋವು ಬೆಂಕಿಕೊಟ್ಟ್ ಉರಿಸಿದೊ. ಅಂದ್‌ಂದ ನಿಮ್ಮ ಪವಿತ್ರ ದೇಹ ಭೂಮಿಗೆ ಗೊಬ್ಬರಾಗಿ, ಆಕಾಶಕ್ಕೆ ಹೋಗೆಯಾಗಿ ಪರಿವರ್ತನೆಯಾತ್. ಇಂದಿಗೆ ನೀವ್ ಇಹಲೋಕ ಬುಟ್ಟ್ 3/5/11 ನೆಯ ದಿನ ಆವುಟು. ನಾವೆಲ್ಲವೂ ನಿಮ್ಮ ಆತ್ಮಕ್ಕೆ ಶಾಂತಿಕೋರಿಕೆ ಇಲ್ಲಿ ಬಂದ್ ಸೇರ್ಯೋಳೊ.

17 ನೇ ಪುಟಕ್ಕೆ

*ಬಾಲ ಸಂಗಾತಿ ವಿಭಾಗ :* ಜ್ಞಾನ -13

**ಶಾಲೆಲಿ ಹೇಳಿಕೊಟ್ಟದ್ದೆಲ್ಲಾ ನಿಜ ಅಲ್ಲ**

## ನಾರಾಯಣ ಸೂಕ್ತಮ್:

ನಾರಾಯಣ ಸೂಕ್ತಗ ಋಗ್ವೇದದ ಮಂತ್ರ ಭಾಗ ಆಗ್ಯುಟು. ಇದರ್ಲಿ ಮಾನವ ಶರೀರದ ಆಂತರಿಕ ರಚನೆನ ಕುರ್‌ತ್ ಶ್ಲೋಕಗ ಉಟ್ಟು. ದೇಹಲಿ ರಕ್ತದ ಕ್ರಮಬದ್ಧ ಸಂಚಾರ, ಈ ಸಂಚಾರನ ನಿಯಂತ್ರಿಸುವ ಹೃದಯ, ಇವುಗಳ್ನ ಒಳಗೊಂಡ ವಿಚಾರಗ ಒಳೊ. ಭಾರತೀಯರ್‌ಗೆ ರಕ್ತ ಸಂಚಲನೆ ಬಗ್ಗೆ ಯುರೋಪ್ನ ದೇಶಗಳಲ್ಲಿನ ಸಂಶೋಧನೆಗಳಿಗಿಂತ ಬಾಳ ಶತಮಾನಗಳ ಹಿಂದೆನೇ ಗೊತ್ತಿತ್ತ್‌ತ ಇದರ್ಂದ ಗೊತ್ತಾದೆ.

ಹೃದಯ ತಲೆಕೆಳಗಾಗಿ ಇರುವ ತಾವರೆಯ ಮೊಗ್ಗ್‌ನಂಗೆ ಕುತ್ತಿಗೆಂದ ಕೆಳಗೆ ಹೊಕ್ಕಳಿಂದ ಆರು ಅಂಗುಲ ಮೇಲೆ ಮಧ್ಯ ರೇಖೆಂದ ಎಡಕ್ಕೆ ಸ್ಥಿರ ಆಗುಟ್ಟುತ ಇಲ್ಲಿ ವಿವರಿಸ್ಯೊಳೊ. ಇಷ್ಟೇ ಅಲ್ಲದೆ, ಹೃದಯಕ್ಕೆ ಒಳರಚನೆ ಇರ್ದು, ಕವಾಟಗ, ಶುದ್ಧ ಮತ್ತೆ ಮಲಿನ ರಕ್ತಗಳ್ನ ಒಯ್ಯುವ ನಾಡಿಗ, ಹೃದಯದ ಸ್ನಾಯುಗಳ ನಿರಂತರ ವಿಕಸನ ಮತ್ತೆ ಸಂಕುಚನ ಇವು ಎಲ್ಲಾ ಇಲ್ಲಿ ವಿವರಿಸ್ಯೊಳೊ.

***ಆತ್ರೇಯಮ್ :*** ಆಯುರ್ವೇದಲಿ ಎರಡ್ ಭಾಗಗ ಉಟ್ಟು. ಒಂದು ಭಾಗ ರೋಗ ಲಕ್ಷಣ ಶಾಸ್ತ್ರ ಆದರೆ ಇನ್ನೊಂದು ಭಾಗ ಶಸ್ತ್ರ ಚಿಕಿತ್ಸೆಗೆ ಸೇರಿಟ್ಟು. ಅತ್ರೇಯಮ್ ತ್ತೇಳ್ವ ಶಸ್ತ್ರ ಚಿಕಿತ್ಸಾ ಶಾಸ್ತ್ರ. ಇದರ್ಲಿ ಶಸ್ತ್ರ ಚಿಕಿತ್ಸೆಗೆ ಬೇಕಾದ ಉಪಕರಣಗಳ ಬಗ್ಗೆ ಮತ್ತೆ ಅವುಗಳ್ನ ಉಪಯೋಗಿಸುವ ಬಗ್ಗೆ ಮತ್ತೆ ವಿವಿಧ ರೀತಿಯ ಶಸ್ತ್ರ ಚಿಕಿತ್ಸೆ ಬಗ್ಗೆ ಈ ಶಾಸ್ತ್ರಲಿ ವಿವರಣೆಗ ಉಟ್ಟು.

***ಚಿತ್ರ ಕರ್ಮ :*** ಇದೊಂದು ಚಿತ್ರ ಕಲಾ ಶಾಸ್ತ್ರತ ಇದರ ಹೆಸ್ರ್ ನೋಡ್‌ಕಾಕ್‌ನ ಗೊತ್ತಾದೆ. ಇದರ ಕರ್ತಾ ಭಿಮ ಋಷಿ. ಇದರ್ಲಿ ಚಿತ್ರಕಲೆ ಮತ್ತೆ ಬಣ್ಣಗಳ ಮಿಶ್ರಣಗಳ ಬಗ್ಗೆ ವಿವರವಾದ ಮಾಹಿತಿ ಉಟ್ಟು. ಇದಲ್ಲದೆ ಭಾವ ಚಿತ್ರಗಳ್ನ ರಚಿಸುವ ಬಗ್ಗೆ ವಿಶೇಷವಾದ ಅಧ್ಯಯನ ಭಾಗಗ ಒಳೊ. ನೈಸರ್ಗಿಕ ಬಣ್ಣಗಳ್‌ಂದ ಕೂಡ್ಲ ಸುಂದರ ಮನಮೋಹಕ ಚಿತ್ರಗಳ್ನ ರಚಿಸಿಕೆ ಮಾರ್ಗದರ್ಶಿ ಆಗ್ಯುಟ್ಟು ಈ ಶಾಸ್ತ್ರ.

*ಮುಂದ್‌ವರ್ದದೆ.*

*ಬಾಲ ಸಂಗಾತಿ ವಿಭಾಗ :* ಕಥೆ -13

## ದಡ್ಡ ಶಿಖಾಮಣಿ

ಒಂದು ಗ್ರಾಮಲಿ ಒಂದು ಶಾಲೆ ಇತ್ತ್. ಅಲ್ಲಿ ಭೀಮ ಮತ್ತೆರಾಮತ ಇಬ್ಬರು ವಿದ್ಯೆ ಕಲಿತಿದ್ದೊ. ಭೀಮ ಹೆಸರಿಗೆ ತಕ್ಕಂಗೆ ದಪ್ಪ ಎತ್ತರ ಆಗಿತ್ತ್. ಈ ಭೀಮಕಾಯದವಂಗೆ ಬುದ್ಧಿ ಸ್ವಲ್ಪ ಮಂದ ಎಲ್ಲವೂ ಅವನ ದಡ್ಡ ಶಿಖಾಮಣಿತ ಕರೆತ್ತಿದ್ದೊ. ಆದರೆ ರಾಮ ಹಂಗಲ್ಲ ಬಾಳ ಸೂಕ್ಷ್ಮ. ವಿಷಯಗಳ್ನ ಬಾಳ ಬೇಗ ಅರ್ಥ ಮಾಡಿಕಣ್‌ತ್ತಿದ್ದ. ಒಂದು ದಿನ ಗುರುಗ ಸತ್ಯನೇ ಹೇಳೊಕು ಸುಳ್ಳು ಹೇಳಿಕ್ಕಾಗದ್‌ತ ಹೇಳಿ ಕೊಟ್ಟೊ. ಆದರೆ ಒಬ್ಬರ ಪ್ರಾಣ ಹೋಗುವಂತ ಸಂದರ್ಭ ಬಾಕನ ಸುಳ್ಳು ಹೇಳ್ರೆ ಅದ್ ಸುಳ್ಳಾದುಲೆತ ಅದ್‌ಕೆ ಸಂಬಂಧ ಪಟ್ಟಂಗೆ ಒಂದು ಕತೆ ಹೇಳ್ಯೊ.

ಬಾಳ ಹಿಂದೆ ಒಬ್ಬ ಋಷಿ ತಪಸ್ಸು ಮಾಡ್‌ತಿರ್‌ಕಾಕನ ಒಬ್ಬ ಸಾಧು ಮನುಷ್ಯ ಓಡಿಕಂಡ್ ಬಂದ್ ಅವನ ಬಲಗಡೆ ದಾರಿಲಿ ಹೋದೆ. ಸ್ವಲ್ಪ ಹೊತ್ತಿಗೆ ಅವನ ಹುಡ್ಕಿಕಂಡ್ ಇಬ್ಬರ್ ದಾಂಡಿಗರ್ ಬಂದ್ ಋಷಿನ ಕೇಳ್‌ಕನ ಋಷಿ ಸತ್ಯ ಹೇಳಿ ಬಲಗಡೆ ದಾರಿನ ತೋರ್ಸಿದೆ. ದಾಂಡಿಗರ್ ಆ ದಾರಿಗಾಗಿ ಹೋಗಿ ಸಾಧು ಮನುಷ್ಯನ ಕೊಂದು ಹಾಕುವೆ. ಋಷಿ ಸುಳ್ಳು ಹೇಳಿದ್ದರೆ ಪಾಪದ ಮನುಷ್ಯ ಉಳಿತಿತ್ತ್.

ಒಂದು ದಿನ ರಾಮ ಊರ್‌ನ ಹೊರಗೆ ಮೂರು ದಾರಿ ಸೇರುವಲ್ಲಿ ಕಲ್ಲ್ ಬೆಂಚ್‌ಲಿ ಕುದ್ದ್‌ಕಂಡಿದ್ದದೆ. ಆಗ ಅಲ್ಲಿಗೆ ಭೀಮ ಬಂದದೆ, ಅಂವ ರಾಮನ ಕೇಳ್ದೆ ಎಲ್ಲವೂ ನನ್ನ ದಡ್ಡ ಶಿಖಾಮಣಿಂತ ಯಾಕೆ ಕರ್ದವೆ. ನಾನು ನೀನ್ ಒಟ್ಟಿಗೆ ವಿದ್ಯೆ ಕಲಿತೊಳೊ ಅಲಾತ. ಅಷ್ಟೊತ್ತಿಗೆ ಅಲ್ಲಿಗೆ ಒಬ್ಬ ಕಳ್ಳ ಮನುಷ್ಯ ಓಡಿ ಬಂದ್ ಎಡ ಬದಿ ರಸ್ತೆಲಿ ಓಡಿ ಹೋದೆ. ಸ್ವಲ್ಪ ಹೊತ್ತಾದ ಮೇಲೆ ಇಬ್ಬರು ಪೋಲಿಸರ್ ಆ ಕಳ್ಳನ ಹಿಡಿಯಕೆ ಓಡಿ ಬಂದೊ. ಇವರ್ನ ಕಂಡ್ ಕೇಳ್‌ಕ್‌ನ, ಗುರುಗಳ ಮಾತನ ನೆನೆಸಿಕಂಡ್ ಭೀಮ ಒಬ್ಬನ ಪ್ರಾಣ ಉಳ್ಸಿಕೆ ಸುಳ್ಳ್ ಹೇಳ್‌ಕತ್ ಬಲಗಡೆ ದಾರಿನ ತೋರ್ಸಿದೆ. ಮತ್ತೆ ಸ್ವಲ್ಪ ಹೊತ್ತಿಗೆ ಇನ್ನೊಬ್ಬ ಕಳ್ಳ ಓಡಿ ಬಾತ್. ಅವನು ಎಡಗಡೆ ದಾರಿಲಿ ಓಡಿಹೋತ್. ಅವನ ಹಿಂದೆನೂ ಇಬ್ಬರ್ ಪೊಲೀಸಗ ಓಡಿ ಬಂದೊ. ಇವರ್ನ ಕೇಳ್‌ಕಾಕನ ರಾಮ ಸತ್ಯ ಹೇಳಿ ಎಡಗಡೆ ದಾರಿನೇ ತೋರ್ಸಿತ್. ಪೋಲೀಸರ್ ಆ ದಾರಿಗಾಗಿ ಹೋಗಿ ಕಳ್ಳನ ಹಿಡ್ದ್ ಎಳ್ಕಂಡ್ ಹೋದೋ. ಆಗ ಭೀಮ ಹೇಳ್ದೆ ಒಬ್ಬರ ಪ್ರಾಣ ಉಳ್ಸಿಕೆ ಸುಳ್ಳ್ ಹೇಳ್‌ಕ್‌ತ ಗುರುಗ ಹೇಳಿದ್ದೊ. ಅಲ್ಲಾ ನೀನ್ ಯಾಕೆ ಹೇಲ್ತ್‌ಲೆತ. ಇದರ್ನೆಲ್ಲಾ ದೂರಲಿ ನೋಡ್‌ತಿದ್ದ ಗುರುಗ ಹತ್ರ ಬಂದ್, ರಾಮ ತೋರ್ಸಿದ್ ಕಳ್ಳನ ಹಿಡಿಯಕೆ ಆದರೆ, ನೀನ್ ಸುಳ್ಳು ಹೇಳಿ ಕಳ್ಳ ತಪ್ಪಿಸಿಕಳಿಕೆ ಸಹಾಯ ಮಾಡ್ಯೊಳ. ಇದ್‌ಕೆ ಎಲ್ಲವೂ ನಿನ್ನ ದಡ್ಡ ಶಿಖಾಮಣಿತ ಕರೆಯೊದುತ. ಭೀಮಂಗೆ ತನ್ನ ತಪ್ಪಿನ ಅರಿವು ಆಗಿ ನಾಚಿಕೆಲಿ ತಲೆ ತಗ್ಗಿಸಿತ್.

- ಬಿಟ್ಟೀರ ಚೊಂದಮ್ಮ ಶಂಭು

---

**16 ನೇ ಪುಟದಿಂದ**

ಸಂಸಾರ ದೋಣಿನ ನಡ್‌ಸ್ತಾ ಬಂದಂಗೆ ನಿಮ್ಗೆ ವಯಸ್ಸಾತ್. ಕಾಯಿಲೆಯಾಗಿ ಮಲ್ಗಿದ್ದರಿ. ಬ್ರಾಹ್ಮಣರಲ್ಲಿ ಹೋಗಿ ಶಾಸ್ತ್ರ ಕೇಳ್ಸಿದ್ದೊ, ವೈದ್ಯರಲ್ಲಿ ಹೋಗಿ ಮೊದ್ದು ಮಾಡ್ಸಿದ್ದೊ, ಯಾವುದರಲ್ಲೂ ವಾಸಿ ಕಂಡತ್‌ಲೆ, ನಿಮ್ಮ ಪ್ರಾಣ ಆಯುಷ್ಯ ಮುಗ್ದೊ ಅಥವಾ ಅಪಮೃತ್ಯುಂದೋ, ಈ ದೇಹ ಬುಟ್ಟ್‌ಹೋತ್. ಇನ್ನು ಮುಂದೆ ಯಾಗೋಳು ಕಷ್ಟಗಳಿಗೆ ಸಿಕ್ಕದೆ ಪರಮಾತ್ಮನಲ್ಲಿ ಐಕ್ಯವಾಗ್‌ತ್ತೇಳಿ ಹಾರೈಸುವೆ. ಅಲ್ಲದೆ ಮುಂದಿನ ಜನ್ಮಲಿ ಅಗಸನ ಕಲ್ಲಾಗದೆ, ಗಾಣಿಗನ ಎತ್ತಾಗದೆ, ದಾರಿ ಬದಿ ಮರವಾಗದೆ, ಬ್ರಾಹ್ಮಣನ ಆಳಾಗದೆ ಇರಿ. ಕುದುರೆ ಓಟಕ್ಕೆ ಸಿಕ್ಕದೆ, ಆನೆ ತುಳಿತಕ್ಕೆ ಸಿಕ್ಕದೆ ಈ ಜನ್ಮನ ತೋರ್ದ್ ಬಾಳೆದಿಂಡ್‌ನ ಪಾಲಲಿ, ನೂಲ್‌ನ ಕೈತಾಂಗ್‌ಲಿ ಸ್ವರ್ಗಕ್ಕೆ ಹೋಗಿ, ಶ್ರೀಮನ್ನಾರಾಯಣನ ಬಲಭಾಗಲಿ ಸಂಪಿಗೆ ಮರವಾಗಿ ಹುಟ್ಟಿತ್ತೇಳಿ ನಿನ್ನ ನಿಮ್ಮ ಮನೆವು, ಊರೋವು, ನೆಂಟ್ರು ಸರ್ವರೂ ಹಾರೈಸುವೆ." "ಸ್ವರ್ಗಕ್ಕೇ ಹೋಗು" "ಸ್ವರ್ಗಕ್ಕೇ ಹೋಗು" "ಸ್ವರ್ಗಕ್ಕೇ ಹೋಗು"

***-ಪಟ್ಟಡ ಶಿವಕುಮಾರ್, ನಿರ್ದೇಶಕರು, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ.***

---

ಮನುಷ್ಯನಿಗೆ ಸಮಯ ಪ್ರಜ್ಞೆ ಅತಿ ಮುಖ್ಯ, ಅದನ್ನೇ ಗೌಡ ಜನಾಂಗ ಮಾಡಬೇಕು.

# ಗುಮ್ಮ ಪಡ್ಚ

"ನಂಟ ಬಾರದೆ ಈ ಹೆಣ್ ಕೋಳಿ ಕೊಲ್ಲಿಕಿಲೆ ಕಂಡದೆ ಹಾಳಾದ ನೀರ್ ಸೋಂತೆತಿಂದ್ ತಿಂದ್ ತಿಂದ್ ಹಲ್‌ಪೂರಾ ಕಸಕಸತ ಹೇಳ್ದೆ. ಹುಳ್ಳಂಗೆ ಏನಾರ್ ತಿಂಬಕು. ಯಂತ ಮಾಡ್ಬು? ಮೊದುವೆ ಮಾಡವ್ ಆಟಿ ಕಳಿಯದೆ ಮಾಡಿಕಿಲ್ಲೆ. ಹತ್ತುವ ಮೀನ್ ಹತ್ತಿ ಆತ್. ಹಿಡ್ದೂ ಆತ್. ತಿಂದೂ ಆತ್. ನಂಗೆ ಮಾತ್ರ ಸತ್ಯ ಮಾಡಿಕೂ ಒಂದೇ ಒಂದ್ ಮೀನ್ ಸಿಕ್ಕಿತ್ಲೆ" ಹಿಂಗೆ ಪಿರಿ ಪಿರಿ ಹೇಳಿಕಂಡ್ ನಮ್ಮ ಬಾಬೆ ಹೈದ ತೋಡು, ಗದ್ದೆ, ತೋಟ ತಿರ್‍ಗಾಡಿಕಂಡ್ ಬನ್ನೆತ ಹೋತ್.

ಇಂವಂಗೆ ಬಾಬೆತ ಹೆಸ್ರ್ ಹ್ಯಂಗೆ ಬಾತ್‌ತ ನೀವಿಗೆ ಗೊತ್ತುಟಾ? ಬಾಬೆಂತೇಳಿರೆ ಕೂಸುತ ಅರ್ಥ. ಈ ಹೈದನ ಸಣ್ಣೆತರ್‌ಂದೇ ಬಾಬೆ ಬಾಬೆತೇ ಕರ್ದ್ ಕರ್ದ್ ಈಗಳೂ ಹಂಗೇ ಕರಿತಾ ಒಳೊ. ಈ ಬಾಬೆಗೆ ಈಗ ಮೂರ್ ಮಕ್ಳ ಬೇರೆ ಒಳೊ. ಆದರೆ ಇಂವನ ಹೆಸ್ರ್ ಮಾತ್ರ ಬಾಬೆತೇ ಒಳ್ಕಣ್ತ್.

ಬಾಬೆ ಸುರೂಲಿ ಗದ್ದೆಕಡೆ ಹೋತ್. ಆಗ ಆ ಕಡೆಂದ ಒಬ್ಬ ಈ ಕಡೆ ಬರ್‍ತಾ ಇತ್. ಹಂಗೆ ಬರ್‍ತಾ ಇದ್ದವನ ಕೈಲಿ ಎಂತದೋ ಇತ್ತ್. ಅದ್ ಮತ್ತೇನ್ ಅಲ್ಲ, ನಾಯಿಮರಿ ಅಳುಂಬು. ನಾಕೈದ್ ಕಾಲ್ ಅಳುಂಬುನ ಕಂಡೆ ಬಾಬೆಗೆ ಬಾಯಿ ತುಂಬ ನೀರ್ ತುಂಬಿಹೋತು. "ಹೇ ನಾ ನೋಡ್ದರ ನೀ ಕಿತ್‌ಬುಟ್ಟರಾ? ನಂಗೆರಡ್ ಕಾಲ್ ಕೊಡ್ರಾ" ತ ಕೇಳಿಕೂ ಕೇಳ್ತ್. "ಏ ಓಕ್ಕೆಗ್ರಾ, ನೀಯೇನ್ ಬಸ್ರಿ ಅಲ್ಲಲ, ಆಸೆ ಆಕೆ" ತ ಹೇಳಿಕೂ ಹೇಳ್ತ್. ಬಾಬೆ ಮೊಕಪೂಜಿಕಂಡ್ ಎಲ್ಲಾರ್ ಸಿಕ್ಕುದಾತ ಹುಡ್ಕಿಕಂಡ್ ಹೋತ್. ಅಲ್ಲಿ ಇಲ್ಲಿ ಎಲ್ಲಿ ಹುಡ್ಕಿರೂ ಯಾವ ಅಳುಂಬೂ ಸಿಕ್ಕಿತ್ಲೆ.

ಮಳೆಗಾಲಲಿ ಗುಡುಗಿರೆ ಅಳುಂಬು ಎದ್ದೇ ಎದ್ದದೆತ ಲೆಕ್ಕ. ಸಂಕ್ರಮಣನೋ ಅಮಾಸೆನೋ ಬಂದರಂತೂ ಅಳುಂಬು ಸಿಕ್ಕೇ ಸಿಕ್ಕಿದೆತ ಬಾಬೆ ಗ್ಯಾನ ಮಾಡ್ತ್. ಹಂಗೆ ಮಾಮೂಲಿ ಹೆಗ್‌ಲ್ ಅಳಂಬು ಏಳ್‌ತಿದ್ದ ಕಡೆ ಹೋತ್. ಕತ್ತಲೆ ಕತ್ತಲೆ ಆಗ್ತಾ ಇತ್ತ್. ಆ ಬ್ಯಾಂಗೆ ಮರದ ಬುಡಕ್ಕೆ ಹೋತ್. (ಬ್ಯಾಂಗೆ ಮರತೇಳಿಕೆ ಹೊನ್ನೆಮರ) ಅಲ್ಲಿ ನೋಡಿರೆ ಹೆಗ್‌ಲ್ ಅಳುಂಬು ಮೊಗ್ಗು ಮೊಗ್ಗಾಗಿ ಮೂಡಿಕಂಡಿತ್. ಅದ್ ಕೀಳ್‌ವಷ್ಟ್ ಮೇಲೆ ಬಂದಿತ್ಲೆ. ಬೆಳಿಗ್ಗೆ ಬನ್ನೆತ ಬಾಬೆ ಮೊಕನ ಬೊಂಬಾಯಿಯಸ್ಟ್ ಅಗಲ ಮಾಡಿಕಂಡ್ ಬಾತ್. ನಿನ್ನ ಕೋಳಿ ಯಾವಂಗೆ ಬೇಕ್ನೆ. ನಾಳೆ ಕುಕ್ಕೆಯಸ್ಟ್ ಅಳುಂಬು ತನ್ನೆತ ಹೆಣ್‌ಗೆ ಹೇಳಿ ಮಲ್ಗಿತ್.

ಬೆಳಗ ಆತೋ ಇಲ್ಲೆಯೊ ಕುಕ್ಕೆ ತಕಂಡ್ ಆಳುಂಬು ಕೀಳಿಕೆ ಬ್ಯಾಂಗೆ ಮರದ ಬುಡಕ್ಕೆ ಹೋಗ್ತಾ ಇತ್. ಹಂಗೆ ಹೋಕನ ಬೀಡಿ ಹೊಗೆ ವಾಸನೆ ಬಂದಂಗಾತ್. ಯಾರೋ ಇತ್ತ ಬಂದಾಂಗಾತ್. ಯಾರೋ ಇತ್ತ ಬಂದಂಗೆ ಉಟ್ಟಲ್ಲಾ. ಸನಿಹಿಡ್ದತ್ ಮನಿ ಅಳುಂಬು ಕೀಳಿಕೆ ಬಂದಿರ್‌ವನೋ ಏನೋಂತ ಗ್ಯಾನ ಮಾಡಿಕಂಡ್ ಆ ಮರದ ಬುಡಕ್ಕೆ ಹೋತ್. ಅಲ್ಲಿಗೆ ಹೋದರೆ ಅಲ್ಲಂತ ಉಟ್ಟು? ಒಂದೇ ಒಂದ್ ಅಳುಂಬು ಬುಡದಂಗೆ ಕಿತ್ತ್ ಬುಟ್ರೊಳೊ. ಬಾಬೆಗೆ ಸಿಟ್‌ಲಿ ಮೈ ಪೂರಾಸುಟ್ಟ್ ಹೋದಂಗಾತ್. ಅದೇ ಸಿಟ್ಟ್‌ಲಿ ಇನ್ನೊಂದ್ ದಾರಿಗಾಗಿ ಮನೆ ಕಡೆ ಬರ್‍ತಾ ಇರಕನ. ಅಲ್ಲೊಂದ್ ಕಡೆ ಬೆಳ್ಳಂಗೆ ಬೆಳ್ಳಂಗೆ ಕೊಡೆ ಬುಡ್ಸಿಕಂಡ್ ಕುದ್ದಂಗೆ ಕಂಡದೆ. ಉಯ್ಯೋ ಹೆಗ್‌ಲ್ ಅಳುಂಬು! ಒಂದೆರಡಾ? ಕುಕ್ಕೆ ತುಂಬುವಷ್ಟ್ ಎಲ್ಲ ಕಿತ್‌ಕಂಡ್ ಮನೆಗೆ ಬಾತ್. ಗಮ್ಮತ್ ಮಾಡ್ದೊ.

ನಾಟಿ ಕೆಲ್ಸ ಆಗಿ ತಿಂಗ ಕಳ್ದಿರ್ದು. ಗದ್ದೆ ಕಡೆ ಹೋಗಿ ಬನ್ನೆತ ಬಾಬ ಬೆಳಿಗ್ಗೆ ಅತ್ತ ಹೊತ್. ಮಳೆ ಜಾಸ್ತಿ ಆಗಿ ನಾಟಿ ಪೂರಾ ಹುಳಬಿದ್ ನೋಡಿಕೆ ಬೊತ್ತ್. ಗದ್ದೆ ಪುಣೆಪೂರಾ ಏಸಂಡ್‌ಗ ಹೊಗುಳು ಮಾಡಿದ್ದೊ. ಮೆಟ್ಟೆ ಮೆಟ್ಟೆ ಹೂಗುಳು ಮುಚ್ಚಿತ್. ಹಂಗೆ ಮಾಡಿ ತೋಡುಕಡೆ ಹೋತ್. ತೋಡು ಕರೆಲಿ ಎಂತದೋ ಕುದ್ದುಟು. ಕಾಡ್‌ಕೋಳಿನ? ಅಲ್ಲ, ಚೊಂಬುಕನಾ? ಅಲ್ಲ,ನವಿಲು ಆಗಿರ್ದಾ? ಅಲ್ಲಾ ಮಾರಾಯರೆ- ಅದ್ ಗುಮ್ಮ!ಇಷ್ಟ್ ಹೊತ್ತ್‌ಲಿ ಗುಮ್ಮ ಅಲ್ಲೆಂತಕೆ ಕುದ್ದುಟು? ಆದ್ ಯಂತಕಾರೂ ಕುರ್ದಿರ್ಲಿ. ಕಲ್ ಎತ್ತಿ ಹಾಕಿರೆ ಆದು ಕಂಡದೆ. ಮೆಲ್ಲಕಲ್ ತಕ್ಕಂಡತ್. ಗುರಿ ನೋಡಿ ಹೊಡ್ತ್, ಕಲ್ಲ್ ತಾಂಗೀತ್. ಬಡ ಬಡ ರೆಕ್ಕ ಬಡ್ದ್ ಪಡ್ಚ ಆತ್. ಬಿದ್ದ ಗುಮ್ಮನ ಎತ್ತಿಕಂಬಕೆ ಹೋಗಿ ಎತ್ತಿತ್. ಎತ್ತಿಬರ್‍ತಾ ಇಲ್ಲೆ. ನೋಡಿರೆ ಕಥೆ ಬೇರೆ ! ಗುಮ್ಮನ ಒಂದ್ ಕಾಲ್ ಏಸಂಡ್ ಮಾಳಿ ಒಳಗೆ ಉಟ್ಟು. ಇರ್‍ಲ್ಲ ಗುಮ್ಮ ಏಸಂಡ್‌ನ ಹಿಡೆಕೆತ ಹೋಗಿ ಇನ್ನೇನ್ನ್ ಹಿಂಡೆಕೂಂತಿರಕನ ಏಸಂಡೇಗುಮ್ಮನ ಕಾಲ್‌ನ ತನ್ನ ಕಟಿಂಗ್ ಪ್ಲೇಯರ್‌ಂದ ಹಿಡ್ದ್ ಬುಟ್ಟುಟು. ಗುಮ್ಮ ಹೊರಗೆ ಎಳ್ದದೆ, ಏಸಂಡ್ ಒಳಗೆ ಎಳ್ದದೆ. ಆ ಪುಲಿಂಗ್ ಪುಶಿಂಗ್‌ಲಿ ಬೆಳಗಾಗಿ ಹೋತ್.

ಬಾಬೆ ಜಾಗ್ರತೆಂದ ಗುಮ್ಮನ ಹಿಡ್ದ್ ಎಳ್ತ್. ಹಂಗೆ ಎಳೆಕನ ಕಕ್ಕಡೆ ಏಸಂಡೂ ಹೊರಗೆ ಬಾತ್. ಹಿಡ್ದ್ ಅದರ ಕಾಲ್‌ನ ಚಟ್ ಪಟ್‌ತ ಮುರ್ತ್. ಒಂದೇ ಕಲ್‌ಗೆ ಎರಡ್ ಜೀವ ಸಿಕ್ಕಿದ ಕುಸೀಲಿ ಬಾಬೆ ಮನೆಗೆ ಹೋತ್. ಅಚ್‌ಕಟ್ ಮಾಡ್ತ್. ಮೊಟ್ಟೆ ತುಂಬಿ ಕಂಡಿದ್ದ ಗುಮ್ಮನ ಗೈಪು ಒಂದ್ ಚೆಟ್ಟಿಲಿ ಬೇತ್. ಮರಿ ತುಂಬಿಕಂಡಿದ್ದ ಏಸಂಡ್ ಇನ್ನೊಂದ್ ಚೆಟ್ಟಿಲಿ ಬೇತ್.

-ಬಿ. ಆರ್. ಜೋಯಪ್ಪ, ಮದೆ.

*ಸಂಗಾತಿನ ಓಲೆ ಒಂದರಂತೆ ಕೊಂಡು ಓದಿಕೆ*
*ಮರೆಕ್ಕಾಗದ್, ಬಾಕಿ ಇರಿಸಿ ಕಂಡವ್ ತಪ್ಪದೆ*
*ಹಣ ಸಂದಾಯಿಸಕ್ಕು*

*ಆಗಿಂದಾಗ್ಗೆ ನವೀಕರಣ ಆಕು.*
*ಜನಾಂಗಕ್ಕಾಗಿ ಪತ್ರಿಕೆ ಬೇಕ್.*

ಜೋಯಪ್ಪನವರ ಲೇಖನವು ಹಳೇ ಅರೆಗನ್ನಡ ಪದಗಳ ಸಂಗ್ರಹಕ್ಕಾಗಿ ಉತ್ತಮ ಕಾಣಿಕೆ.

# ಪ್ರತಿಭಾವಂತರು



ಮಂಗಳೂರಿನ ಶಾರದ ಪ. ಪೂ. ಕಾಲೇಜಿನ ಶ್ರೀ ದೀವಿಶ್ ಎನ್.ಡಿ.ಈ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 567 ಅಂಕ (ಶೇ. 94.5 ಹಾಗೂ ಪಿ.ಸಿ.ಎಂ.ಬಿ. ವಿಭಾಗದಲ್ಲಿ 390 ಅಂಕ (ಶೇ 97.5) ಗಳನ್ನು ಪಡೆದಿದ್ದಾನೆ. ಸಿಇಟಿ ಮೆಡಿಕಲ್ ವಿಭಾಗದಲ್ಲಿ 79 ನೇ ರ್‍ಯಾಂಕ್ ಮತ್ತು ಇಂಜೀನಿಯರಿಂಗ್ ವಿಭಾಗದಲ್ಲಿ 350 ನೇ ರ್‍ಯಾಂಕ್ ಗಳಿಸಿರುತ್ತಾನೆ. ಇವನು ಪುತ್ತೂರಿನ ನೂಜಿಮನೆಯವರಾಗಿದ್ದು, ಭಾರತದ ಆಹಾರ ನಿಗಮದ ಮಂಗಳೂರು ಶಾಲೆಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿರುವ ಹಾಗೂ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ) ಬೆಂಗಳೂರು ಇದರ ಮಾಜಿ ಕಾರ್ಯದರ್ಶಿಯವರಾದ ಶ್ರೀ ನೂಜಿ ದಿನಕರ ಗೌಡ ಮತ್ತು ಶ್ರೀಮತಿ ಪದ್ಮಾವತಿ ದಂಪತಿಗಳ ಪುತ್ರ. ಇವನಿಗೆ ಶುಭ ಕೋರುವ

***ಪ್ರಕಟಣೆ : ಡಾ॥ ದೇವಿಪ್ರಸಾದ್ ಎನ್. B.DS., (M.D.S.)***

# ನಿಧನ

ಪಾಲಿಬೆಟ್ಟ ನಿವಾಸಿ ಪೈಕೇರ ಪೂವಮ್ಮನವರು ಜುಲೈ 5ರಂದು ನಿಧನರಾದರು. ಇವರಿಗೆ 78 ವರ್ಷ ಪ್ರಾಯವಾಗಿತ್ತು. ಮೃತರು ಮೂವರು ಪುತ್ರರನ್ನು ನಾಲ್ವರು ಪುತ್ರಿಯರನ್ನು ಹಾಗೂ ಅಪಾರ ಬಂಧುವರ್ಗವನ್ನು ಆಗಲಿದ್ದಾರೆ. ಕೊಡಗು ಗೌಡ ಸಮಾಜ, ಮಡಿಕೇರಿ ಇದರ ಕಾರ್ಯದರ್ಶಿಯಾಗಿರುವ ಅನಂತ್‌ನವರು ಹಾಗೂ ಮಡಿಕೇರಿಯಲ್ಲಿರುವ ಪೂಜಾ ಆರ್ಕೆಡ್ ಮಾಲೀಕ ಕುಮಾರ್ ಇವರ ಪುತ್ರರಾಗಿದ್ದಾರೆ.

-ಸಂಗಾತಿ

---

ನಂಜರಾಯಪಟ್ಟಣ ನಿವಾಸಿ ಕಳಂಜನ ದಿ॥ ಕಾಳಪ್ಪನವರ ಧರ್ಮಪತ್ನಿ ಮಾಚಮ್ಮನವರು ದಿನಾಂಕ 10-7-2003 ರಲ್ಲಿ ನಿಧನರಾದರು. ಇವರಿಗೆ 89 ವರ್ಷ ಪ್ರಾಯವಾಗಿತ್ತು. ಮೃತರು ಮೂವರು ಪುತ್ರರನ್ನು, ನಾಲ್ಕು ಪುತ್ರಿಯರನ್ನು ಹಾಗೂ ಅಪಾರ ಬಂಧುವರ್ಗವನ್ನು ಆಗಲಿದ್ದಾರೆ.


-ಕುಂಬಾರನ ಸುಬ್ಬಯ್ಯ

---

ಮೂಲತ ಕೊಡಗಿನ ಕುಯ್ಯಂಗೇರಿ ನಿವಾಸಿ ಪ್ರಸ್ತುತ ಸುಳ್ಯದಲ್ಲಿ ನೆಲೆಸಿದ್ದ ನಿವೃತ್ತ ಅರಣ್ಯ ವಲಯಾಧಿಕಾರಿ ಪೋರೆಯನ ಬಿ. ತಮ್ಮಯ್ಯನವರು ತಾರೀಖು 25-7-2003 ರಂದು ಬೆಂಗಳೂರಿನಲ್ಲಿ ನಿಧನರಾದರು. ಅಂತ್ಯಕ್ರಿಯೆಯು ಕುಯ್ಯಂಗೇರಿ ಗ್ರಾಮದಲ್ಲಿ ದಿನಾಂಕ 27-7-03 ರಂದು ನಡೆಯಿತು. ಮೃತರಿಗೆ 67 ವರ್ಷ ಪ್ರಾಯವಾಗಿತ್ತು. ಮೃತರು ಪತ್ನಿ ಹಾಗೂ 2 ಪುತ್ರಿಯರನ್ನು ಆಗಲಿದ್ದಾರೆ.

-ಸಂಗಾತಿ

# ಅಪರೂಪದ ಮಡಗಲ ಕಾಯಿ



ಇದೊಂದು ಅಪರೂಪದ ತರಕಾರಿ. ಎಷ್ಟು ಅಪರೂಪವೆಂದರೆ ಅದು ಬೆಳೆಯುವ ಪ್ರದೇಶಗಳಲ್ಲೂ ತುಂಬಾ ಅಪೂರ್ವ. ದುಡ್ಡು ಕೊಡುತ್ತೇವೆಂದರೂ ಸಲೀಸಾಗಿ ಸಿಗದು. ಆದರೆ ಕೆಲವರು ಇದನ್ನು ಕಡ್ಡಾಯವಾಗಿ ವರ್ಷಕ್ಕೊಮ್ಮೆ ಯಾದರೂ ತಿನ್ನ ಬಯಸುತ್ತಾರೆ. ಇದಕ್ಕೆ ಹೆಸರು ಹಲವು-ಮಡಹಾಗಲ, ಮೂಡಹಾಗಲ, ಕಾಡುಪೀರ, ಕಾಡುಹೀರೆ, ಕಾಡು ಹಾಗಲ ಇತ್ಯಾದಿ. ಮುಖ್ಯವಾಗಿ ಮಲೆನಾಡು ಮತ್ತು ಕರಾವಳಿ ಕಾಡುಗಳಲ್ಲಿ ಬೆಳೆಯುವ ಇದು ದಿನದಿಂದ ದಿನಕ್ಕೆ ಅಪೂರ್ವವಾಗುತ್ತಿದೆ. ಮಲೆನಾಡು ತರಕಾರಿ ಮಾರ್ಕೆಟ್‌ನಲ್ಲಿ ಆಗಾಗ ಕಾಣಸಿಗುವ ಇದರ ಬೆಲೆ ಸುಮಾರು ಕಿಲೋಗೆ ಸುಮಾರು ರೂ. 50/-

'ಇದಕ್ಯಾಕೆ ಕಿಲೋಗೆ ರೂ. 50 ಬೆಲೆ' ಎಂದು ಕೇಳಿದರೆ 'ಔಷಧೀಯ ಗುಣ ಇದೆಯಂತೆ. ಯಾವ ರೀತಿಯ ಕಾಯಿಲೆಗಳಿಗೆ ಇದು ಔಷಧಿ ಎಂದು ಕೇಳಿದರೆ 'ಗ್ಯಾಸ್, ಶುಗರ್,ಅಸಿಡಿಟಿ....' ಹೀಗೆ ವಿವಿಧ ಹೆಸರುಗಳನ್ನು ಸ್ಪಷ್ಟವಾಗಿ ಹೇಳುತ್ತಾರೆ. ಮಲೆನಾಡಿನ ಹಳ್ಳಿಗಳಲ್ಲೂ ಇದಕ್ಕೆ ಔಷಧೀಯ ಗುಣಗಳಿವೆ ಎಂಬ ಗಾಢ ನಂಬಿಕೆಯಿದೆ. ಇದು ಹೆಚ್ಚಾಗಿ ಅರೆ ಬೆಂದ ಕಾಡುಗಳ ಬೂದಿ ಮಿಶ್ರಿತ ವಾತಾವರಣದಲ್ಲಿ ಬೆಳೆಯುತ್ತದೆ.

ಇದು ದುರ್ಬಲವಾಗಲು ಮುಖ್ಯ ಕಾರಣ, ಇದನ್ನು ಇತರ ತರಕಾರಿ ಸಸ್ಯಗಳ ರೀತಿಯಲ್ಲಿ ಬೆಳೆಯುವುದು ಕಷ್ಟ. ಕಾಡಿನ ಮರಗಳ ಆಸರೆಯಲ್ಲಿ ಬಳ್ಳಿಯಾಗಿ ಹಬ್ಬುವ ಈ ಸಸ್ಯ ಮಳೆಗಾಲ ಆರಂಭವಾದ ನಂತರ ಕಾಯಿ ಬಿಡಲು ಆರಂಭಿಸುತ್ತದೆ. ಕಾಯಿಯ ಮೇಲೆಲ್ಲ ಮೃದುವಾದ ಮುಳ್ಳುಗಳು, ತೊಂಡೆಕಾಯಿಯ ಎರಡರಷ್ಟು ಗಾತ್ರ, ಒಳಗೆ ಸುಮಾರಾಗಿ ಹಾಗಲದ ರೀತಿ, ಕಹಿ ಇಲ್ಲವೇ ಇಲ್ಲ, ರುಚಿ ಸ್ವಲ್ಪ ಸಪ್ಪೆ. ಇದರ ಬಳ್ಳಿಯ ಗಡ್ಡೆಯನ್ನು ಕಾಡಿನಿಂದ ನಾಡಿಗೆ ತಂದು ನೆಟ್ಟು ಬೆಳೆಸಲು ಕೆಲವರು ಪ್ರಯತ್ನಿಸಿದ್ದರೂ, ಸಫಲವಾದಂತೆ ಇಲ್ಲ.

ಮಳೆಗಾಲದಲ್ಲಿ ಹಳ್ಳಿಗಳಲ್ಲಿ ಇದರ ರುಚಿ ನೋಡಲು ತುಂಬ ಚೆಂದ. ಮಡಗಲ ಕಾಯಿಯ ಜೊತೆ ಕಡ್ಲೆ ಕಾಳು ಹಾಕಿ ಮಾಡಿದ ಸಾರು ಮತ್ತು ಕೊಡಗಿನ ಬಿಸಿ ಅಕ್ಕಿ ರೊಟ್ಟಿಯೊಡನೆ ಸೇವಿಸಬೇಕು. ಬಲು ರುಚಿಯಾಗಿರುತ್ತದೆ.

-ಸಂಗಾತಿ.

---

**ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯು - ಭಾಷೆ, ಸಂಸ್ಕೃತಿ ಬಗ್ಗೆ ಚಿಂತಿಸುತ್ತಿದೆಯೇ? ಸಂಗಾತಿಗೆ ಲೇಖನ ಕಳ್ಸಿ.**

# ಕೊಡಗು ಗೌಡ ವಿದ್ಯಾ ಸಂಘ (ರಿ) ಮಡಿಕೇರಿ

## ಪ್ರಕಟಣೆ

ಸ್ವಾತಂತ್ರ್ಯೋತ್ಸವದ ಮಹತ್ವದ ಸಂದರ್ಭದಲ್ಲಿ ಪ್ರತಿಭಾ ಅನ್ವೇಷಣೆಯ ದೃಷ್ಟಿಯಿಂದ ನಮ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲು ನಮ್ಮ ಸಂಸ್ಥೆ ತೀರ್ಮಾನಿಸಿದೆ:-

1) 4 ನೇ ತರಗತಿ ವರೆಗಿನ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ನಡೆಯಲಿದೆ.
2) 5 ರಿಂದ 7 ನೇ ತರಗತಿ ವರೆಗೆನ ವಿದ್ಯಾರ್ಥಿಗಳಿಗೆ ಒಂದು ಪದದ ಉತ್ತರ ಬರೆಯುವ (One word answer) ಸಾಮಾನ್ಯ ಜ್ಞಾನದ ಸ್ಪರ್ಧೆ, ಪ್ರಶ್ನಾವಳಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಯಲ್ಲಿದ್ದು ಒಟ್ಟು 50 ಪ್ರಶ್ನೆಗಳಿರುತ್ತವೆ.
3) ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕ್ವಿಜ್ (QUIZ) ಸ್ಪರ್ಧೆ ನಡೆಯಲಿದೆ. ಈ ಸ್ಪರ್ಧೆ ತಲಾ ಮೂರು ಜನರಿರುವ ತಂಡಗಳ ನಡುವೆ ನಡೆಯಲಿದೆ. ಆದುದರಿಂದ ಆಸಕ್ತ ವಿದ್ಯಾರ್ಥಿಗಳು ಮೂರು ಜನರ ತಂಡಗಳನ್ನು ತಾವೇ ರಚಿಸಿ ಸ್ಪರ್ಧೆಗೆ ಹೆಸರನ್ನು ನೋಂದಾಯಿಸಬೇಕು.
4) ಪದವಿಪೂರ್ವ ಮತ್ತು ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಕನ್ನಡ ಪ್ರಬಂಧ ಸ್ಪರ್ಧೆ ಪ್ರಬಂಧದ ವಿಷಯವನ್ನು ಸ್ಥಳದಲ್ಲಿ ನೀಡಲಾಗುವುದು.

ಸ್ಪರ್ಧೆ ನಡೆಯುವ ದಿನಾಂಕ **17-8-03.** ಮೇಲ್ಕಾಣಿಸಿದ ಸ್ಪರ್ಧೆಗಳಲ್ಲಿ ಭಾಗವಹಿಸಲಿಚ್ಛಿಸುವವರು **10-8-03** ನೇ ತಾರೀಖಿನೊಳಗಾಗಿ ನಮ್ಮ ಸಂಸ್ಥೆಗೆ ಲಿಖಿತವಾಗಿ ಅರ್ಜಿ ಸಲ್ಲಿಸಬೇಕು. ಅಧ್ಯಕ್ಷರು, ಕೊಡಗು ಗೌಡ ವಿದ್ಯಾಸಂಘ, ಗುಡ್ಡೆಮನೆ ಅಪ್ಪಯ್ಯ ಗೌಡ ದಾರಿ, ಮಡಿಕೇರಿ ಕೊಡಗು ಜಿಲ್ಲೆ, ಈ ವಿಳಾಸಕ್ಕೆ ಬರೆಯಬೇಕು. ಗ್ರಾಮೀಣ ಪ್ರದೇಶದ ಸ್ಪರ್ಧಿಗಳಿಗೆ ಬಸ್ ಪ್ರಯಾಣದರ ನೀಡಲಾಗುವುದು.

ಇಂತು ತಮ್ಮ ವಿಶ್ವಾಸಿ
**(ಹೊಸೂರು ರಮೇಶ್ ಜೋಯಪ್ಪ)**
ಅಧ್ಯಕ್ಷರು
ಕೊಡಗು ಗೌಡ ವಿದ್ಯಾಸಂಘ, ಮಡಿಕೇರಿ.

---

## ಗೌಡ ಪುಟಾಣಿಗಳಿಗೊಂದು ಸಿಹಿ ಸುದ್ದಿ

10 ಕುಟುಂಬ 18 ಗೋತ್ರಕ್ಕೆ ಸೇರಿದ 10 ವರ್ಷದೊಳಗಿನ ಪುಟಾಣಿಗಳು ಇನ್ನು ಮುಂದೆ ನೀವು ಬಿಡಿಸಿದ ಚಿತ್ರಗಳು, ನೀವು ಕಂಡ ಚಿಕ್ಕ ಪುಟ್ಟ ಘಟನೆಗಳ ವಿವರಗಳನ್ನು ನಮ್ಮ ಸಂಗಾತಿಗೆ ಕಳುಹಿಸಿದಲ್ಲಿ ನಾವುಗಳು ಖಂಡಿತ ಪ್ರಕಟಿಸುತ್ತೇವೆ. ನಿಮ್ಮ ಪ್ರಾಯ, ತರಗತಿ, ತಂದೆ ತಾಯಿಯ ಹೆಸರು, ಕುಟುಂಬದ ಹೆಸರು ಬರೆದು, ಪ್ರತಿ ತಿಂಗಳ 25ರ ಒಳಗೆ ನಮಗೆ ತಲಪುವಂತಿರಬೇಕು. ನಿಮಗಾಗಿ ಒದು ಪುಟ ಮೀಸಲಿಟ್ಟಿದ್ದೇವೆ. ಮಕ್ಕಳೇ ಸದುಪಯೋಗ ನಿಮ್ಮದಾಗಿರಲಿ. ಅರೆಗನ್ನಡ ಭಾಷೆಗೆ ಹೆಚ್ಚು ಪ್ರಾಶಸ್ತ್ಯ. ***ಸಂಪರ್ಕಿಸಿ : 0821/ 2404290***

---

## ಚಂದದಾರರ ಗಮನಕ್ಕೆ

ಇನ್ನು ಮುಂದಕ್ಕೆ ಕೆಲವು ಭಾನುವಾರಗಳನ್ನು ಆಯ್ಕೆ ಮಾಡಿಕೊಂಡು ಮಡಿಕೇರಿ, ಕುಶಾಲನಗರ, ಸುಂಠಿಕೊಪ್ಪ, ಭಾಗಮಂಡಲ, ವಿರಾಜಪೇಟೆ, ಸಿದ್ದಾಪುರ, ಸೋಮವಾರಪೇಟೆ ಈ ಸ್ಥಳಗಳಿಗೆ ಭೇಟಿ ಮಾಡಲಾಗುವುದು. ನಮ್ಮ ಚಂದಾದಾರರಿಗೆ ಕಾರ್ಡ್ ಮೂಲಕ ತಿಳಿಸಲಾಗುವುದು. ತಾವುಗಳು ಅಂದು ತಪ್ಪದೆ ಬಂದು ಹಣ ನೀಡಿ ನವೀಕರಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡಲಾಗುವುದು. ತಾತ್ಸಾರ ಸಲ್ಲದು. ಪತ್ರಿಕೆಯೇ ಜನಾಂಗದ ಬೆನ್ನೆಲುಬು.

**ಸಂಪರ್ಕಿಸಿ : 0821/2404290**

**-ಸಂಪಾದಕಿ**

---

## ಮಡಿಕೇರಿ ಶಾಖೆಯಲ್ಲಿ

ಮಡಿಕೇರಿ ನಗರದ ನಮ್ಮ ಈ ಶಾಖೆಯ ಈ ಕೆಳಗಿನ ವಿಳಾಸದಲ್ಲಿ ಸಂಗಾತಿ ಪತ್ರಿಕೆಯ ಪ್ರತಿನಿಧಿಗಳು ವಾರದ ಸೋಮವಾರ ಮತ್ತು ಶುಕ್ರವಾರಗಳಂದು ಕಾರ್ಯ ನಿರ್ವಹಿಸುವರು. ಚಂದ ಇನ್ನಿತರ ವ್ಯವಹಾರಕ್ಕೆ ಸಂಪರ್ಕಿಸುವುದು, ದೂರವಾಣಿ : **228047** ಬೈತಡ್ಕ ಜಾನಕ್ಕಿ, **228380** ಪಾಂಡನ ರತಿ ಚಂದ್ರಶೇಖರ್ ***ವಿಳಾಸ : ಪಾಂಡನ ಕಾಂಪ್ಲೆಕ್ಸ್, ಸುಬೇದಾರ್ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ.***

**-ಸಂಗಾತಿ**

---

## ಬಾಕಿದಾರರ ಗಮನಕ್ಕೆ


ಸಂಗಾತಿ ಬಾಕಿದಾರರಾದ ಎಲ್ಲಾ ಚಂದಾದಾರರು ತಮ್ಮ ಬಾಕಿಯನ್ನು ಮರೆಯದೆ ಖಂಡಿತಾ ನೀಡಿ ಪತ್ರಿಕಾಭಿವೃದ್ಧಿಗೆ ಮತ್ತು ಜನಾಂಗದ ಏಳ್ಗೆಗೂ ಸಹಕರಿಸುವುದು. ಹಲವು ಬಾರಿ ಜ್ಞಾಪಿಸಲಾಗಿದೆ ನೆನಪಿರಲಿ. ಯಾವುದೇ ಕಾರಣಕ್ಕೂ ಪತ್ರಿಕೆ ನಿಂತು ಹೋಗಬಾರದು. ಇದರ ಫಲ ಈಗ ಅನ್ನಿಸದಿದ್ದರೂ ಭವಿಷ್ಯದಲ್ಲಿ ಖಂಡಿತ ಫಲ ಇದೆಯೆನ್ನುವುದು ನಮ್ಮ ನಂಬಿಗೆ. ಪತ್ರಿಕೆ ಯಾವುದೇ ಕಾರಣಕ್ಕೂ ಸದ್ಯಕ್ಕೆ ನಿಲ್ಲಲು ಬಿಡುವುದಿಲ್ಲ. ಅದುವೆ ಜನಾಂಗದ ಜೀವಾಳ. ಒಮ್ಮೆ ಮಡಿಕೇರಿ ಕಛೇರಿಗೆ ಭೇಟಿ ನೀಡಿ ಸಹಕರಿಸಿ, ಉದಾಸೀನತೆ ತಾತ್ಸಾರ ಎಂದೂ ಸಲ್ಲದು.

**-ಪಟ್ಟಡ ಪ್ರಭಾಕರ, ಗೌರವ ಸಂಪಾದಕ.**

---

ಗೌಡ ಬಂಧುಗಳೆಲ್ಲರೂ ಸಹಬಾಳ್ವೆಯ ಪ್ರಗತಿಯತ್ತ ಮುನ್ನಡೆಯೋಣಾ.

# ಪಂಚಮ ವರ್ಷದ ಚಿರಸ್ಮರಣೆ



ದಿ|| ಪಾಣತ್ತಲೆ ಗಣಪತಿ ಸೋಮಪ್ಪ
ಜನನ: 16-9-1842
ಮರಣ: 14-8-1998

ನೀವು ನಮ್ಮನ್ನೆಲ್ಲಾ ಅಗಲಿ ಐದು ವರ್ಷಗಳೆ ಕಳೆದವು. ನಿಮ್ಮ ಪ್ರೀತಿಯ ನೆನಪು, ವಾತ್ಸಲ್ಯ, ಆದರ್ಶಗುಣಗಳು, ನಿಮ್ಮ ಹಿತನುಡಿಗಳು ನಮ್ಮಲ್ಲಿ ಅಚ್ಚಳಿಯದೆ ಉಳಿದು, ಆಗಿಂದಾಗ್ಯೆ ಮರುಕಳಿಸುತ್ತಿದ್ದು, ನಮ್ಮ ಕಣ್ಣಂಚಿನಲ್ಲಿ ಕಂಬನಿ ಮಿಂಚಿ ಹರಿದು ನಿಮ್ಮ ಅಗಲಿಕೆ ನೋವನ್ನು ತರುತ್ತಿದೆ.

ನಿಮ್ಮ ನಿಷ್ಕಲ್ಮಶ ಅಗೋಚರ ಆತ್ಮಕ್ಕೆ ಆ ಕರುಣಾಮಯಿ ಭಗವಂತನಾದ ಕುಲದೈವ ವೆಂಕಟರಮಣನು ಚಿರಶಾಂತಿ ಯನ್ನು ಕರುಣಿಸಲಿ ಎಂದು ಅನುದಿನವೂ ಪ್ರಾರ್ಥಿಸುತ್ತಿರುವೆವು.

*ದುಃಖತಪ್ತ : ಪತ್ನಿ : ಕಮಲಾಕ್ಷಿ, ಮಕ್ಕಳು : ಕವಿತ, ಸವಿತ, ರೋಷನ್ (ರಾಜ)*
*ಅಳಿಯಂದಿರು : ಹರೀಶ್, ಸತೀಶ್*
*ಮೊಮ್ಮಕ್ಕಳು: ಕೃತಿಕ್ (ಸೋನು) ಧನುಷ್, ಮತ್ತು ಚಿನ್ನು ಹಾಗೂ ಅಪಾರ ಬಂಧುಗಳು. ಬೆಂಗಳೂರು.*

---

# ಪ್ರಥಮ ಚಿರಸ್ಮರಣೆ



ಸುಬೇದಾರ್
ಕೆ.ಪಿ. ಬೆಳ್ಳಿಯಪ್ಪ
ಮರಣ: 4-8-2002

ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರು ನಿಮ್ಮ ಸವಿನೆನಪು, ಪ್ರೀತಿ, ವಾತ್ಸಲ್ಯ ಸಲಹೆ, ಸಹಕಾರ, ಆದರ್ಶಮಯ ಜೀವನ ಶೈಲಿ ಸದಾ ನಮ್ಮ ಹೃದಯದಲ್ಲಿ ಹಸಿರಾಗಿದ್ದು, ಆ ಭಗವಂತನಲ್ಲಿ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ನಿಮ್ಮ ಆದರ್ಶಮಯ ಬದುಕು ನಮಗೆ ದಾರಿದೀಪವಾಗಲೆಂದು ಅನುದಿನವು ಆಶಿಸುವ

*ಪತ್ನಿ : ಕವಿತಾ,*
*ಪುತ್ರ:ಭುವನ್, ಪವನ್,*
*ತಂದೆ: ಪೊನ್ನಪ್ಪ, ತಾಯಿ: ಚಂದ್ರಮ್ಮ*
*ಸಹೋದರರಾದ: ಜಯಕುಮಾರ್, ಅಶ್ವಥಕುಮಾರ್ ಹಾಗೂ ಅತ್ತಿಗೆಯರು*
*ಸಹೋದರಿಯರಾದ : ಉಳುವಾರನ ಲೀಲಾ ಜನಾರ್ಧನ, ಕೆದಂಬಾಡಿ ಶೋಭಾ ಅಶೋಕ*
*ನಂಗಾರು ಸುಲೋಚನ ಮೋಹನ*
*ಪ್ರಕಟಣೆ: ಕಯ್ಯುಮುಡಿ ಅಶ್ವಥ್‌ಕುಮಾರ್, ಲಿಂಗಾಪುರ ಗ್ರಾಮ, ಮುತ್ತೂರು ಅಂಚೆ,*
*ಪಿರಿಯಾಪಟ್ಟಣ ತಾಲ್ಲೋಕು, ಮೈಸೂರು.* **Ph.: 670554**

Reg. No. KA/SK/MYS-88/2003 Registered : 10-01-96 TCI Kar. 09592





**Kodagu Sangathi** Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore-570017. ☎ : 0821/2404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.